

ಸಂತ, ಕಲಾವಿದ

ಋಭರಾಯರು



ಕರ್ನಾಟಕ ಲಲಿತಕಲಾ ಅಕಾಡೆಮಿ

ಸಂತ, ಕಲಾವಿದ ಶ್ರೀ ಶುಭರಾಯರು

(ವಿಚಾರ ಸಂಕಿರಣ ಪ್ರಬಂಧಗಳು)

ಪಿ.ಆರ್. ತಿಪ್ಪೇಸ್ವಾಮಿ

ಪ್ರಧಾನ ಸಂಪಾದಕರು

ಅ.ಲ. ನರಸಿಂಹನ್

ಸಂಪಾದಕರು

ಕರ್ನಾಟಕ ಲಲಿತಕಲಾ ಅಕಾಡೆಮಿ

ಬೆಂಗಳೂರು

Santha, Kalavida Shri Shubharayaru, (Papers presented in the seminar on Shubharaya) Published by : K. Mukundan, Registrar, Karnataka, Lalit Kala Academy, Bangalore - 2

First Print : ***1993***
1000 Copies

Chief Editor : ***P.R. Thippeswamy***

Editor : ***A.L. Narasimhan***

Cover Desigen : ***V.R.C. Shekar***

Price : ***Rs. 15-00***

Printed at :
Rashmi Mudrana
Sudhamnagar
Bangalore - 27

ಅಧ್ಯಕ್ಷರ ಮಾತು

ಕರ್ನಾಟಕ ಲಲಿತಕಲಾ ಅಕಾಡೆಮಿ ಹಲವಾರು ಹೊಸ ಯೋಜನೆಗಳನ್ನು ಹಾಕಿಕೊಂಡು, ಅವುಗಳನ್ನು ಕಾರ್ಯರೂಪಕ್ಕೆ ತರುತ್ತಿರುವುದು ತಿಳಿದ ವಿಷಯವೇ ಆಗಿದೆ. ಅಂತೆಯೇ ಈವರೆಗೆ ಹೆಚ್ಚು ಲಕ್ಷ್ಯ ಕೊಟ್ಟಿಲ್ಲದ, ಆದರೆ ಕಲೆಯ ದೃಷ್ಟಿಯಿಂದ ಮಹತ್ತರವಾದ ಕಲಾಕೃತಿಗಳು ಹಾಗೂ ಕಲಾವಿದರನ್ನು ಪರಿಚಯಿಸುವ ದಿಸೆಯಲ್ಲಿ ಹಲವಾರು ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ರೂಪಿಸಿದೆ. ಈ ಮಾಲಿಕೆಯಲ್ಲಿ ಸಂತ, ಕಲಾವಿದ ಶ್ರೀ ಶುಭರಾಯರನ್ನು ಕುರಿತ ವಿಚಾರ ಸಂಕಿರಣವೊಂದನ್ನು ಸೆಪ್ಟೆಂಬರ್ 1992ರಲ್ಲಿ ಸೊಲ್ಲಾಪುರದಲ್ಲಿ ಸಂಘಟಿಸಲಾಗಿದ್ದು, ಐದು ಜನ ವಿದ್ವಾಂಸರು ತಮ್ಮ ಪ್ರಬಂಧಗಳನ್ನು ಮಂಡಿಸಿದರು. ಆ ಲೇಖನಗಳನ್ನು ಈಗ ಪುಸ್ತಕ ರೂಪದಲ್ಲಿ ಹೊರತರುತ್ತಿದ್ದೇವೆ.

ಈ ಎಲ್ಲ ಮಹನೀಯರುಗಳು ಶುಭರಾಯರ ಮಠದೊಂದಿಗೆ ಸಂಪರ್ಕ ಇರಿಸಿಕೊಂಡವರು ; ಶುಭರಾಯರ ಕಲಾಕೃತಿಗಳನ್ನು ಸಾಕಷ್ಟು ಅಭ್ಯಾಸ ಮಾಡಿದವರು, ಈಗಾಗಲೇ ಈ ಕುರಿತ ಹಲವಾರು ಲೇಖನ, ಪುಸ್ತಕಗಳನ್ನು ರಚಿಸಿರುವವರು, ಶುಭರಾಯರ ಚಿತ್ರಕಲೆ, ಜೀವನ ಕುರಿತು ದಕ್ಷಿಣ ಭಾರತದ ಹಲವಾರು ಕಡೆಗಳಲ್ಲಿ ಸಂಚರಿಸಿ ವಿಷಯ ಸಂಗ್ರಹ ಮಾಡಿದವರು. ಇಂತಹ ಪಂಡಿತೋತ್ತಮರು ನಮಗೆ ದೊರಕಿದುದು ಒಂದು ಪುಣ್ಯ ವಿಶೇಷವೇ ಸರಿ.

ಶುಭರಾಯರ ಬಗ್ಗೆ ಈ ಪುಸ್ತಕ ಹೊರಬರುವ ಬಗ್ಗೆ ಒಂದು ಸಂಗತಿ ಇಲ್ಲಿ ಮನನ ಮಾಡುವುದು ಉಚಿತವಿದೆ. ನಾನು 1991ರ ಡಿಸೆಂಬರ್‌ನಲ್ಲಿ ಬಾದಾಮಿಯ ಒಂದು ಸಮಾರಂಭಕ್ಕೆ ಹೋಗಿ ಹಿಂದಿರುಗುವಾಗ ಹುಬ್ಬಳ್ಳಿಯಲ್ಲಿ ಕಲಾವಿದ ಮಿತ್ರ ಶ್ರೀ ಎನ್.ಸಿ. ದೇಸಾಯಿ ಅವರನ್ನು ಭೇಟಿ ಮಾಡಿದ್ದೆ. ಅವರು ತಾವು ಬರೆದ ಲೇಖನಗಳ ರಾಶಿಯನ್ನೇ ನನ್ನ ಮುಂದೆ ಬಿಚ್ಚಿಟ್ಟು ತೋರಿಸಿದರು. ಪ್ರಕಟವಾದ ಆ ಕಲಾ ಲೇಖನಗಳಲ್ಲಿ ಒಂದೆರಡು ವರ್ಣಚಿತ್ರಗಳು ನನ್ನನ್ನು ಆಕರ್ಷಿಸಿದುವು. ಆ ಬಗೆಗೆ ವಿಚಾರಿಸಿದೆ. ಶುಭರಾಯ ಎಂಬ ಚಿತ್ರಗಾರರ ಬಗ್ಗೆ ಚಿತ್ರಲೇಖನ ಅದು. ಅವರು ಕನ್ನಡಿಗರು, ಸೊಲ್ಲಾಪುರದವರು, ಇನ್ನೂ ಅನೇಕ ಚಿತ್ರಗಳು ಸೊಲ್ಲಾಪುರದ ಅವರ ಬಂಧುಗಳಲ್ಲಿವೆ ಎಂದು ಶುಭರಾಯರ ಬಗೆಗೆ ತಿಳಿಸಿದರು.

ಅಕಾಡೆಮಿಯ ಸ್ಥಾಯಿ ಸಮಿತಿಯ ಮುಂದೆ ಈ ಸಚಿತ್ರ ಲೇಖನ ತಂದೆ. ಶುಭರಾಯರ ಬಗ್ಗೆ ಒಂದು ವಿಚಾರ ಸಂಕರಣ – ಕೃತಿಗಳ ಪ್ರದರ್ಶನ ಮಾಡಲು ಸಮಿತಿಯ ಒಪ್ಪಿಗೆ ಪಡೆದೆ. ವಿಜಾಪುರದಲ್ಲಿ ಅಕಾಡೆಮಿ ಕಲಾವಿದರ ಶಿಬಿರ ಏರ್ಪಡಿಸಬೇಕಿತ್ತು. ನಾನು, ನಮ್ಮ ರಿಜಿಸ್ಟ್ರಾರ್ ಶ್ರೀ ಕೆ. ಮುಕುಂದನ್ ಹಾಗೂ ವಿಜಾಪುರದ ಕಲಾ ಅಧ್ಯಾಪಕರಾದ ಶ್ರೀ ಕಾಚಾಪುರ – ಶಿಬಿರ ಪೂರ್ವಸಿದ್ಧತೆಗಾಗಿ ವಿಜಾಪುರಕ್ಕೆ ಹೋದ ಸಂದರ್ಭ – ಆಗ ಶುಭರಾಯರ ನೆನಪಾಯಿತು. ನಾವು ನೇರ ಸೊಲ್ಲಾಪುರಕ್ಕೆ ಧಾವಿಸಿದೆವು. ಅಲ್ಲಿ ನಮಗೆ ಯಾರ ಪರಿಚಯವೂ ಇರಲಿಲ್ಲ. ಸೊಲ್ಲಾಪುರದಲ್ಲಿರುವ ಶ್ರೀ ಸಿದ್ಧೇಶ್ವರ ಪ್ರೌಢಶಾಲೆಯ ಪ್ರಿನ್ಸಿಪಾಲರನ್ನು ಭೇಟಿ ಮಾಡಿದೆವು. ಶುಭರಾಯರ ಬಗ್ಗೆ ವಿಚಾರಿಸಿದೆವು. ಅವರು ತಮ್ಮ ಶಾಲೆಯ ಡ್ರಾಯಿಂಗ್ ಟೀಚರ್ ಶ್ರೀ ಮಲ್ಲಿಕಾರ್ಜುನ ಬಿಳಗುಂದಿ ಅವರನ್ನು ಪರಿಚಯಿಸಿದರು. ಶ್ರೀ ಬಿಳಗುಂದಿ ಅವರು ನಮ್ಮನ್ನು ಶ್ರೀ ಪಿ.ಜೆ. ಬುವಾ ಅವರ ಮನೆಗೆ ಕರೆತಂದರು. ರಣಬಿಸಿಲು. ನಡೆದೇ ಹೋದೆವು.

ಪತ್ರಿಕೋದ್ಯೋಗಿ ಶ್ರೀ ಪಿ.ಜೆ. ಬುವಾ ನಮ್ಮನ್ನು ಸ್ವಾಗತಿಸಿದರು. ಚಹಾ ಮಾಡಿಸಿಕೊಟ್ಟರು. ಅಲ್ಲಿ ಹತ್ತಾರು ಶುಭರಾಯರ ಚಿತ್ರಗಳನ್ನು ಗೋಡೆಗಳಲ್ಲಿ ತೂಗುಹಾಕಲಾಗಿತ್ತು. ಶುಭರಾಯರ ಕೃತಿಗಳ ಪ್ರದರ್ಶನ ಹಾಗೂ ವಿಚಾರ ಸಂಕಿರಣ ಮಾಡುವ ನಮ್ಮ ಆಲೋಚನೆ ಅವರ ಮುಂದೆ ಇರಿಸಿದೆವು. ಶ್ರೀ ಬುವಾ ಅವರು ಬಹಳ ಸಂತೋಷದಿಂದ ಒಪ್ಪಿದರು. ಅಷ್ಟೇ ಅಲ್ಲ, ಇದರ ಬಗ್ಗೆ ಎಲ್ಲ ಸಿದ್ಧತೆಯನ್ನು, ಪತ್ರ ವ್ಯವಹಾರವನ್ನು ಮಾಡುವುದಾಗಿ ಒಪ್ಪಿದರು. 6–9–92ರಂದು ವಿಚಾರಸಂಕಿರಣ ನಡೆಸಲು ನಿರ್ಧರಿಸಲಾಯಿತು. ಭಾಷಣಕಾರರನ್ನು ಅವರೇ ಒಪ್ಪಿಸುವ ಇತ್ಯಾದಿ ಸಮಾರಂಭದ ಎಲ್ಲ ಕೆಲಸವನ್ನು ತಾವೇ ಅಚ್ಚುಕಟ್ಟಾಗಿ ಮಾಡಿದರು. ಅಕಾಡೆಮಿಗೆ ಕೀರ್ತಿ ತಂದರು. ಆದರೆ ನಮ್ಮ ದುರ್ದೈವ ಈ ಪುಸ್ತಕ ಪ್ರಕಟವಾಗುವ ಮೊದಲೇ ಮಾರ್ಚ್ 1993ರಲ್ಲಿ ಶ್ರೀ ಬುವಾ ಅವರು ನಮ್ಮನ್ನು ಅಗಲಿದರು.

ಗಡಿನಾಡಿನಲ್ಲಿನ ಉತ್ತಮ ಕಾರ್ಯ ಈ ವಿಚಾರ ಸಂಕಿರಣವಾಗಿತ್ತು. ಮಹಾರಾಷ್ಟ್ರ ಸರ್ಕಾರ ಶುಭರಾಯರ ಹೆಸರಿನಲ್ಲಿ 'ಶುಭರಾಯ ಆರ್ಟ್ಸ್ ಗ್ಯಾಲರಿ'ಯೊಂದನ್ನು ನಿರ್ಮಿಸಿದೆ. ಕನ್ನಡ ಕಲಾವಿದರಿಗೆ ಮಹಾರಾಷ್ಟ್ರ ಜನತೆ ನೀಡಿದ ದೊಡ್ಡ ಗೌರವ ಇದಾಗಿದೆ. ಈ ಗ್ಯಾಲರಿಯಲ್ಲಿ ಶುಭರಾಯರನ್ನೇ ಕುರಿತು ವಿಚಾರ ಸಂಕಿರಣ ನಡೆಸಿದ್ದು ಅಕಾಡೆಮಿ ಹೆಮ್ಮೆ ಪಡುವ ಸಂಗತಿಯಾಗಿದೆ.

ಈ ವಿಚಾರಸಂಕಿರಣದಲ್ಲಿ ಭಾಗವಹಿಸಿ ಮೌಲಿಕ ಲೇಖನಗಳನ್ನು ಮಂಡಿಸಿದ ಶ್ರೀಯುತರುಗಳಾದ ಶ್ರೀ ಪಿ.ಜೆ. ಬುವಾ, ಶ್ರೀ ಡಿ. ಬಾಬೂರಾವ್ ಸಾದ್ವೇಲ್ಕರ್, ಪ್ರೊ. ಸಿ.ಡಿ. ಜೋಷಿ, ಡಾ. ಭಗವಾನ್ ದಾಸ್ ತಿವಾರಿ ಹಾಗೂ ಶ್ರೀ ಎನ್.ಸಿ. ದೇಸಾಯಿಯವರಿಗೆ ಅಕಾಡೆಮಿಯ ಪರವಾಗಿ ಹೃತ್ಪೂರ್ವಕವಾದ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಪಿ.ಆರ್. ತಿಪ್ಪೇಸ್ವಾಮಿ

ಅಧ್ಯಕ್ಷರು

ಸಂಪಾದಕರ ಮಾತು

ಸಾಧು–ಸಂತರುಗಳನ್ನು ಕರ್ನಾಟಕವು ಆಕರ್ಷಿಸಿದಂತೆ, ಇಲ್ಲಿಂದಲೂ ಹಲವಾರು ಪುಣ್ಯ ಪುರುಷರು ಹೊರನಾಡುಗಳಿಗೆ ಹೋಗಿ ಜಯಭೇರಿ ನುಡಿಸಿದ್ದಾರೆ. ಸನ್ಯಾಸಿಗಳು, ಧರ್ಮಪ್ರಸಾರಕರು ಹಲವಾರು ಕಲೆಗಳನ್ನು ತಮ್ಮ ಉದ್ದೇಶಕ್ಕಾಗಿ ಬಳಸಿಕೊಂಡಿದ್ದಾರೆ. ಅಂತೆಯೇ ಅಕ್ಬರನ ಆಸ್ಥಾನದಲ್ಲಿದ್ದು 'ರಾಗ ಮಾಲ' ಸೇರಿದಂತೆ ಹಿಂದೂಸ್ಥಾನಿ ಸಂಗೀತ ಕುರಿತು ನಾಲ್ಕೈದು ಗ್ರಂಥಗಳನ್ನು ರಚಿಸಿದ ಪುಂಡಲೀಕ ವಿಠಲ, ಮಾಗಡಿ ಬಳಿಯ ಸಾತನೂರಿನವನಾಗಿದ್ದು, ಶುಭರಾಯರಿಗೆ ಸರಿಮಿಗಿಲಾದ ವ್ಯಕ್ತಿ. ಶುಭರಾಯರೂ 147 ಪದ್ಯ (ಅಭಂಗ)ಗಳನ್ನು ರಚಿಸಿದ್ದು, ಅವುಗಳಲ್ಲಿ 64 ರಾಗ–ರಾಗಿಣಿಯರ ಬಳಕೆಯಾಗಿದೆ. ಇನ್ನೊಬ್ಬ ದಾಸವರೇಣ್ಯರಾದ ಗೋಪಾಲದಾಸರು ಅಷ್ಟವರ್ಣಗಳನ್ನು ಬಳಸಿಕೊಂಡು ಧ್ಯಾನೋಪಾಸನ ವಿರಾಡ್ರೂಪ ಚಿತ್ರವನ್ನು ರಚಿಸಿದುದಾಗಿ ತಿಳಿದು ಬರುತ್ತದೆ. (ಡಾ. ಬಿ.ಕೆ. ಹಿರೇಮಠ, ಕನ್ನಡ ಹಸ್ತಪ್ರತಿಗಳು, ಪುಟ 223) ಕವಿ ಹೃದಯದಿಂದ ಆಧ್ಯಾತ್ಮ ನೆಲೆಯಲ್ಲಿ ಚಿಂತಿಸುತ್ತಿದ್ದ ಜಾರ್ಜ್ ಕೀಟ್, ವಿಲಿಯಂ ಬ್ಲೇಕ್, ಖಲೀಲ್ ಗಿಬ್ರಾನ್ ಮುಂತಾದ ಅನೇಕ ಪುಣ್ಯ ಪುರುಷರು ಚಿತ್ರ ಕಲಾವಿದರೂ ಆಗಿದ್ದರು. ಮಂಗಳೂರಿನ ಸೆಂಟ್ ಅಲಾಯಸಿಸ್ ಚರ್ಚ್‌ನಲ್ಲಿ ನೂರಾರು ಚಿತ್ರಗಳನ್ನು ರಚಿಸಿದಾತ ಆ್ಯಂಟೋನಿ ಮೋಶ್ಚಿನಿ ಎಂಬ ಕ್ರೈಸ್ತ ಧರ್ಮ ಪ್ರಸಾರಕ. ಇಂತಹ ಇನ್ನೂ ಹಲವಾರು ಉದಾಹರಣೆಗಳನ್ನು ನೀಡಬಹುದು. ಶುಭರಾಯರಂತೆಯೇ ಈ ಸಾಧು–ಸನ್ಯಾಸಿಗಳು ಕಲೆಯ ಮೂಲಕ ದೈವತ್ವವನ್ನು ಕಂಡವರು. ಇಂತಹ ಮಹಿಮಾವಂತರಲ್ಲಿ ಒಬ್ಬರಾದ ಶುಭರಾಯರು ಕನ್ನಡ ನಾಡಿನವರಾಗಿದ್ದರೆಂಬುದೇ ಹೆಮ್ಮೆ ತರುವ ಸಂಗತಿ.

ಶುಭರಾಯರು ಆಧ್ಯಾತ್ಮ ಜೀವನವನ್ನು ಹುಡುಕಿಕೊಂಡು ಸೊಲ್ಲಾಪುರಕ್ಕೆ ಹೋಗಿದ್ದು 1792ರಲ್ಲಿ (ಜೋಶಿಯವರ ಪ್ರಕಾರ 1780). ಈ ಸಂದರ್ಭದ ನೆನಪಿಗೆಂಬಂತೆ ಎರಡು ಶತಮಾನಗಳ ನಂತರ 1992ರಲ್ಲಿ ಸೊಲ್ಲಾಪುರದಲ್ಲಿ ಶುಭರಾಯರ ಮಠದಲ್ಲಿಯೇ ಅವರ ಜೀವನ ಹಾಗೂ ಕಲೆಯನ್ನು ಕುರಿತ ವಿಚಾರ ಸಂಕಿರಣವನ್ನು ಕರ್ನಾಟಕ ರಾಜ್ಯ ಲಲಿತಕಲಾ ಅಕಾಡೆಮಿಯವರು ಏರ್ಪಡಿಸಿದ್ದು ಒಂದು ಯೋಗಾಯೋಗ. ಇದೇ ವೇಳೆಯಲ್ಲಿ ಮಂಡಿಸಿದ ಪ್ರಬಂಧಗಳು ಇಲ್ಲಿ ಪುಸ್ತಕ ರೂಪದಲ್ಲಿ ಹೊರಬರುತ್ತಿದೆ.

ಈ ಲೇಖನಗಳನ್ನು ಸಂಪಾದಿಸಿದೆ ಎನ್ನುವುದಕ್ಕಿಂತ ಒಂದೆಡೆ ಕಲೆಹಾಕಿ ಕೊಟ್ಟಿದೆ ಎಂದು ಹೇಳುವುದೇ ಸೂಕ್ತ. ಈ ಮಹನೀಯರೆಲ್ಲಾ ಶುಭರಾಯರ ಜೀವನ ಹಾಗೂ ಕಲೆಯನ್ನು ಕುರಿತು ಸಾಕಷ್ಟು ಅಭ್ಯಾಸ ಮಾಡಿದ್ದಾರೆ. ವಿಭಿನ್ನ ದೃಷ್ಟಿಯಲ್ಲಿ ನೋಡಿದ್ದಾರೆ. ಅವೆಲ್ಲದರ ಸಾರಸಂಗ್ರಹ ರೂಪದಲ್ಲಿ ಪ್ರಬಂಧಗಳನ್ನು ಮಂಡಿಸಿದ್ದಾರೆ. ಹಲವಾರು ನಿಟ್ಟುಗಳಿಂದ ಒಬ್ಬ ಕಲಾವಿದನನ್ನು ಆತನ ಕೃತಿಗಳನ್ನು ಪರೀಕ್ಷಿಸುವ ಕೆಲಸ ಕನ್ನಡದ ಮಟ್ಟಿಗೆ ಇದೇ ಮೊದಲ ಪ್ರಯತ್ನ. ಇಲ್ಲಿಯ ಲೇಖನಗಳು ಕೇವಲ ಪರಿಚಯಾತ್ಮಕತೆ ಯನ್ನೂ ಮೀರಿ ಶುಭರಾಯರ ಕಾಲದ ರಾಜಕೀಯ ಹಾಗೂ ಸಾಮಾಜಿಕ ನೆಲೆಗಳಿಂದ ಶೋಧನೆಯಾಗಿವೆಯಲ್ಲದೆ ಭಾರತದ ಹಲವಾರು ಜನಪದ ಹಾಗೂ ಸಂಪ್ರದಾಯ ಚಿತ್ರಗಳೊಂದಿಗೆ ಶುಭರಾಯರ ಚಿತ್ರಗಳನ್ನು ಹೋಲಿಸಿ ನೋಡಿದೆ. ಮನೋವೈಜ್ಞಾನಿಕ ಪಾತಳಿಯಿಂದ, ಊರ್ಧ್ವ ಹಾಗೂ ಸಮಸ್ತರ ಮಾಹಿತಿಗಳಿಂದ ವಿಸ್ತಾರವಾಗಿ ಅಧ್ಯಯನ ಮಾಡಲಾಗಿದೆ. ಈ ಲೇಖನಗಳನ್ನು ಓದುತ್ತಿದ್ದಂತೆ ಶುಭರಾಯರ ಜೀವನ ಹಾಗೂ ಕಲಾಕೃತಿಗಳು ಕಣ್ಣಮುಂದೆ ನಿಲ್ಲುತ್ತವೆ, ಗ್ರಾಹ್ಯವಾಗುತ್ತವೆ. ಶುಭರಾಯರ ಚಿತ್ರಗಳನ್ನು ಸುಮಾರು ಅದೇ ಕಾಲದ ಭಿತ್ತಿ ಹಾಗೂ ಜನಪದ ಚಿತ್ರಗಳೊಂದಿಗೆ ಹೋಲಿಸಿ ನೋಡಿದೆ ಯಲ್ಲದೆ; ಟಿಪ್ಪಣಿ ರೂಪದ ಲೇಖನವೊಂದನ್ನು ಕೊನೆಯಲ್ಲಿ ಕೊಡಲಾಗಿದೆ.

ಮಹಾರಾಷ್ಟ್ರ ರಾಜ್ಯ ಸರ್ಕಾರವು ಶುಭರಾಯರ ಅರವತ್ತಕ್ಕೂ ಹೆಚ್ಚು ಕಲಾಕೃತಿಗಳನ್ನು ವರ್ಣಮಯವಾಗಿ ಅಚ್ಚುಮಾಡಿ ಪುಸ್ತಕ ರೂಪದಲ್ಲಿ, ಧ್ಯಾನೇಶ್ವರ ನಾಡಕರ್ಣಿಗಳ ಸಂಪಾದಕತ್ವದಲ್ಲಿ 'ಚಿತ್ರ ಚಿರಂತನ' ಎಂಬ ಹೆಸರಿನಿಂದ 1988ರಲ್ಲಿಯೇ ಪ್ರಕಟಿಸಿದ್ದು, ಈಗ ಪುಸ್ತಕ ಅಲಭ್ಯವಾಗಿದೆ. ಈ ಬಗೆಯ ಪುಸ್ತಕವನ್ನು ಕನ್ನಡದಲ್ಲಿಯೂ ಹೊರತರುವ ಅವಕಾಶವಿದ್ದು, ಪ್ರಸ್ತುತ ಪ್ರಬಂಧಗಳ ಸಂಕಲನ ನಮ್ಮ ಮೊದಲ ಪ್ರಯತ್ನವಾಗಿದೆ.

ಲೇಖಕರುಗಳಲ್ಲಿ ದೇಸಾಯಿ ಹಾಗೂ ಜೋಶಿಯವರು ಕನ್ನಡದಲ್ಲಿಯೇ ಲೇಖನ ಗಳನ್ನು ನೀಡಿದ್ದು ಉಳಿದ ಮೂರು ಲೇಖನಗಳಲ್ಲಿ ಎರಡನ್ನು ಕೆ.ಎಸ್. ರಾಧಾಕೃಷ್ಣರವರೂ ಒಂದನ್ನು ಮುಳ್ಳಹಳ್ಳಿ ಸೂರಿ ಅವರೂ ಅನುವಾದಿಸಿ ಕೊಟ್ಟಿದ್ದಾರೆ. ಮೂಲ ಲೇಖಕರಿಗೂ ಹಾಗೂ ಅನುವಾದಕರಿಗೂ ನಮ್ಮ ಧನ್ಯವಾದಗಳು. ಈ ಒಂದು ಅವಕಾಶ ನೀಡಿದ ಅಕಾಡೆಮಿಯ ಅಧ್ಯಕ್ಷರು, ರಿಜಿಸ್ಟ್ರಾರ್, ಸಿಬ್ಬಂದಿ ವರ್ಗದವರು ಹಾಗೂ ಉಳಿದ ಸದಸ್ಯರುಗಳಿಗೂ ನನ್ನ ವಂದನೆಗಳು.

ಅ.ಲ. ನರಸಿಂಹನ್

ಸಂಪಾದಕ

ಪ ರಿ ವಿ ಡಿ



ದೈವೀಕ ಕಲಾವಿದ ಶ್ರೀ ಶುಭರಾಯರು

ಪಿ.ಜಿ. ಬುಸಾ

ಸಂಗೀತವು ಮಾನವನ ಬದುಕನ್ನು ಪರಿಪೂರ್ಣಗೊಳಿಸುವ ಕಲೆಯೆಂದು ವಿಶ್ವ ವಿಖ್ಯಾತ ಸಂಗೀತಗಾರ ಯಹೂದಿ ಮೆನೂಹಿನ್ ಅಭಿಪ್ರಾಯಪಟ್ಟಿದ್ದಾನೆ. ಮೆನೂಹಿನ್ ಸಂಗೀತದ ಬಗೆಗೆ ಹೇಳಿರುವಂತೆಯೇ ಚಿತ್ರಕಲೆಯೂ ಕೂಡ ಮಾನವನ ಬದುಕನ್ನು ಪರಿಪೂರ್ಣಗೊಳಿಸುವ ದಿವ್ಯ ಕಲೆಯಾಗಿದೆ.

ಪ್ರಸ್ತುತ ವರ್ಷ (೧೯೯೨) ಸೊಲ್ಲಾಪುರ ನಗರವು ಸಂತ, ಕವಿ, ಚಿತ್ರಕಾರ – ಹೀಗೆ ಬಹುಮುಖ ಪ್ರತಿಭಾಶಾಲಿಯಾಗಿದ್ದ ಶ್ರೀ ಶುಭರಾಯ ಮಹಾರಾಜರ ದ್ವಿಶತ ಮಾನೋತ್ಸವವನ್ನು ಅರ್ಥಪೂರ್ಣ ರೀತಿಯಲ್ಲಿ ಆಚರಿಸುತ್ತಿದೆ. ಈ ಸಂದರ್ಭಕ್ಕೆ ಪೂರಕವಾಗಿ ಕರ್ನಾಟಕ ಲಲಿತಕಲಾ ಅಕಾಡೆಮಿಯು ಸೊಲ್ಲಾಪುರದಲ್ಲಿ "ಶ್ರೀ ಶುಭರಾಯ ಮತ್ತು ಅವರ ಚಿತ್ರಕಲೆ" ಕುರಿತು ವಿಚಾರ ಸಂಕಿರಣವನ್ನು ಏರ್ಪಡಿಸಿದ್ದುದು ಈ ಸಂತ ಚಿತ್ರಕಾರನಿಗೆ ಅಕಾಡೆಮಿಯು ನಿಜವಾದ ಅರ್ಥದಲ್ಲಿ ಗೌರವ ಸಲ್ಲಿಸಿದಂತಾಗಿದೆ.

ಶುಭರಾಯರು ಕರ್ನಾಟಕದಲ್ಲಿ ತೆಲುಗು ಮಾತನಾಡುವ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದವರು. ಆಗಿನ ಸಂಪ್ರದಾಯದಂತೆ ಅವರು ವೇದಗಳನ್ನು ಚೆನ್ನಾಗಿ ಅಧ್ಯಯನ ಮಾಡಿದ್ದರು. ಸೂಕ್ತ ವಿದ್ಯಾಭ್ಯಾಸದ ಬಳಿಕ ಶುಭರಾಯರು ತಮ್ಮ ಯೌವ್ವನಾವಸ್ಥೆಯಲ್ಲಿ ಮೈಸೂರಿನ ಹುಲಿ ಟಿಪ್ಪುಸುಲ್ತಾನನ ದರ್ಬಾರು ಸೇರಿದವರು. ಅದ್ಭುತ ಪ್ರತಿಭಾ ಸಂಪನ್ನರಾಗಿದ್ದ ಶುಭರಾಯರು ಅಲ್ಪಾವಧಿಯಲ್ಲೇ ಟಿಪ್ಪುಸುಲ್ತಾನನ ಆಸ್ಥಾನದಲ್ಲಿ ಅತ್ಯುನ್ನತ ಪದವಿಯಾಗಿದ್ದ ಪ್ರಧಾನಮಂತ್ರಿ ಪಟ್ಟವನ್ನು ಅಲಂಕರಿಸಿದರು. ಹೀಗಾಗಿ ಶುಭರಾಯರು ಕರ್ನಾಟಕದವರಾದರೂ ಸಂಸ್ಕೃತ, ತೆಲುಗು ಮತ್ತು ತಮಿಳು ಭಾಷೆಗಳಲ್ಲದೆ ಕನ್ನಡ, ಉರ್ದು, ಪಾರ್ಸಿ ಭಾಷೆಗಳನ್ನೂ ಅವರು ಬಲ್ಲವರಾಗಿದ್ದರು.

ಟಿಪ್ಪೂ ದರ್ಬಾರಿನಲ್ಲಿ ಸಂಭವಿಸಿದ ಒಂದು ಘಟನೆಯಿಂದ ಶುಭರಾಯರು ತಮ್ಮ ಹುದ್ದೆ ಹಾಗೂ ಸುಲ್ತಾನನ ರಾಜ್ಯವನ್ನೇ ತೊರೆದು ಸೊಲ್ಲಾಪುರಕ್ಕೆ ಆಗಮಿಸಿದರು.

ಸೊಲ್ಲಾಪುರವು ಅವರಿಗೆ ಸ್ಫೂರ್ತಿಯ ತಾಣವಾಯಿತು. ಅವರು ೧೮೨೦ ರಲ್ಲಿ ಸ್ವರ್ಗಸ್ಥರಾಗುವವರೆಗೂ ಸೊಲ್ಲಾಪುರದಲ್ಲೇ ನೆಲೆಸಿದರು.

ಶುಭರಾಯರು ಸೊಲ್ಲಾಪುರಕ್ಕೆ ಆಗಮಿಸುವ ಕಾಲಕ್ಕೆ ಪೇಶ್ವೆಗಳ ಆಡಳಿತ ತನ್ನ ಕೊನೆಯ ದಿನಗಳನ್ನು ಎಣಿಸುತ್ತಿತ್ತು. 'ಕ್ರಾಂತಿನಗರ'ವೆಂದು ಹೇಳಲಾಗುವ ಸೊಲ್ಲಾಪುರವನ್ನು ಶುಭರಾಯರು ಸಮಾಧಿ ಹೊಂದುವುದಕ್ಕೆ ಎರಡು ವರ್ಷ ಮೊದಲು ಬ್ರಿಟಿಷರು ತಮ್ಮ ವಶಕ್ಕೆ ತೆಗೆದುಕೊಂಡರು.

ಟಿಪ್ಪುಸುಲ್ತಾನನ ಆಸ್ಥಾನದಲ್ಲಿ ಉಪ ಪ್ರಧಾನಮಂತ್ರಿಯಂಥ ಉನ್ನತ ಹುದ್ದೆಯನ್ನು ಅಲಂಕರಿಸಿದ್ದ ಶುಭರಾಯರು ಸೊಲ್ಲಾಪುರವನ್ನು ಒಬ್ಬ ಸರಳ ಸನ್ಯಾಸಿಯಾಗಿ ಪ್ರವೇಶಿಸಿದರು. ಅವರಲ್ಲಿ ಉಂಟಾದ ಈ ದಿಢೀರ್ ಬದಲಾವಣೆಗೆ ಅವರ ಅಂತರ್‌ವಾಣಿಯೇ ಕಾರಣ. ಶುಭರಾಯರಿಗೆ ಮಾತ್ರ ಅಂತರ್‌ವಾಣಿಯ ಪ್ರಭಾವ, ಹರವು ಹಾಗೂ ಓಘದ ಅರಿವಾಗಿತ್ತು. ಆದರೆ ಶುಭರಾಯರು ಕೇವಲ ಕಾಷಾಯಧಾರಿ ಸನ್ಯಾಸಿಯಾಗಿದ್ದವರಲ್ಲ. ಅವರು ನಿಜವಾದ ಅರ್ಥದಲ್ಲಿ ಸನ್ಯಾಸಿಯಾಗಿದ್ದರು. ಆಧ್ಯಾತ್ಮಿಕ ಪರಮಾನಂದವನ್ನು ಅವರು ಗಳಿಸಿದರು. ಬಾಹ್ಯ ಆಡಂಬರಗಳಲ್ಲಿ ಅವರಿಗೆ ಎಳ್ಳಷ್ಟೂ ನಂಬಿಕೆ ಇರಲಿಲ್ಲ. ಇಂತಹ ಆಧ್ಯಾತ್ಮಿಕ ಪರಮಾನಂದವನ್ನು ಪಡೆಯಲು ಕಲೆಯೊಂದೇ ಪ್ರಮುಖ ಅಸ್ತ್ರ ಎಂದು ಅವರು ದೃಢವಾಗಿ ನಂಬಿದರು.

ಶುಭರಾಯರು ಕವಿ ಮಾತ್ರವಲ್ಲ; ಮಹಾನ್ ಸಂಗೀತಗಾರರಾಗಿದ್ದರು. ಪರಿಣತಿ ಪಡೆದ ನೃತ್ಯಪಟುವಾಗಿದ್ದರು ಹಾಗೂ ಸಮರ್ಪಣಾ ಭಾವದ ಚಿತ್ರಕಲಾವಿದರಾಗಿದ್ದರು. ಅವರಿಗೆ ಪ್ರಾರಂಭದಿಂದಲೂ ಆಡಳಿತ – ದರ್ಬಾರಿಗಿಂತ ಕಲೆಗಳಲ್ಲಿಯೇ ಹೆಚ್ಚು ಅಭಿರುಚಿ. ಸನ್ಯಾಸಿಯಾದ ಮೇಲೂ ಶುಭರಾಯರು ತಮ್ಮಲ್ಲಿ ಅಂತರ್ಗತವಾಗಿದ್ದ ಕವಿ, ಸಂಗೀತಗಾರ, ಚಿತ್ರಕಲಾವಿದ ನೃತ್ಯಪಟುವನ್ನು ಅವಸಾನಗೊಳ್ಳಲು ಅವಕಾಶ ನೀಡಲಿಲ್ಲ.

ಕಲೆಯು ಸೌಂದರ್ಯವನ್ನು ಅಭಿವ್ಯಕ್ತಿಸುವ ಮಾಧ್ಯಮ. ಬದುಕಿನ ಉನ್ನತ ಮೌಲ್ಯಗಳನ್ನು ಕಲೆ ಪ್ರತಿನಿಧಿಸುತ್ತದೆ ಎಂಬುದನ್ನು ಸಾರಿದ ಶುಭರಾಯರು ಇಡೀ ವಿಶ್ವಕ್ಕೆ ತಮ್ಮ ಕಲೆಯಿಂದ ವಿಶಿಷ್ಟ ಕೊಡುಗೆಯನ್ನು ನೀಡಿದ್ದಾರೆ. ಶುಭರಾಯರ 200 ವರ್ಷಗಳಷ್ಟು ಹಳೆಯದಾದ ಅಮೂಲ್ಯ ಚಿತ್ರಕಲಾ ಸಂಪತ್ತು ವಿಶ್ವದ ಕಲಾವಿದರು, ಕಲೋಪಾಸಕರು ಹಾಗೂ ಕಲಾ ವಿಮರ್ಶಕರಿಗೆ ಸ್ಫೂರ್ತಿಯ ಸೆಲೆಯಾಗಿದೆ. ಸೌಂದರ್ಯದ ಖಣಿಯಾಗಿರುವ ಈ ಕಲಾಕೃತಿಗಳು ಸದಾ ಸಂತಸವನ್ನು ಬೀರುವ ಅಮರ ಕೃತಿಗಳಾಗಿವೆ.

ಶುಭರಾಯರು ಸೊಲ್ಲಾಪುರದಲ್ಲಿ ತಂಗಿದುದು ಕೇವಲ 30ರಿಂದ 35 ವರ್ಷ ಕಾಲ ಮಾತ್ರ. ಆದರೆ ಅವರ ಬದುಕಿನ ಈ ಅವಧಿ ಸೊಲ್ಲಾಪುರ ನಗರದ ಇತಿಹಾಸದಲ್ಲೇ ಅತ್ಯಂತ ಪ್ರಮುಖ ಘಟ್ಟವಾಯಿತು. ಈ ಅವಧಿಯಲ್ಲೇ ಭಾರತದ

ಅತ್ಯಂತ ಸೃಜನಶೀಲ ಕಲಾವಿದನೊಬ್ಬನು ಸ್ವರ್ಗದಿಂದ ವರವಾಗಿ ಇಳಿದುಬಂದು ಕುಂಚದಿಂದ ಸುಲಲಿತವಾಗಿ ಅಮರ ಕೃತಿಗಳನ್ನು ರಚಿಸಿದ್ದು ಎಂಬುದು ಗಮನಾರ್ಹ. ಶುಭರಾಯರು ವಿಠ್ಠಲನ ಆರಾಧಕರಾಗಿದ್ದರು. ಆದರೆ ಅವರು ಇತರ ಸನ್ಯಾಸಿಗಳಂತೆ ತಮ್ಮ ಇಷ್ಟ ದೇವರ ಆರಾಧನೆಗೆ ಸಾಂಪ್ರದಾಯಿಕ ಮಾರ್ಗಗಳನ್ನು ಅನುಸರಿಸಲಿಲ್ಲ. ಅವರು ವಿಭಿನ್ನ ಹಾಗೂ ವಿಶಿಷ್ಟ ಶೈಲಿ. ಪದ್ಯ, ಚಿತ್ರಕಲೆ, ಸಂಗೀತ ಮತ್ತು ನೃತ್ಯದ ಮೂಲಕ ತಮ್ಮಲ್ಲಿ ಅಂತರ್ಗತವಾಗಿದ್ದ ಆರಾಧನೆಯ ಭಾವಗಳಿಗೆ ಅವರು ಅಭಿವ್ಯಕ್ತಿ ನೀಡಿದರು.

ರಾಮಾಯಣ ಮತ್ತು ಮಹಾಭಾರತ ಭಾರತದ ಮಹಾ ಎರಡು ಕಾವ್ಯಗಳು. ಈ ಮಹಾಕಾವ್ಯಗಳಲ್ಲಿ ಬರುವ ಕಥಾನಕಗಳು, ಅದರಲ್ಲೂ ಪ್ರಮುಖವಾಗಿ ಕೃಷ್ಣನ ಲೀಲೆಗಳು, ಅನಾದಿಕಾಲದಿಂದಲೂ ಕವಿಗಳು, ಚಿತ್ರಕಾರರು, ನೃತ್ಯಪಟುಗಳು ಹಾಗೂ ಸಂಗೀತಗಾರರಿಗೆ ಹೊಸ ಹೊಸ ಕೃತಿಗಳನ್ನು ರಚಿಸಲು ಸ್ಫೂರ್ತಿಯಾಗಿವೆ. ಸಂತ ಶುಭರಾಯರೂ ಇದಕ್ಕೆ ಹೊರತಾಗಿರಲಿಲ್ಲ. ಅವರು ಸೊಲ್ಲಾಪುರದಲ್ಲಿ ನೆಲೆಸಿದ್ದ ಕಾಲದಲ್ಲಿ ಎಲ್ಲಾ ಅತಿಮಾನವ ಗುಣಗಳೂ ಅವರಲ್ಲಿ ಮನೆ ಮಾಡಿದ್ದವು.

ಶುಭರಾಯರ ಅಮೂಲ್ಯ ಕಲಾ ಸಂಪತ್ತು ಮರದ ಪೆಟ್ಟಿಗೆಯೊಂದರಲ್ಲಿ ಸುಮಾರು ಒಂದು ಶತಮಾನದಷ್ಟು ಕಾಲ ಬಹಳ ನಿರ್ಲಕ್ಷಿತ ಸ್ಥಿತಿಯಲ್ಲಿ ಅಡಗಿಹೋಗಿತ್ತು. ಸುದೈವವೊ ಎಂಬಂತೆ ಒಂದು ಕೋಣೆಯ ಮೂಲೆಯಲ್ಲಿಡಲಾಗಿದ್ದ ಮರದ ಪೆಟ್ಟಿಗೆಯ ಮೇಲೆ ಶಿಥಿಲಗೊಂಡ ಗೋಡೆ ಕುಸಿದು ಬಿದ್ದುದರಿಂದ ಈ ಅಮೂಲ್ಯ ಕಲಾಕೃತಿಗಳು ಬೆಳಕಿಗೆ ಬಂದವು :

ಶುಭರಾಯರ ಬಹುತೇಕ ಕಲಾಕೃತಿಗಳ ವಸ್ತು ಕೃಷ್ಣನ ಲೀಲೆಗಳು. ಅವುಗಳನ್ನು ಚಿಕಣಿ ಚಿತ್ರ ಶೈಲಿ ಎಂದು ವರ್ಗೀಕರಿಸಬಹುದು.

ಚಿಕಣಿ ಚಿತ್ರಗಳ ಮೂರು ಪ್ರಮುಖ ಗುಣಗಳೆಂದರೆ – ಖಚಿತ ಅಂಗಸ್ವರೂಪ, ಮನೋಹರವಾದ ರೇಖಾವಿನ್ಯಾಸ ಹಾಗೂ ಭಾವಪೂರ್ಣ ಮುಖಾಭಿವ್ಯಕ್ತಿ. ಚಿಕಣಿ ಚಿತ್ರಕಲೆಯ ಈ ಮೂಲಭೂತ ಗುಣಗಳು ಶುಭರಾಯರ ಎಲ್ಲಾ ಕಲಾಕೃತಿಗಳಲ್ಲೂ ಪ್ರಧಾನವಾಗಿ ಮೇಳೈಸಿವೆ. ಈ ಕೃತಿಗಳು ಕೃಷ್ಣನಲೀಲೆಗಳನ್ನು ವಿವಿಧ ಹಂತಗಳಲ್ಲಿ ಹಾಗೂ ವಿಭಿನ್ನ ಅವಸ್ಥೆಗಳಲ್ಲಿ ಬಿಂಬಿಸಿವೆ.

ಬಾಲಕೃಷ್ಣ ತುಂಟ ಹುಡುಗ. ಅವನ ಚೇಷ್ಟೆಗಳು ಅವನ ತಾಯಿ ಯಶೋಧೆ ಹಾಗೂ ಗೋಪಿಕೆಯರನ್ನು ಒಮ್ಮೊಮ್ಮೆ ಹತಾಶರನ್ನಾಗಿ; ಮತ್ತೊಮ್ಮೆ ಆನಂದಭರಿತರನ್ನಾಗಿ ಮಾಡುತ್ತವೆ. ಹಾಲು, ಮೊಸರು ಮತ್ತು ಬೆಣ್ಣೆಯನ್ನು ಕದಿಯುವುದು ಅವನ ಜನ್ಮಸಿದ್ಧ ಹಕ್ಕು. ತಾವು ಸಂಗ್ರಹಿಸಿದ ಹಾಲು, ಮೊಸರು ಹಾಗೂ ಬೆಣ್ಣೆಯನ್ನು ಮಾರಲು ಮಥುರೆಗೆ ಹೊರಟ ಗೋಪಿಕೆಯರನ್ನು ಅಡ್ಡಗಟ್ಟಿ ಕೊಳ್ಳೆ ಹೊಡೆಯುತ್ತಾನೆ ಈ ಬಾಲಕೃಷ್ಣ : ಶುಭರಾಯರು ಕೃಷ್ಣನ ಇಂಥ ಸಂಪ್ರದಾಯಬದ್ಧವಾದ ವರ್ಣರಂಜಿತ

ಕಥೆಗಳನ್ನು ಅತ್ಯಂತ ಆಕರ್ಷಣೀಯವಾಗಿ ಚಿತ್ರಿಸಿದ್ದಾರೆ. ಈ ಕಲಾಕೃತಿಗಳಲ್ಲಿ ಲಯಬದ್ಧವಾದ ವರ್ಣಶೋಭೆಯು ವೀಕ್ಷಕರ ಗಮನವನ್ನು ಸುಲಭವಾಗಿ ಸೆಳೆಯುತ್ತದೆ.

ರಾಧಾ–ಕೃಷ್ಣರ ಅಮರಪ್ರೇಮದ ವಸ್ತುವುಳ್ಳ ಕಲಾಕೃತಿಗಳು ಶುಭರಾಯರ ಮಹಾನ್ ಕೃತಿಗಳಾಗಿವೆ. ಕೃಷ್ಣನು ಪ್ರೇಮ ಸ್ವರೂಪಿ. ಅವನ ಪ್ರೇಮ ಎಲ್ಲರನ್ನೂ – ಎಲ್ಲವನ್ನೂ ಒಳಗೊಂಡಿರುವಂಥದ್ದು. ರಾಧಾ ಮತ್ತು ಕೃಷ್ಣನನ್ನು ಆಗಲಿಸಲು (ಅಂದರೆ ಪ್ರತ್ಯೇಕಿಸಲು) ಅಸಾಧ್ಯ. ಅವರಿಬ್ಬರೂ ಪರಸ್ಪರ ಜಗಳವಾಡುವರು; ಮತ್ತೆ ಅನುರಾಗಮಯರಾಗಿ ಒಂದಾಗುವರು. ಅವರಿಬ್ಬರು ಒಂದಾಗುವುದಷ್ಟೇ ಅಲ್ಲ, ಅವರ ಜಗಳವೂ ಕೂಡ ತನ್ನದೇ ಆದ ಸೌಂದರ್ಯ ಹಾಗೂ ಲವಲವಿಕೆಯನ್ನು ಹೊಂದಿದೆ. ಈ ಮಾಲಿಕೆಯ ಎರಡು ಪ್ರಮುಖ ಕಲಾಕೃತಿಗಳು ಬಹಳ ಜನಪ್ರಿಯವಾಗಿವೆ.[೬] “ಮೂಕವಿಸ್ಮಿತ ರಾಧಾ” ಕೃತಿಯು ಎಲ್ಲಾ ದೃಷ್ಟಿಗಳಿಂದಲೂ ಉತ್ಕೃಷ್ಟವಾಗಿದೆ. ದಟ್ಟ ಕೆಂಪು ಬಣ್ಣದ ಸೀರೆಯ ವಿನ್ಯಾಸವು ಚಿತ್ರವನ್ನು ನೋಡಿದಾಕ್ಷಣ ಮನ ಸೆಳೆಯುತ್ತದೆ. ಈ ದಟ್ಟ ಕೆಂಪಿನ ಹಿನ್ನೆಲೆಯಾಗಿ ಬೆಳದು ನಿಂತ ಮರಗಳು ಮತ್ತು ಹರಿದ್ವರ್ಣದ ಎಲೆಗಳು ಇಡೀ ಚಿತ್ರಕ್ಕೆ ವಿಶೇಷ ಸೊಬಗನ್ನು ತಂದಿವೆ. ರಾಧೆಯ ನಿರುದ್ವೇಗ ಹಾಗೂ ಮೌನ ಭಾವವನ್ನು ಪದಗಳಲ್ಲಿ ಬಣ್ಣಿಸಲು ಅಸಾಧ್ಯ. ಈ ಕೃತಿಯನ್ನು ವೀಕ್ಷಿಸುವಾಗ ಕೃತಿಯ ನಾಯಕ ರಾಧಾ ಹಾಗೂ ವೀಕ್ಷಕರಿಬ್ಬರೂ ಮೂಕವಿಸ್ಮಿತರಾಗಿ ಬಿಡುತ್ತಾರೆ : ಅಂಥ ವೈಶಿಷ್ಟ್ಯ ಈ ಕಲಾಕೃತಿಗಳಲ್ಲಿ ಮಿಳಿತಗೊಂಡಿದೆ.

“ಕದಂಬ ವೃಕ್ಷ ಘಟನೆ” ಅಥವಾ “ವಸ್ತ್ರಾಪಹರಣ” ಎಂದೇ ಜನಪ್ರಿಯಗೊಂಡಿರುವ ಕಲಾಕೃತಿಯನ್ನು ಮೀರಿಸುವಂಥ ಕೃತಿ ಇಡೀ ಭಾರತದಲ್ಲೇ ಮತ್ತೊಂದಿಲ್ಲ. ಹೆಸರಾಂತ ಕಲಾವಿದ ದಿವಂಗತ ಎ.ಎ. ಆಲಮೇಲಕರ್ ಅವರು ಶುಭರಾಯರ ಈ ಕೃತಿಯಲ್ಲಿರುವಂಥಾ ಉತ್ಕೃಷ್ಟ ವರ್ಣ ಸಂಯೋಜನೆಯನ್ನು ತಾವು ಹಿಂದೆಂದೂ ನೋಡಿರಲಿಲ್ಲ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಇದೇ ಕಥಾವಸ್ತುವಿಗೆ ಸಂಬಂಧಪಟ್ಟಂತೆ ಇತರ ಕಲಾವಿದರು ರಚಿಸಿರುವ ಕೃತಿಗಳಲ್ಲಿ ಚಿತ್ರಕಾರರು ಯಮುನಾ ನದಿಯಲ್ಲಿ ಜಲಕ್ರೀಡೆಯಾಡುತ್ತಿರುವ ಗೋಪಿಕೆಯರನ್ನು ನೀರಿನಲ್ಲಿ ಶರೀರ ಪೂರ್ತಿ ಮುಳುಗಿದಂತೆ, ತಲೆಮಾತ್ರ ಮೇಲೆ ಕಾಣುವಂತೆ ಚಿತ್ರಿಸಿದ್ದಾರೆ. ಆದರೆ ಶುಭರಾಯರು ರಚಿಸಿರುವ ಕೃತಿಗಳ ವೈಶಿಷ್ಟ್ಯವೇ ಬೇರೆ. ನಗ್ನ ಗೋಪಿಕೆಯರು ಮರಗಳನ್ನು ಹತ್ತಿ, ಅಪಹರಿಸಿರುವ ತಮ್ಮ ವಸ್ತ್ರಗಳನ್ನು ಮರಳಿಸುವಂತೆ ಕೃಷ್ಣನಿಗೆ ಪ್ರಾರ್ಥನೆ ಮಾಡಿಕೊಳ್ಳುತ್ತಿರುವ ದೃಶ್ಯವನ್ನು ಶುಭರಾಯರೂ ಮನೋಜ್ಞ ರೀತಿಯಲ್ಲಿ ರಚಿಸಿದ್ದಾರೆ. ವಿವಸ್ತ್ರರಾಗಿರುವ ಗೋಪಿಕೆಯರ ಹಳದಿ ವರ್ಣದ ಶರೀರ ತುಂಬಾ ಆಕರ್ಷಕವಾಗಿದೆ. ಈ ಅದ್ಭುತ ಸೌಂದರ್ಯದ ಕಲಾಕೃತಿಗೆ ವಿವರಣೆ ನೀಡಬೇಕೆಂದು ಕೆಲವು ವೀಕ್ಷಕರು ನನ್ನನ್ನು ಕೇಳಿದರು. “ಆಧ್ಯಾತ್ಮಿಕ ಸುಖಾನಂದದ ಪರಾಕಾಷ್ಠೆಯನ್ನು ಸಾಧಿಸಬೇಕಾದರೆ ನಾವು ಎಲ್ಲವನ್ನೂ ಪರಿತ್ಯಾಗ ಮಾಡಬೇಕಾಗುತ್ತದೆ”

ಎಂದು ನಾನು ಅವರಿಗೆ ವಿವರಿಸಿದೆ. ನಗ್ನ ಗೋಪಿಕೆಯರ ಕೃತಿಯನ್ನು ಚಿತ್ರಕಲಾ ಪ್ರದರ್ಶನದಲ್ಲಿ ಸೇರಿಸಲು ನಾನು ಹಿಂಜರಿದಿದ್ದೆ. ಆದರೆ ಈ ಕೃತಿಯೇ ಪ್ರದರ್ಶನದ ಪ್ರಮುಖ ಆಕರ್ಷಣೆಯಾಯಿತು. ಈ ಕೃತಿ ಮಹಿಳೆಯರ ಘನತೆ, ಗೌರವಗಳಿಗೆ ಎಳ್ಳಷ್ಟೂ ಅಪಚಾರ ಉಂಟುಮಾಡುವುದಿಲ್ಲವೆಂದು ಮಹಿಳಾ ವೀಕ್ಷಕರು ತಾವಾಗಿಯೇ ನನಗೆ ಹೇಳಿದ್ದಾರೆ.

ರಾಧಾ–ಕೃಷ್ಣರ ದೈವೀಕ ಪ್ರೇಮದಾಟವೇ ಕೃಷ್ಣಲೀಲೆ. ತಮ್ಮ ಆರಾಧ್ಯಮೂರ್ತಿ ಕೃಷ್ಣ ಸಂಗಕ್ಕಾಗಿ ವಿರಹೋತ್ಕಂಠಿತರಾಗಿ ಪರಿತಪಿಸುವ ಗೋಪಿಕೆಯರ ಚಿತ್ರಣ ಒಂದು ರಮ್ಯ ಕಾವ್ಯವಾಗಿದೆ. ಶುಭರಾಯರ ಕೃತಿಗಳಲ್ಲಿ ಸದಾ ಕೃಪಳಾಗಿರುವ ಕೃಷ್ಣನು ಭವ್ಯ ಹಾಗೂ ಸರ್ವಶಕ್ತನಾಗಿದ್ದಾನೆ. ಕರುಣೆ ಹಾಗೂ ಕ್ಷಮಾಶಾಲಿಯಾಗಿ ಮೆರೆದಿದ್ದಾನೆ. ಆದ್ದರಿಂದಲೇ ಇಂತಹ ಘನತೆಯುಳ್ಳ ಸಂಪನ್ನಮೂಲ ಮೂರ್ತಿಯಲ್ಲಿ ರಾಧಾ ಹಾಗೂ ಗೋಪಿಕಾಸ್ತ್ರೀಯರು ಸಹಜವಾಗಿಯೇ ನೆಮ್ಮದಿಯನ್ನು ಕಾಣುತ್ತಾರೆ. ರಾಧಾ ಮತ್ತು ಗೋಪಿಕೆಯರಿಗೆ ಕೃಷ್ಣನ ದರ್ಶನವೇ ಹುರುಪು – ಹುಮ್ಮಸ್ಸಿನ ನೆಲೆಯಾಗುತ್ತದೆ : ತಮ್ಮ ಬದುಕನ್ನು ಪವಿತ್ರಗೊಳಿಸುತ್ತದೆ.

ತಮ್ಮ ಕೃತಿಗಳಲ್ಲಿ ರಾತ್ರಿಯಾಗುವ ಪರಿಣಾಮವನ್ನು ಸೂಚಿಸಲು ಶುಭರಾಯರು ಕಪ್ಪು ಹಾಗೂ ನೀಲಿ ಬಣ್ಣಗಳನ್ನು ಹಿನ್ನೆಲೆಯಾಗಿ ಬಳಸಿದ್ದಾರೆ.

ಒರೆಗಮಿ (Oregamy) ಎಂಬುದು ಪ್ರಖ್ಯಾತ ಜಪಾನಿ ಪುಷ್ಪಕಲಾ ಶೈಲಿ. ಶುಭ ರಾಯರು ತಮ್ಮ ಹಲವಾರು ಕೃತಿಗಳಲ್ಲಿ ಇಂಥದ್ದೇ ಶೈಲಿಯನ್ನು ಭಾರತೀಯ ಸಂದರ್ಭ ದಲ್ಲಿ ಬಳಸಿರುವುದು ಗಮನಾರ್ಹ.

ಹೊಸ ಶೈಲಿ ಹಾಗೂ ತಂತ್ರ ಎಂಬುದು ಸ್ವಲ್ಪ ಬದಲಾವಣೆಯೊಂದಿಗೆ, ಹಳೆಯ ಕೃತಿಗಳಲ್ಲಿ ಮೇಳೈಸಿರುವ ಶೈಲಿ ಹಾಗೂ ತಂತ್ರದ ಪುರಾವರ್ತನೆ ಎಂದು ನನಗೆ ಕೆಲವು ಸಲ ಅನ್ನಿಸುತ್ತದೆ. ಚಿತ್ರಕಲೆಯಲ್ಲಿ ಆಳ–ಹರವುಗಳ ಪರಿಣಾಮವನ್ನು ಬೀರಲು ಬಳಸುವ 'ಡೈಮೆನ್ಷನಲ್' ತಂತ್ರಗಾರಿಕೆ ಹೊಸ ಪ್ರಯೋಗ ಎನ್ನಲಾಗುತ್ತಿದೆ. ಆದರೆ ಶುಭರಾಯರು ತಮ್ಮ ಹಲವಾರು ಕೃತಿಗಳಲ್ಲಿ ಈ ತಂತ್ರವನ್ನು ಬಳಸಿದ್ದಾರೆಂಬುದು ಉಲ್ಲೇಖಾರ್ಹ. ಅವರು ಬಣ್ಣ ತುಂಬಿದ ಚಿತ್ರಗಳನ್ನು ಸಾಲಂಕೃತ ಹಿನ್ನೆಲೆಯುಳ್ಳ ಫಲಕದ ಮೇಲೆ ಅಂಟಿಸುವ ಮೂಲಕ ತಮ್ಮ ಕೃತಿಗಳಲ್ಲಿ 'ಡೈಮೆನ್ಷನಲ್' ಪರಿಣಾಮವನ್ನು ಉಂಟುಮಾಡುತ್ತಿದ್ದರು.

ರಾಮಾಯಣದ ಕಥಾನಕಗಳ ಮೇಲೆ ಶುಭರಾಯರು ರಚಿಸಿರುವ ಕೆಲವೇ ಕೃತಿಗಳು ಲಭ್ಯವಿವೆ. ಆದರೆ ಅವು ಆಕರ್ಷಕವೂ ಹಾಗೂ ಸಾಂಕೇತಿಕವೂ ಆಗಿವೆ. ಶ್ರೀರಾಮಚಂದ್ರ ರಾವಣನನ್ನು ಸಂಹಾರ ಮಾಡಿದ ಬಳಿಕ ತನ್ನ ಸಹೋದರರೊಂದಿಗೆ ಅಶೋಕವನಕ್ಕೆ ಸೀತೆಯನ್ನು ಕರೆತರಲು ಹೋದ ದೃಶ್ಯವನ್ನು ವಿಶಿಷ್ಟ ರೀತಿಯಲ್ಲಿ ಶುಭರಾಯರು ಚಿತ್ರಿಸಿದ್ದಾರೆ.

12 ವರ್ಷಗಳ ಸುದೀರ್ಘ ವನವಾಸವನ್ನು ಅನುಭವಿಸಿದ ತನ್ನನ್ನು ಕರೆದು ಕೊಂಡು ಹೋಗಲು ಬಂದ ರಾಮನ ಮೇಲೆ ಸೀತೆಗೆ ಒಂದು ರೀತಿಯ ಸಿಟ್ಟು ವನವಾಸದಲ್ಲಿದ್ದವಳನ್ನೂ ಈ ಮೊದಲೇ ಬಂದು ರಕ್ಷಿಸಲಿಲ್ಲ ಎಂದು ಕೋಪ. ಈ ಘಟನೆಯನ್ನು ವಿವರಿಸುವ ಚಿತ್ರದಲ್ಲಿ ರಾಮನ ಧನುಸ್ಸು – ಭಾಮಕ್ಕೆ ಬದಲಾಗಿ ಹೆರಳು (ವೇಣಿ) ಕಟ್ಟುವ ದಾರವನ್ನು ಹಿಡಿದು ಬಂದಿದ್ದಾನೆ. ಈ ದಾರ ಕೋಪಗ್ರಸ್ಥ ಸೀತೆಯನ್ನು ಸಮಾಧಾನಗೊಳಿಸುವ ಅಸ್ತ್ರದ ಸಂಕೇತವಾಗಿದೆ. ಶುಭರಾಯರು ತಮ್ಮ ಕೃತಿಯಲ್ಲಿ ಇದನ್ನು ಬಳಕೆ ಮಾಡಿದ್ದಾರೆ.

"ರಾಮನ ಪಟ್ಟಾಭಿಷೇಕ"ವನ್ನು ವರ್ಣಿಸುವ ಕೃತಿಯಲ್ಲಿ ರಾಮನು ಸಿಂಹಾಸನಕ್ಕೆ ಬದಲಾಗಿ ನೆಲದ ಮೇಲೆ ಕುಳಿತಿರುವುದನ್ನು ಚಿತ್ರಿಸಲಾಗಿದೆ. ಇದು ರಾಮನು ಸರಳಜೀವಿ ಎಂಬುದನ್ನು ಕೃತಿಕಾರ ಚಿತ್ರಿಸಿರುವ ಪ್ರಯತ್ನವೆನ್ನಬಹುದು. ರಾಮನು ವನವಾಸ ಮುಗಿಸಿ ಬಂದ ಬಳಿಕ ನಡೆಯುವ ಪಟ್ಟಾಭಿಷೇಕ ರಸಮಯವಾಗಿತ್ತೆಂಬುದನ್ನು ಕೃತಿಕಾರ ಸಾರಿದ್ದಾರೆ. ಈ ಇಡೀ ಸಮಾರಂಭವನ್ನು ಕಣ್ಣುಗಳಿಗೆ ಹಾಗೂ ಮನಕ್ಕೆ ಹಿತವಾಗುವಂಥ ಬಣ್ಣಗಾರಿಕೆಯಲ್ಲಿ ಸೆರೆಹಿಡಿಯಲಾಗಿದೆ.

ಶುಭರಾಯರು ದಕ್ಷಿಣ ಭಾರತದವರಾದರೂ ಉತ್ತರ ಭಾರತದ ಸಾಂಪ್ರದಾಯಿಕ ಆಭರಣ, ವೇಷ–ಭೂಷಣಗಳು ಹಾಗೂ ಕ್ರೀಡೆಗಳನ್ನು ಅಧ್ಯಯನ ಮಾಡಿದ್ದರೆಂಬುದು ಅವರ ಕೃತಿಗಳನ್ನು ಗಮನಿಸಿದಾಗ ವ್ಯಕ್ತವಾಗುತ್ತದೆ. ದಖ್ಖನಿ ಶೈಲಿಯಲ್ಲಿ ಶುಭರಾಯರು ಸೀರೆಗಳು ಹಾಗೂ ಆಭರಣಗಳನ್ನು ಚಿತ್ರಿಸಿದ್ದು, ವಿಶ್ವವಿಖ್ಯಾತ ಕಲಾವಿದ ರವಿವರ್ಮನೂ ಈ ದಖ್ಖನಿ ಶೈಲಿಯನ್ನು ತನ್ನ ಕೃತಿ ರಚನೆಗೆ ಆಯ್ಕೆ ಮಾಡಿಕೊಂಡಿದ್ದನೆಂಬುದು ಗಮನಾರ್ಹ. ದಖ್ಖನಿ ಸೀರೆಯ ಶೈಲಿ ಎಂದರೆ ಮಹಾರಾಷ್ಟ್ರ ಸಾಂಪ್ರದಾಯಿಕ ಸೀರೆಗಳ ಶೈಲಿ.

ಶುಭರಾಯರು ತಮ್ಮ ಒಂದು ಕೃತಿಯಲ್ಲಿ ರಾಧೆಯು ಗೋಕುಲ ಮತ್ತು ಬೃಂದಾವನ ಪ್ರದೇಶದಲ್ಲಿ ಬಳಕೆಯಲ್ಲಿರುವ ದಾರ ಕಟ್ಟಿದ ಚೆಂಡಾಟವನ್ನು ಆಡುತ್ತಿರುವುದನ್ನು ಚಿತ್ರಿಸಿದ್ದಾರೆ. ಗೋಕುಲ ಬೃಂದಾವನ ಪ್ರದೇಶದಿಂದ ಆಗಮಿಸಿದ್ದ ಕೆಲವು ಮಹಿಳೆಯರು ಶುಭರಾಯರ ಕೃತಿಗಳನ್ನು ವೀಕ್ಷಿಸಿ "ಇದು ನಮ್ಮ ಕಡೆಯ ದಾರದ ಚೆಂಡು" ಎಂದು ಉದ್ಗಾರವೆತ್ತಿದರು.

ರಾಧೆ ಧರಿಸಿರುವ ಆಭರಣಗಳನ್ನು ಸೂಕ್ಷ್ಮವಾಗಿ ಗಮನಿಸಿದ ದೆಹಲಿ ಕಲಾ ಕಾಲೇಜಿನ ಪ್ರೊ. ಶ್ರೀಮತಿ ದಾಸ್ ಅವರು "ಇದು ಒರಿಸ್ಸಾ ರಾಜ್ಯದ ಜನಪ್ರಿಯ ಆಭರಣ" ಎಂದು ವಿವರಿಸಿದರು. ಶುಭರಾಯರ ಕೃತಿಗಳಲ್ಲಿ ಭಾರತದ ವಿವಿಧ ರಾಜ್ಯಗಳ ಜನರು ತಮ್ಮದೇ ಆದ ಗುಣವಿಶೇಷಗಳನ್ನು ಕಂಡುಕೊಳ್ಳುತ್ತಾರೆ. ಹೀಗಾಗಿ ಶುಭರಾಯರ ಹಾಗೂ ರಾಷ್ಟ್ರದ ವಿವಿಧ ಪ್ರದೇಶಗಳ ಜನರ ನಡುವೆ ನಿಕಟ ಸಂಬಂಧವಿದೆ. ಈ ನಿಕಟ ಸಂಬಂಧವೇ ರಾಷ್ಟ್ರೀಯ ಭಾವೈಕ್ಯ.

ಶುಭರಾಯರು ಭಾಷಾ ಪಂಡಿತರಾಗಿದ್ದರು. ತಮ್ಮ ಮಾತೃಭಾಷೆ ತೆಲುಗಿನಂತೆಯೇ ಇತರ ಭಾಷೆಗಳನ್ನೂ ಅವರು ಪ್ರೀತಿ–ಗೌರವಗಳಿಂದ ಕಾಣುತ್ತಿದ್ದರು. ಅವರು ಭಾಷಾ ಸಾಮರಸ್ಯದ ಸಂಕೇತವಾಗಿದ್ದರು. ಶುಭರಾಯರು ವಿವಿಧ ಪ್ರದೇಶಗಳಲ್ಲಿ ನೆಲೆಸಿದ್ದರು ಹಾಗೂ ಅವರು ನೆಲೆಸಿದ್ದ ಎಲ್ಲಾ ಪ್ರದೇಶ ಮತ್ತು ರಾಜ್ಯಗಳನ್ನು ತಮ್ಮ ಸ್ವಂತ ಸ್ಥಳವನ್ನಾಗಿ ನೋಡಿಕೊಳ್ಳುತ್ತಿದ್ದರು. ಹೀಗಾಗಿ ಶುಭರಾಯರು ಪ್ರಾದೇಶಿಕ ಏಕತೆಗೆ ಮಾದರಿಯಾಗಿದ್ದರು.

ವೇದ ಪಂಡಿತರ, ತೆಲುಗು ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದ್ದರೂ ಶುಭರಾಯರು ಮುಸ್ಲಿಂ ರಾಜನಾಗಿದ್ದ ಟಿಪ್ಪೂಸುಲ್ತಾನನ ಅತ್ಯಂತ ನಂಬಿಕೆಯ ಉಪ ಪ್ರಧಾನಿಯಾಗಿದ್ದರು. ಶುಭರಾಯರು ಹೀಗೆ ಜಾತ್ಯತೀತ ಪರಂಪರೆಯ ಸ್ಫೂರ್ತಿ ಮೂರ್ತಿಯಾಗಿ ಭಾರತದಲ್ಲಿ ನೆಲೆಸಿದ್ದರು.

ಶುಭರಾಯರು ರಾಷ್ಟ್ರೀಯ ಭಾವೈಕ್ಯದ ಮಿನುಗು ತಾರೆಯಾಗಿದ್ದಾರೆ. ಬೇರೆ ಬೇರೆ ಮತಧರ್ಮಗಳಿಗೆ ಸೇರಿರುವ ಇಂದಿನ ಅನೇಕ ಕಲಾವಿದರೂ ಕೂಡ ಶುಭರಾಯರ ಕುಲಗೋತ್ರಗಳಾವುವು ಎಂಬುದನ್ನು ಪರಿಗಣಿಸದೆ ಅವರ ಗುಣ ವಿಶೇಷಗಳಿಗೆ ಮನಸೋತು ಅವರ ಮಾರ್ಗ – ಶೈಲಿಗಳನ್ನು ಅನುಸರಿಸುತ್ತಿದ್ದಾರೆ. ಕಲೆಗೆ ಭಾಷೆ, ಧರ್ಮ ಹಾಗೂ ಗಡಿಯ ಅಂಕೆಗಳಿಲ್ಲ. ಭಾರತದ ಕವಿಪುಂಗವ ರವೀಂದ್ರನಾಥ ಠಾಗೂರ್ ಅವರನ್ನು ಉಲ್ಲೇಖಿಸುತ್ತಾ, ''ಶುಭರಾಯರು ಇಡೀ ಭಾರತಕ್ಕೆ ಸೇರಿದ ದಿವ್ಯ ಕಲಾವಿದ'' ಎಂದು ನಾನು ಯಾವುದೇ ಸಂಕೋಚ ಇಲ್ಲದೆ ಹೇಳುತ್ತೇನೆ.

ಅನು : **ಮುಳ್ಳಹಳ್ಳಿ ಸೂರಿ**

ಶುಭರಾಯ ಮಠದ ಚಿತ್ರಕಲೆ

ಬಾಬುರಾವ್ ಸಾದ್ವೆಲ್ಕರ್

ಆಧ್ಯಾತ್ಮದ ಹರಹು ಸಾಂಪ್ರದಾಯಿಕ ಧರ್ಮದ ವೈಶಾಲ್ಯಕ್ಕಿಂತಲೂ ವಿಸ್ತಾರವಾದುದರಿಂದ, ಆಧ್ಯಾತ್ಮದ ಸೇವೆಯಲ್ಲಿ ಮಾತ್ರ ಕಲೆ ತನ್ನ ಅತ್ಯುನ್ನತ ಅಭಿವ್ಯಕ್ತಿಯನ್ನು ಪಡೆಯಬಲ್ಲುದು.

– ಅರಬಿಂದೋ

18ನೇ ಶತಮಾನದ ಕೊನೆಯ ಹಾಗೂ 19ನೇ ಶತಮಾನದ ಮೊದಲ ಎರಡು ದಶಕಗಳಲ್ಲಿ ಶ್ರೀ ಶುಭರಾಯರಿಂದ ಅವರ ಮಠದಲ್ಲಿ ರಚಿತವಾದ ಕಲೆ ತನ್ನ ಸತ್ವ ಹಾಗೂ ಒಟ್ಟಾರೆ ಪ್ರತಿಮಾ ಕಲೆಯ ದೃಷ್ಟಿಯಿಂದ ವಿಶಿಷ್ಟವಾಗಿದೆ. ಈ ರಚನೆಗಳು ಅಂದು ಪ್ರಚಲಿತವಿದ್ದ ಯಾವುದೇ ಕಲಾಪರಂಪರೆಯೊಂದಿಗೆ ಸಂಬಂಧ ಹೊಂದಿರುವಂತಾಗಲೀ ಅಥವಾ ಪ್ರೇರಿತವಾದಂತಾಗಲೀ ಕಾಣುವುದಿಲ್ಲವಾದರೂ, ಅವುಗಳ ಸರಿಯಾದ ವಿಮರ್ಶಾತ್ಮಕ ಅಧ್ಯಯನ ಸಾಧ್ಯವಾಗಬೇಕಾದರೆ ಅಂದು ಭಾರತದ ವಿವಿಧ ಭಾಗಗಳಲ್ಲಿ ಪ್ರಚಲಿತವಾಗಿದ್ದ, ಜನಪ್ರಿಯವಾಗಿದ್ದ ಇತರ ಕಲಾಪರಂಪರೆಗಳೊಂದಿಗೆ ಹೋಲಿಸಿ ನೋಡಬೇಕು. ನನ್ನ ಈ ಲೇಖನದಲ್ಲಿ ಕ್ರಿ.ಶ. 1750ರಿಂದ 1820ರವರೆಗೆ ಜೀವಿಸಿದ್ದ ಶುಭರಾಯರು ರಚಿಸಿದರೆನ್ನಲಾದ ಕಲಾಚಿತ್ರಗಳ ಬಗೆಗೆ ನನ್ನ ಅಧ್ಯಯನದಲ್ಲಿ ಕಂಡುಕೊಂಡ ವಿಚಾರಗಳನ್ನು ನಿಮ್ಮ ಮುಂದಿಡುತ್ತಿದ್ದೇನೆ. ಐತಿಹ್ಯದ ಪ್ರಕಾರ ಶುಭರಾಯರು ಸಂಸ್ಕೃತದಲ್ಲಿ ಪ್ರಕಾಂಡ ಪಂಡಿತರು; ಟಿಪ್ಪೂಸುಲ್ತಾನನ ಆಸ್ಥಾನದಲ್ಲಿ ಉಪಪ್ರಧಾನಿಯಾಗಿ, ಸೇವೆ ಸಲ್ಲಿಸಿದವರು. ಆತ್ಮಗೌರವಕ್ಕೆ ಧಕ್ಕೆ ತಂದ ಯಾವುದೋ ಒಂದು ಸನ್ನಿವೇಶದಲ್ಲಿ ಟಿಪ್ಪೂಸುಲ್ತಾನನಾಸ್ಥಾನವನ್ನು ತೊರೆದು ಬಂದ ಅವರು ಶೋಲಾಪುರಕ್ಕೆ ಪ್ರಯಾಣ ಬೆಳೆಸಿ, ತಮ್ಮ ಮುಂದಿನ ಜೀವಮಾನ ಪೂರ್ತಿ ಅಲ್ಲಿಯೇ ನೆಲೆಸಿದರು. ಶೋಲಾಪುರದಲ್ಲೇ ಒಂದು ಮಠವನ್ನು ಸ್ಥಾಪಿಸಿ, ತಮ್ಮ ಉಳಿದ ಆಯುಶ್ಯವನ್ನು ಆತ್ಮಜ್ಞಾನದ ಸಾಧನೆಗಾಗಿ ಮುಡಿಪಾಗಿಟ್ಟರು. ತಮ್ಮ ಕೃಷ್ಣಭಕ್ತಿ ಹಾಗೂ ತಮ್ಮ ವಿಶಿಷ್ಟ ಕಲ್ಪನೆಯ ಧರ್ಮ –

ಇವುಗಳ ಅಭಿವ್ಯಕ್ತಿಗಾಗಿ ಸಂತ ಕವಿಯೂ, ಕಲಾವಿದರೂ ಆದರು. ತೆಲುಗು ತಮ್ಮ ಮಾತೃಭಾಷೆಯಾದರೂ, ಮರಾಠಿಯನ್ನು ಕರಗತಮಾಡಿಕೊಂಡು ಆ ಭಾಷೆಯಲ್ಲಿ ಕಾವ್ಯರಚನೆ ಮಾಡಿದರು. ದೈವ ಸೃಷ್ಟಿಯಲ್ಲಿ ಸಕಲ ಜೀವಿಗಳೂ ಸಮಾನರು ಎಂಬ ಅರಿವನ್ನು ಮಾನವನಲ್ಲಿ ಉಂಟುಮಾಡುವುದೇ ಧರ್ಮದ ನಿಜವಾದ ಉದ್ದೇಶ ಎಂದು ನಂಬಿದ್ದ ಶುಭರಾಯರು ಉಳ್ಳವರು–ಇಲ್ಲದವರು, ಉಚ್ಚ–ನೀಚ ಜಾತಿಗಳಿಗೆ ಸೇರಿದವರು, ಸವರ್ಣೀಯರು, ಅಸ್ಪೃಶ್ಯರೂ, ಎಲ್ಲರೂ ದೈವ ಸಾನ್ನಿಧ್ಯವನ್ನು ಸೇರಲು ಅರ್ಹರು ಎಂದು ಘೋಷಿಸಿದರು. ಹೀಗೆ ಹೇಳುವ ಅನೇಕರಂತೆ ಇದನ್ನು ಘೋಷಣೆಯ ಮಟ್ಟದಲ್ಲಿ ಮಾತ್ರ ಉಳಿಸಿಕೊಳ್ಳದೆ, ತಮ್ಮ ಜೀವನದಲ್ಲೂ ಅಳವಡಿಸಿಕೊಂಡರು. ಹರಿಜನರನ್ನು ತಮ್ಮ ಮಠದ ಮುಖ್ಯ ಸಂಚಾಲಕರನ್ನಾಗಿ ನೇಮಿಸಿಕೊಂಡರು. ಆ ಸಂಪ್ರದಾಯ ಅವರ ಮಠದಲ್ಲಿ ಇಂದಿಗೂ ಮುಂದುವರಿದಿದೆ.

ಶುಭರಾಯ ಮಹಾರಾಜರು ಕಾವ್ಯ, ದರ್ಶನ, ಸಮಾಜೋದ್ಧಾರಗಳಂಥ ಅನೇಕ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ್ದರಾದರೂ, ಅವುಗಳ ಅಧ್ಯಯನ ಮಾಡುವುದು ನನ್ನ ಲೇಖನದ ಉದ್ದೇಶವಲ್ಲ. ಅವರು ರಚಿಸಿದರೆಂದು ಹೇಳಲಾದ ಚಿತ್ರಕಲೆ ಹಾಗೂ ಅವರ ವಿಮರ್ಶಾತ್ಮಕ ಅಧ್ಯಯನಗಳಷ್ಟೇ ಈ ಲೇಖನದ ಸೀಮಿತ ವ್ಯಾಪ್ತಿಯಲ್ಲಿ ಬಂದಿವೆ. ಆದರೂ ಇಂಥದೊಂದು ಅಧ್ಯಯನ ಮಾಡುವಾಗ ಶುಭರಾಯರ ಕಲೆ ರಚಿತವಾದ ಕಾಲದಲ್ಲಿ ಜನಪ್ರಿಯವಾಗಿದ್ದ ಇವರ ಕಲಾಪರಂಪರೆಗಳು ಮತ್ತು ಜಾನಪದ ಕಲೆಗಳತ್ತ ಗಮನಹರಿಸುವುದು ಅನಿವಾರ್ಯವಾಗುತ್ತದೆ. ಹಾಗೆ ಮಾಡುವುದರಿಂದ ಶುಭರಾಯರ ಕಲೆಯ ಯೋಗ್ಯ ಅಧ್ಯಯನವೂ ಸಾಧ್ಯವಾಗುತ್ತದೆ. ಇನ್ನೊಂದು ಮಾತು ಶ್ರೀ ಶುಭರಾಯರ ಈ ರಚನೆಗಳ ಶೈಲಿ ವಿಶಿಷ್ಟವಾಗಿರುವುದರಿಂದ ಅದನ್ನು "ಶುಭರಾಯ ಮಠದ ಕಲೆ'' ಎಂಬ ಹೆಸರಿನಿಂದಲೇ ಕರೆಯಬಹುದು. ಇಂತಹ ಹೆಸರಿನಿಂದ ತೌಲನಿಕ ಅಧ್ಯಯನಕ್ಕೆ ಅನುಕೂಲವಾಗುತ್ತದೆ.

ನನ್ನ ಈ ಲೇಖನದ ಉದ್ದೇಶ ಅಂದು ಜನಪ್ರಿಯವಾಗಿದ್ದ ಕಲಾಪ್ರಕಾರಗಳ ಹಿನ್ನೆಲೆಯಲ್ಲಿ 'ಶುಭರಾಯರ ಮಠದ ಕಲೆ'ಯ ಅಧ್ಯಯನ ಮಾಡುವುದಾಗಿದೆ. ಆದ್ದರಿಂದ ಸಚಿತ್ರ–ಹಸ್ತಪ್ರತಿಗಳು, ಮಿನಿಯೇಚರ್ ಚಿತ್ರಗಳು ಮತ್ತು ಭಿತ್ತಿ ಚಿತ್ರಗಳು ಇವುಗಳನ್ನೂ ಈ ನನ್ನ ಲೇಖನದ ವ್ಯಾಪ್ತಿಯಲ್ಲಿ ಸೇರಿಸಿಕೊಳ್ಳುವ ಪ್ರಲೋಭವನ್ನು ಹತ್ತಿಕ್ಕಬೇಕಾಗಿದೆ. ಹಾಗೆ ನೋಡಿದರೆ ಪುರಾತನ ಭೂಮಿಯಲ್ಲಿ ಕಲಾಪ್ರಕಾರಗಳು ಬೆಳೆದು ಬಂದ ರೀತಿಯನ್ನು ಅಭ್ಯಾಸ ಮಾಡುವಾಗ ಈ ಮೂರೂ ಪ್ರಕಾರಗಳ ಒಟ್ಟು ಅಧ್ಯಯನ ಅವಶ್ಯವಾಗಿ ಆಗಲೇಬೇಕು, ಆದರೂ ಇವುಗಳನ್ನು ನನ್ನ ಲೇಖನದ ಪರಿಮಿತಿಯಿಂದ ಹೊರಗಿಡುವುದು ಅನಿವಾರ್ಯವಾಗಿದೆ.

ಭಾರತೀಯ ಸಾಂಪ್ರದಾಯಿಕ ಕಲೆ – ಅದರ ಎಲ್ಲ ವಿವಿಧ ಪ್ರಕಾರಗಳನ್ನೂ ಒಳಗೊಂಡಂತೆ ಮೂಲತಃ ಅನೇಕ ಅಪ್ರಕಟಿತ ಕಲಾವಿದರ ಒಟ್ಟು ಪ್ರಯತ್ನದ ಫಲ.

ಮೊಘಲ, ರಜಪೂತ ಹಾಗೂ ಇನ್ನಿತರ ಪರಂಪರೆಗಳಿಗೆ ಸೇರಿದ ಮಿನಿಯೇಚರ್ ಚಿತ್ರಗಳು ಕಲಾಚಾರ್ಯನೊಬ್ಬನ ಕಮ್ಮಟದಲ್ಲಿ ರಚಿತವಾದುವೇನೋ ನಿಜ. ಆದರೆ ಅವುಗಳ ಸಿದ್ಧತೆಯಲ್ಲಿ ಆಯಾ ಕಲಾಚಾರ್ಯರ ಅನೇಕ ಶಿಷ್ಯರೂ ಶ್ರಮವಹಿಸಿದ್ದಾರೆ ಎಂಬುದನ್ನು ಮರೆಯಬಾರದು. ತಮ್ಮ ತಮ್ಮ ಕ್ಷೇತ್ರಗಳಲ್ಲಿ ವಿಶೇಷ ಪರಿಣತಿಯನ್ನು ಪಡೆದ ಅನೇಕ ಕಲಾವಿದರು ಒಟ್ಟಿಗೇ ಸೇರಿ ಸಂಪೂರ್ಣ ರೂಪವನ್ನು ನೀಡಿರುವ ರಚನೆಗಳವು. ವಿಶೇಷವೆಂದರೆ ಹೀಗೆ ಅನೇಕ ಕಲಾವಿದರ ಪ್ರತಿಭೆಯಿಂದ ಸಿದ್ಧವಾದ ಪ್ರತಿಯೊಂದು ಚಿತ್ರವೂ ಒಬ್ಬನೇ ಕಲಾವಿದ ರಚಿಸಿದ ಚಿತ್ರದಂತೆ ಕಾಣುತ್ತದೆ ಎನ್ನುವುದು. ಪ್ರತಿಯೊಬ್ಬ ಕಲಾವಿದನಿಗೂ ತನ್ನದೇ ಆದ ಶೈಲಿ ಇರುವುದು ಸಹಜ. ಆದರೂ ಈ ರಚನೆಗಳಲ್ಲಿ ಯಾರೊಬ್ಬರ ವೈಯಕ್ತಿಕ ಶೈಲಿ ಎದ್ದು ಕಾಣುವುದು ಅಪರೂಪ. ಇಷ್ಟಾಗಿಯೂ ಈ ಚಿತ್ರಗಳಲ್ಲಿ ಒಂದು ಭಾವದ ಬಿಸುಪು ಕಾಣುತ್ತದೆ.

ಜಾನಪದ ಹಾಗೂ ಜನಪ್ರಿಯ ಸಂಪ್ರದಾಯಗಳು

ಭಾರತೀಯ ಸಾಂಪ್ರದಾಯಿಕ ಕಲೆ ಹಾಗೂ ಕಲಾ ನಿರ್ಮಿತಿಗಳ ಉದ್ದೇಶ ಮತ್ತು ಉಪಯೋಗದ ಹಿಂದೆ ಗುರುತಿಸಬಹುದಾದ ಯಾವುದೇ ವೈಯಕ್ತಿಕವಾದ, ಪ್ರಜ್ಞಾಪೂರ್ವಕವಾದ ಪ್ರಯತ್ನ ಇಲ್ಲವೆಂದೇ ಹೇಳಬೇಕು. ಏಕೆಂದರೆ ಈ ಪುರಾತನ ದೇಶದಲ್ಲಿ ಕಲೆ ಎನ್ನುವುದು ಒಟ್ಟು ಸಮುದಾಯದ ಅಭಿವ್ಯಕ್ತಿಯಾಗಿದ್ದು, ಯಾವುದೋ ಒಂದು ಸ್ಪಷ್ಟವಾದ ಉದ್ದೇಶಕ್ಕಾಗಿ ಸೃಷ್ಟಿಯಾಗಿದೆ. ಅಷ್ಟೇ ಅಲ್ಲ, ಇಂದಿಗೂ ಸಾಂಪ್ರಾದಾಯಿಕ ಕಲೆ ವಿಧಿ–ಸಂಪ್ರದಾಯದ ಒಂದು ಅಂಗವಾಗಿ ಮುಂದುವರಿದುಕೊಂಡು ಬಂದಿದೆ. ಇಂಥ ಜನಪ್ರಿಯ ಸಂಪ್ರದಾಯಗಳನ್ನು ಮೂರು ತೆರನಾಗಿ ಗುರುತಿಸಬಹುದು.

(1) ವಿಧಿ–ಸಂಪ್ರದಾಯ ಸಂಬಂಧವಾದ ಕಲಾಪ್ರಕಾರಗಳು

(2) ಕಥನೋದ್ದೇಶ ಸಂಬಂಧವಾದ ಕಲಾಪ್ರಕಾರಗಳು

(3) ಪಟ, ಸುರುಳಿ ಹಾಗೂ ದೇವಸ್ಥಾನಗಳಲ್ಲಿರುವ ತೂಗುಚಿತ್ರಪಟಗಳು (Wall hangings)

(1) ವಿಧಿ ಸಂಪ್ರದಾಯ ಸಂಬಂಧವಾದ ಕಲಾಪ್ರಕಾರಗಳು

ಅ. *ರಂಗೋಲಿ* :

ಕಲ್ಲಿನ ಪುಡಿ ಅಥವಾ ಅಕ್ಕಿ ಹಿಟ್ಟಿನಿಂದ ಅನೇಕ ರಚನೆಗಳನ್ನೂ ನೆಲದ ಮೇಲೆ ಬಿಡಿಸುತ್ತಿದ್ದ ಈ ಸಂಪ್ರದಾಯ ಮೊನ್ನೆ ಮೊನ್ನೆಯವರೆಗೂ ಮಹಾರಾಷ್ಟ್ರ, ಗುಜರಾತ್ ಮತ್ತು ದಕ್ಷಿಣ ಭಾರತಗಳಲ್ಲಿ (ಕೋಲಂ) ರೂಢಿಯಲ್ಲಿತ್ತು. ಇದು ಪ್ರಮುಖವಾಗಿ ಗೃಹಿಣಿಯರ ಕಲೆ. ಸೂರ್ಯ, ಚಂದ್ರ, ಸ್ವಸ್ತಿಕ ಮುಂತಾದ ಆಕಾರಗಳಲ್ಲಿ, ಹಬ್ಬ–

ಹರಿದಿನಗಳಂಥ ಶುಭ ಸಮಾರಂಭಗಳ ಆಚರಣೆಯ ಮುಖ್ಯ ಅಂಗವಾದ ಈ ಕಲೆ ಕೆಲವು ಕಡೆ ಇಂದಿಗೂ ಮುಂದುವರಿದುಕೊಂಡು ಬಂದಿದೆ. ರಂಗೋಲಿ ಮೂಲತಃ ಒಂದು ರೇಖಾಚಿತ್ರ ಪ್ರಕಾರ. ಮಣ್ಣು ಅಥವಾ ಸಗಣಿಯಿಂದ ಸಾರಿಸಿದ ನೆಲದ ಮೇಲೆ ಮೊದಲು ಚುಕ್ಕೆಗಳನ್ನಿಟ್ಟು ಅವುಗಳ ಆಧಾರದ ಮೇಲೆ ಸರಳ ಮತ್ತು ಸಂಕೀರ್ಣವಾದ – ಎಷ್ಟೋ ವೇಳೆ ನೂತನ ಪ್ರಯೋಗಗಳನ್ನು ಸೃಷ್ಟಿಸುವ ಮಹಿಳೆಯರು ತಮ್ಮ ಹೆಣ್ಣು ಮಕ್ಕಳಿಗೆ ಈ ಕಲೆಯನ್ನು ಹೇಳಿ ಕೊಡುವ ಪರಿಪಾಠ ಇಂದಿಗೂ ಮುಂದುವರಿದಿದೆ.

ಅ. ಅಲ್ಪಾನಾ :

ಶುಭ ಸಮಾರಂಭಗಳಂದು, ಹಬ್ಬ–ಹರಿದಿನಗಳಂದು ನೆಲ ಮತ್ತು ಗೋಡೆಗಳ ಮೇಲೆ ಸುಣ್ಣದ ನೀರಿನಿಂದ ರಚಿಸುವ ಬಂಗಾಳದ ಒಂದು ಕಲಾಪ್ರಕಾರ. ಸ್ವಯಂಪೂರ್ಣವಾದ ರೇಖೆಗಳೇ ಪ್ರಧಾನವಾದ ಈ ಪ್ರಕಾರ ರಚನೆಗಳಲ್ಲಿರುವ ಸಾಂಕೇತಿಕ ಕಲೆ ಸಾರ್ವತ್ರಿಕವಾದುದು. ತಾವು ಆಚರಿಸುವ ಅನೇಕ ವ್ರತ–ಉಪವಾಸಗಳ ಅಂಗವಾಗಿ ಮಹಿಳೆಯರು ಮಣ್ಣಿನ ಪ್ರತಿಮೆಗಳನ್ನೂ, ಅಲ್ಪಾನಾಗಳನ್ನೂ ರಚಿಸುತ್ತಾರೆ.

ಆ. ಅರಿಪಾನಾ :

ಹೆಚ್ಚು–ಕಡಿಮೆ ಅಲ್ಪಾನಾದ ರಚನೆಗಳಂತೆಯೇ ಇದ್ದರೂ ಅರಿಪಾನಾದ ರಚನೆಗಳು ಇನ್ನಷ್ಟು ರೇಖಾಬದ್ಧವಾಗಿರುತ್ತವೆ. ಬಿಹಾರದ ಮಹಿಳೆಯರು ಈ ಕಲಾಸಂಪ್ರದಾಯವನ್ನು ಇಂದಿಗೂ ಮುಂದುವರಿಸಿಕೊಂಡು ಬಂದಿದ್ದಾರೆ.

ಇ. ಮಂಡಾನಾ :

ಇದು ವೈವಿಧ್ಯ ಶ್ರೀಮಂತಿಕೆಯಿರುವ ಮಧ್ಯಪ್ರದೇಶ ಅಲ್ಪಾನಾ ಆವೃತ್ತಿ. ಈ ಪ್ರಕಾರದಲ್ಲಿ ವೈವಿಧ್ಯವಿದ್ದು, ಸನ್ನಿವೇಶಕ್ಕೆ ತಕ್ಕಂತೆ ಆಕಾರಗಳು ಬದಲಾಗುತ್ತಿರುತ್ತವೆ. ಬಿಳಿಯ ರಂಗೋಲಿ ಪುಡಿಯಿಂದ ಎಳೆದ ರೇಖೆಗಳ ಪಕ್ಕದಲ್ಲೇ ಗೆರು ಎಂಬ ಕೆಂಪು ಮಿಶ್ರಿತ ಬಣ್ಣದ ರೇಖೆಗಳೂ ಇರುತ್ತವೆ.

ಈ. ಮೈಥಿಲಿ ಅಥವಾ ಮಧುಬನಿ :

ಮೂಲತಃ ಬಿಹಾರದ ಮೈಥಿಲಿಯಲ್ಲಿ ಜನ್ಮ ತಳೆದ ಮಧುಬನಿ, ಅಲ್ಲಿನ ಮಹಿಳೆಯರು ಹಬ್ಬ–ಹರಿದಿನಗಳಂದು ತಮ್ಮ ಮನೆಯ ಗೋಡೆಗಳ ಅಲಂಕಾರಕ್ಕಾಗಿ ಬಳಸುವ ಒಂದು ಕಲಾಪ್ರಕಾರ. ಬಹಳ ಸಂಕೀರ್ಣವಾದ ಈ ಮಧುಬನಿಯ ಕಲಾಚಿತ್ರಗಳು ತಮ್ಮದೇ ಆದ ವಿಶಿಷ್ಟ ಶೈಲಿಯಲ್ಲಿ ಶಿವ, ಪಾರ್ವತಿ, ಕೃಷ್ಣ ಮುಂತಾದ ದೇವತೆಗಳ ಚಿತ್ರಗಳನ್ನೊಳಗೊಂಡಿರುತ್ತವೆ. ಮಧುಬನಿಯಲ್ಲಿ ಎರಡು ಪಂಥಗಳಿವೆ.

(1) ಮೈಥಿಲಿ ಕಾಯಸ್ಥ *(2)* ಮೈಥಿಲಿ ಬ್ರಾಹ್ಮಣ

ಸಾಮಾನ್ಯವಾಗಿ ಐದು ಪ್ರಮುಖ ಸಮಾರಂಭಗಳಲ್ಲಿ ಮನೆಯ ಗೋಡೆಗಳನ್ನು ಮಧುಬನಿಯಿಂದ ಅಲಂಕರಿಸುತ್ತಾರೆ. ಆ ಸಮಾರಂಭಗಳು ಯಾವುವೆಂದರೆ :

1) ಉಪನಯನ
2) ಮನೆಯೊಳಗಿರುವ ದೇವರಮನೆಗೆ ಸುಣ್ಣ ಬಳಿದ ಮೇಲೆ.
3) ದೇವವನ ಏಕಾದಶಿ, ಚಂದ್ರ ಚತುರ್ಥಿ ಮುಂತಾದ ಹಬ್ಬ–ಹರಿದಿನಗಳು
4) ವಿವಾಹ ನಿಶ್ಚಿತಾರ್ಥ
5) ಗಂಡು–ಹೆಣ್ಣುಗಳು ಗಂಡ–ಹೆಂಡ್ತಿಯಾಗಿ ಸಂಸಾರಕ್ಕೆ ಕಾಲಿಟ್ಟ ಮೊತ್ತಮೊದಲ ದಿನ.

ಇಂದು ಮಧುಬನಿ ಒಂದು ಜೀವಂತ ಕಲಾಪ್ರಕಾರವಾಗಿ ಉಳಿದುಬಂದಿದೆ. ಮಧುಬನಿ ಕಲೆಗೆ ಹೆಸರಾಗಿರುವ ಜಿತವಾರಪುರ, ರಾಂತಿ ಮೊದಲಾದ ಸ್ಥಳಗಳಲ್ಲಿ ತಮ್ಮ ಹಸ್ತ–ಕೌಶಲವನ್ನು ರಕ್ಷಿಸಿ ಬಂದಿರುವ ವೃದ್ಧ, ಮಧ್ಯವಯಸ್ಕ, ಯುವತಿಯರು – ಎಲ್ಲ ವಯಸ್ಸಿನವರೂ ಕಾಯಸ್ತ, ಬ್ರಾಹ್ಮಣ ಜಾತಿಗಳೆರಡರಲ್ಲೂ ಇಂದಿಗೂ ಇದ್ದಾರೆ. ಸೀತಾದೇವಿ, ಜಗ್ದಮಿದೇವಿ, ಮಹಾಸುಂದರಿ ದೇವಿ, ಉಷಾದೇವಿ, ಕರ್ಪೂರಿ ದೇವಿಯರಂಥ ಪ್ರಖ್ಯಾತರನ್ನೊಳಗೊಂಡಂತೆ ಇಪ್ಪತ್ತು ಮಂದಿ ಮಧುಬನಿ ಕಲಾವಿದೆಯರು ಬೆಳಕಿಗೆ ಬಂದಿದ್ದು, ಇಂದು ಅವರೆಲ್ಲರೂ ಕಲಾ ಸಂಗ್ರಾಹಕರ ಮನಸೂರೆಗೊಳಿಸಿದ್ದಾರೆ. ಸೀತಾದೇವಿ, ಜಗ್ದಮಿದೇವಿಯರಂಥ ಮಧುಬನಿ ಕಲಾವಿದೆಯರು ಶಾಯಿ ಮತ್ತು ಬಣ್ಣಗಳನ್ನುಪಯೋಗಿಸಿ, ಕಾಗದದ ಮೇಲೆ ನಿಂತ ಸ್ಥಳದಲ್ಲೇ ಕಲಾ ಸೃಷ್ಟಿ ಮಾಡಬಲ್ಲರು. ಇವರ ಅನೇಕ ಕಲಾಕೃತಿಗಳು ಇಂದು ದೇಶ–ವಿದೇಶಗಳ ಅನೇಕ ಮಂದಿ ಕಲಾಪ್ರೇಮಿಗಳ ಹೆಮ್ಮೆಯ ಸಂಗ್ರಹಗಳಾಗಿವೆ.

ಉ. ವಾರ್ಲಿ ಆದಿವಾಸೀ ಕಲೆ :

ಇದೂ ಕೂಡ ಒಂದು ವಿಧಿ ಸಂಬಂಧವಾದ ಕಲಾಪ್ರಕಾರ. ವಾರ್ಲಿ ಆದಿವಾಸಿಗಳು ಸಾಮಾನ್ಯವಾಗಿ ವಿವಾಹ ಸಮಾರಂಭದಲ್ಲಿ ತಮ್ಮ ಮನೆಯ ಹೊರಗೋಡೆಗಳನ್ನು ಕಲಾಚಿತ್ರಗಳಿಂದ ಅಲಂಕರಿಸುತ್ತಾರೆ. ಈ ಪ್ರಕಾರದ ಚಿತ್ರಗಳ ಪ್ರಮುಖ ಆಕಾರ ಅಥವಾ ವಸ್ತು ಮಂಡಲ ಅಥವಾ ಚೌಕ. ಈ ಚೌಕದೊಳಗೆ ದೇವತೆಗಳ ಮತ್ತು ಇತರ ಅತಿಮಾನುಷವಾದ ಶಕ್ತಿಗಳ ಚಿತ್ರಗಳಿರುತ್ತವೆ. ವಾರ್ಲಿ ಚಿತ್ರಗಳಲ್ಲಿ ಬಹಳ ಆಕಾರವೈವಿಧ್ಯವಿದ್ದು, ಲಯದ ಚಲನಶೀಲತೆಯಿದೆ. ಮಹಾರಾಷ್ಟ್ರದ ಮುಂಬಯಿಗೆ ಸಮೀಪದಲ್ಲಿರುವ ಗಾಂಜಾಡ್‌ನಲ್ಲಿ ಈ ಆದಿವಾಸಿಗಳು ನೆಲಸಿದ್ದಾರೆ. ಈ ಕಲಾಮಾಧ್ಯಮದಲ್ಲೂ ಮಹಿಳೆಯರದೇ ಮೇಲುಗೈ ಆದರೂ ಅಸಾಧಾರಣ ಕೌಶಲವನ್ನೂ ಗಳಿಸಿರುವ ಕೆಲವು ಪುರುಷರು ಇದ್ದು, ಇವರು ಬಿಳಿಯ ಬಣ್ಣದಿಂದ ಕಾಗದದ ಮೇಲೆ ರಚನೆ ಮಾಡಬಲ್ಲರು. ಈ ಎರಡು ದಶಕಗಳಲ್ಲಿ ವಾರ್ಲಿ ಕಲೆ ಪ್ರಚಾರ ಗಳಿಸಿದ್ದು, ಕಲಾವಿದರಲ್ಲಿ ಜಿವ್ಯಸೋಮ ಪ್ರಸಿದ್ಧರಾಗಿದ್ದಾರೆ.

ಕಥನೋದ್ದೇಶ ಕಲೆ

ಕಥನೋದ್ದೇಶ ಕಲಾ ಸಂಪ್ರದಾಯದ ಇತಿಹಾಸ ಪುರಾತನವಾದುದು. ಪ್ರಾಚೀನ ಕಾಲದಿಂದಲೂ ಪಟಗಳನ್ನು ಚಿತ್ರಿಸುವ ಸಂಪ್ರದಾಯ ಭಾರತದ ವಿವಿದೆಡೆಗಳಲ್ಲಿ ಪ್ರಚಲಿತವಾಗಿದೆ. ಸಂಸ್ಕೃತದಲ್ಲಿ ಪಟ ಎಂದರೆ ಬಟ್ಟೆ, ಭಿತ್ತಿ, ಕ್ಯಾನ್‌ವಾಸ್ ಎಂದರ್ಥ. 12ನೇ ಶತಮಾನದ ಪತಂಜಲಿ ಈ ರೀತಿಯ ಚಿತ್ರಕಲೆಯ ಉಲ್ಲೇಖ ಮಾಡಿದ್ದಾನೆ. ಕ್ರಿ.ಶ. 7ನೇ ಶತಮಾನದ ಬಾನುದತ್ತನ 'ಹರ್ಷ ಚರಿತೆ'ಯಲ್ಲಿ ಮೃತ್ಯುದೇವತೆಯಾದ ಯಮ ಪಾಪಿಗಳಿಗೆ ನೀಡುವಂಥ ಶಿಕ್ಷೆಗಳನ್ನು ಚಿತ್ರಗಳ ಮೂಲಕ ಜನಕ್ಕೆ ತೋರಿಸುತ್ತಿದ್ದ 'ಯಮಪಟ್ಟಕ'ರಂಬ ಗಾಯಕರ ಉಲ್ಲೇಖವಿದೆ. ಅಂತೆಯೇ 18ನೇ ಶತಮಾನದ ಜೈನ ಕೃತಿಯಾದ 'ಕುವಲಯಾಮಾಲ'ದಲ್ಲಿ ಸಂಸಾರ ಚಕ್ರದ ಬಗೆಗೆ ಚಿತ್ರಪಟಗಳೊಂದಿಗೆ ಸೋದಾಹರಣವಾಗಿ ಉಪದೇಶ ಮಾಡುತ್ತಾ ಊರಿಂದೂರಿಗೆ ಅಲೆಯುತ್ತಿದ್ದ ಗುರುವೊಬ್ಬನ ಉಲ್ಲೇಖವಿದೆ.

ಕಥೆಗಳನ್ನು ಆಧರಿಸಿದ ಚಿತ್ರಪಟಗಳು ಕಥಾನುಕ್ರಮ ಸರಣಿಯಲ್ಲಿ ಕಾಗದದ ಸುರುಳಿಯ ಅಡ್ಡಗಲಕ್ಕೆ ಚಿತ್ರಿತವಾಗುವುದು ರಾಜಸ್ತಾನದಲ್ಲಿ ಇಂದಿಗೂ ಉಳಿದಿರುವ ಪದ್ಧತಿ. ಹಾಗೆಯೇ ಬಂಗಾಳದಲ್ಲಿ ಸುರುಳಿಯ ಉದ್ದಗಲಕ್ಕೆ ಒಂದರ ಕೆಳಗೊಂದರಂತೆ ಕಥಾನುಕ್ರಮ ಸರಣಿಯಲ್ಲಿ ಚಿತ್ರಿಸುವ ಅವಿಚ್ಛಿನ್ನವಾದ ಪರಂಪರೆಯಿದೆ.

ಕಥನಾತ್ಮಕ ಕಲಾಪರಂಪರೆಯ ಕೆಲವು ಪ್ರಮುಖ ಮಾರ್ಗಗಳು ಈ ಕೆಳಕಂಡಂತೆ ಇವೆ.

ಅ. ಜಾದೂಪಟುವಾ :

ಬಿಹಾರದ ಸಂತಲ್ ಪರ್ಗಣಾದಲ್ಲಿ ಜೀವಂತವಾಗಿರುವ ಒಂದು ಕಲಾಪರಂಪರೆಯಿದು. ಜಾದೂಪಟುವಾ ಎಂದರೆ ಜಾದೂ ಕಲಾವಿದ ಎಂದೇ ಅರ್ಥ. ಜಾದೂ ಕಲಾವಿದರು ತಮ್ಮ ಪೂರ್ವಜರಿಂದ ತಮ್ಮ ತಲೆಮಾರಿಗೆ ಅನೂಚಾನವಾದ ಬಳುವಳಿಯಾಗಿ ಬಂದ ಕಥೆಗಳನ್ನು ಸುರುಳಿಯ ಉದ್ದಕ್ಕೂ ಒಂದರ ಕೆಳಗೊಂದರಂತೆ ಚಿತ್ರಿಸುತ್ತಾರೆ. ಈ ಕಥೆಗಳೇ ಅಲ್ಲದೆ ಭಾಗವತ ಪುರಾಣದಿಂದಾಯ್ದು, ಮುಖ್ಯವಾಗಿ ಕೃಷ್ಣಲೀಲೆಗೆ ಸಂಬಂಧಿಸಿದ ಘಟನೆಗಳನ್ನೂ ಚಿತ್ರಿಸುವುದುಂಟು. ಈ ಕಥಾಚಿತ್ರ ಸುರುಳಿಗಳಂತೆಯೇ ಜೋಮ್‌ರಾಜ್ ಅಥವಾ ಯಮನ ರಾಜ್ಯವನ್ನು ಸೋದಾಹರಣವಾಗಿ ಚಿತ್ರಿಸುವ ಸುರುಳಿಗಳೂ, ಸೃಷ್ಟಿಕರ್ತನಾದ 'ಥಾಕೂರ್ ಜಿ' ಹೇಗೆ ಭುವಿಯ ಮೇಲೆ ಜೀವಜಂತುಗಳ ಸೃಷ್ಟಿ ಮಾಡಿದ ಎಂದು ನಿರೂಪಿಸುವ ಸಂತಾಲರ ಜಗತ್‌ಸೃಷ್ಟಿ ಕಥೆಗಳನ್ನು ಬಿತ್ತರಿಸುವ ಸುರುಳಿಗಳೂ ಜನಪ್ರಿಯವಾಗಿವೆ.

ಆ. ಪಬೂಜಿ–ಕಿ–ಪದ್ :

ಇದನ್ನು ಕಾವ್ಯ (ಕವಿಯ) ವಸ್ತ್ರ ಎಂದು ಕರೆಯುತ್ತಾರೆ. ವಿವಿಧ ವರ್ಣಗಳಲ್ಲಿ

ಅಚ್ಚೊತ್ತು (ಬ್ಲಾಕ್ ಮುದ್ರಣ) ಮಾಡಿರುವ ಈ ಬಟ್ಟೆ ಸಾಮಾನ್ಯವಾಗಿ 4 x18 ಅಡಿಯಷ್ಟು ವಿಸ್ತಾರವುಳ್ಳದ್ದು. ಈ ವಿಸ್ತಾರವಾದ ಸುರುಳಿ ಚಿತ್ರ ರಾಜಾಸ್ತಾನದ ಮಾರವಾರದಲ್ಲಿ ತಯಾರಾದುದು. ಊರಿಂದೂರಿಗೆ ಹೋಗಿ, ಅಲ್ಲಿ ಜನರಂಜನೆ ಮಾಡುವ ಕಲಾವಿದರು ಈ ವಸ್ತ್ರವನ್ನು ತಮ್ಮ ಕಾರ್ಯಕ್ರಮದ ಸಹಾಯಕ ಅಂಗವಾಗಿ ಬಳಸಿಕೊಳ್ಳುತ್ತಾರೆ. ಸಾಮಾನ್ಯವಾಗಿ ಈ ಕಥೆಗಾರರು ಹೇಳುವ ಕಥೆಗಳು ದಂತಕಥೆಗಳಾಗಿದ್ದು, ಅವು ಮಾರವಾರದ ಥಾಕೋರರ ಆರಾಧ್ಯದೈವವಾದ ಪಬು ಎಂಬುವವನನ್ನು ಕುರಿತಾದುವು. ಇವನು ಕೊಲು ಎಂಬ ಊರಿನವನು. ಗೋರಕ್ಷಕ, ಗೋಪಾಲ ಎಂಬ ಪ್ರತೀತಿಯುಳ್ಳ ಇವನ ಬಗೆಗೆ ಅನೇಕ ದಂತಕಥೆಗಳಿದ್ದು, ಇಂದಿಗೂ ಇವನು ಪೂಜ್ಯ ವ್ಯಕ್ತಿಯಾಗಿದ್ದಾನೆ.

ಇ. ಚಿತ್ರಕಥಿ :

ಚಿತ್ರಕಥಿ ಎಂದರೆ ಚಿತ್ರಗಳ ಸಹಾಯದಿಂದ ಕಥೆ ಹೇಳುವವನು ಎಂದರ್ಥ. ಇಂಥ ಸಂಪ್ರದಾಯ ಮಹಾರಾಷ್ಟ್ರದ ಪಿಂಗುಳಿ ಎಂಬ ಹಳ್ಳಿಯಲ್ಲಿ ಇಂದಿಗೂ ಜೀವಂತವಾಗಿದೆ.

ಚಿತ್ರಕಥಿಯ ಇನ್ನೊಂದು ಪುರಾತನ ಕೇಂದ್ರ ಅದೇ ರಾಜ್ಯದ ಪೈಥಾನ್ ಎಂಬಲ್ಲಿತ್ತು. ಈ ಸ್ಥಳದಲ್ಲಿ ಲಭ್ಯವಾಗಿರುವ ಚಿತ್ರಗಳಿಗೆ 'ಪೈಥಾನ್ ಚಿತ್ರ'ಗಳೆಂದೇ ಹೆಸರು. ಈ ಮಾರ್ಗದ ಮಾದರಿಗಳನ್ನು ಕಲಾಶಾಲೆಗಳಲ್ಲಿ ಕಾಣಬಹುದು. ಆದರೆ ಇಂದಿನ ಪೈಥಾನ್‌ನಲ್ಲಿ ಪೈಥಾನ್ ಚಿತ್ರಗಳ ಬಗೆಗೆ ತಿಳಿದಿರುವ ಯಾವುದೇ ಸಮುದಾಯದ ಕುರುಹು ಇಲ್ಲ.

ಪಿಂಗುಳಿ ಚಿತ್ರಕಥಿಗಳ ಮಾತೇ ಬೇರೆ. ಥಾಕಾರ್ ಎಂದು ಗುರುತಿಸಲ್ಪಡುವ ಅಲೆಮಾರೀ ಬುಡಕಟ್ಟಿಗೆ ಸೇರಿದ ಇವರು ಸೊಗಸಾದ ಕಥಾ ನಿರೂಪಕರು. ಈ ಬುಡಕಟ್ಟಿನ ಅನೇಕ ಕುಟುಂಬಗಳಲ್ಲಿ ಪೋತಿಗಳನ್ನು (ಚಿತ್ರಗಳನ್ನೊಳಗೊಂಡ ಬಿಡಿ ಹಾಳೆಗಳ ಪುಸ್ತಕ) ಪವಿತ್ರ ಆಸ್ತಿಗಳಂತೆ ಕಾಪಾಡಿಕೊಂಡು ಬರಲಾಗಿದೆ. ಇಂದಿಗೂ ಪಿಂಗುಳಿ ಚಿತ್ರಕಥಿಗಳು ತಲೆಮಾರುಗಳ ಹಿಂದೆ ತಮ್ಮ ಪೂರ್ವಜರು ನೀಡುತ್ತಿದ್ದಂತೆಯೇ ಕಾರ್ಯಕ್ರಮಗಳನ್ನೂ ನೀಡಬಲ್ಲರು.

'ಚಿತ್ರಕಥಿ ಪೋತಿ' ಎಂಬುದು ಕಥೆಯ ಘಟನೆಗಳ ಸರಣಿಗನುಸಾರವಾಗಿ ಜೋಡಿಸಿ, ಅಂಟಿಸಿರುವ ಮಿನಿಯೇಚರ್ ಚಿತ್ರಗಳ ಒಂದು ಪುಸ್ತಕ. ಪ್ರತಿಯೊಂದು ಚಿತ್ರವೂ ಸುಮಾರು 25x38 ಸೆಂಟಿಮೀಟರ್ ಪ್ರಮಾಣವುಳ್ಳದ್ದಾಗಿರುತ್ತದೆ. ಒಂದೊಂದು ಪೋತಿಯಲ್ಲೂ 60ರಿಂದ 100 ಚಿತ್ರಗಳಿರಬಹುದು. ಪ್ರತಿಯೊಂದು ಪೋತಿಗೂ ನಂದೀ ಪುರಾಣ, ಇಂದ್ರಜಿತು ವಧೆ, ಅರಣ್ಯಕಾಂಡ, ದುಂಧುಬಿ ಇತ್ಯಾದಿ ಶೀರ್ಷಿಕೆಯಿರುತ್ತದೆ. ಕಥೆಯ ಘಟನೆಗಳು ಜರುಗಿದಂತೆ, ಅವಕ್ಕೆ ಸಂಬಂಧಪಟ್ಟ, ಆಯಾ ಘಟನೆಗಳನ್ನು ಉದಾಹರಿಸುವ ಚಿತ್ರಗಳನ್ನೂ ಚಿತ್ರಕಥಿಗಳು ಪ್ರೇಕ್ಷಕರಿಗೆ ತೋರಿಸುತ್ತಾರೆ.

ಕಾರ್ಯಕ್ರಮದ ನಿರೂಪಣೆಯಲ್ಲಿ ಮುಖ್ಯ ನಿರೂಪಕನಿಗೆ ಸಹಾಯಕರಾಗಿ ಇಬ್ಬರು ಮೂವರು ಹಾಡುಗಾರರೂ, ಸಂಗೀತಗಾರರೂ ಇದ್ದು, ಇವರು ತಮ್ಮ ತಮ್ಮ ನಡುವೆ ಗದ್ಯ ಸಂಭಾಷಣೆಗಳನ್ನೂ, ಹಾಡುಗಳನ್ನೂ ಪರಸ್ಪರ ಹೇಳುತ್ತಿರುತ್ತಾರೆ. ಒಂದು ಚಿತ್ರಕಥಿ ಕಾರ್ಯಕ್ರಮ ಅವಧಿ ಎರಡರಿಂದ ಮೂರು ತಾಸುಗಳು.

ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ ಪೈಥಾನ್ ಮತ್ತು ಪಿಂಗುಳಿಗಳೆರಡೂ ವಿಭಿನ್ನ ಮೂಲಗಳಿಂದ ಬಂದಂಥವು ಎಂಬುದು. ಪೈಥಾನ್ ಚಿತ್ರಶೈಲಿ ಆಂಧ್ರ ಶೈಲಿಯ ಮೂಲದಿಂದ, ಮುಖ್ಯವಾಗಿ ತೊಗಲು ಗೊಂಬೆಯಾಟದ ಪ್ರಕಾರದಿಂದ ಮೂಡಿಬಂದಿದ್ದರೆ, ಪಿಂಗುಳಿಯ ಮೇಲೆ ರಾಜಾಸ್ತಾನೀ ಚಿತ್ರಕಲೆಯ ಪ್ರಭಾವವಿರುವುದು ಎದ್ದು ಕಾಣುತ್ತದೆ.

ಪಟ, ಸುರುಳಿ ಹಾಗೂ ದೇವಸ್ಥಾನಗಳಲ್ಲಿರುವ ತೂಗುಚಿತ್ರಗಳು

ಅ. *ಪುರಿಚಿತ್ರಕಲೆ (ಒರಿಸ್ಸಾ) :*

ಹಿಂದೂ ಯಾತ್ರಾರ್ಥಿಗಳ ಏಳು ಪ್ರಸಿದ್ಧ ಪುಣ್ಯಕ್ಷೇತ್ರಗಳಲ್ಲಿ ಒರಿಸ್ಸಾದ ತೀರಪ್ರದೇಶದಲ್ಲಿರುವ ಪುರಿಯೂ ಒಂದು. ಜೂನ್ ತಿಂಗಳಿನಿಂದ ಜುಲೈ ತಿಂಗಳವರೆಗೆ ಅಲ್ಲಿ ನಡೆಯುವ ರಥಯಾತ್ರೆ ಅಥವಾ ರಥೋತ್ಸವದಿಂದಾಗಿ ಪುರಿ ಜಗತ್ಪ್ರಸಿದ್ಧವಾಗಿದೆ. ಈ ಉತ್ಸವದ ಉದ್ದೇಶ ಜಗನ್ನಾಥನ ಮಹಿಮೆ–ವೈಭವಗಳನ್ನು ಹಾಡಿ–ಹೊಗಳಿ, ಕೃಷ್ಣನಾಗಿ ಜಗನ್ನಾಟಕದಲ್ಲಿ ಅವನು ಆಡಿದ ಪಾತ್ರವನ್ನು ಕೊಂಡಾಡುವುದು.

ದೇವಸ್ಥಾನದ ನೂರು ಅಡಿಯ ಆಸು–ಪಾಸಿನಲ್ಲಿ ಮಾರಾಟಕ್ಕೆಂದು ಇಟ್ಟಿರುವ ಜಗನ್ನಾಥನ ಚಿತ್ರಗಳು ಸಾವಿರಗಟ್ಟಲೆ ಕಾಣಸಿಗುತ್ತವೆ. ಇವು ರಥೋತ್ಸವಕ್ಕೆಂದು ಬಂದಾಗ ಯಾತ್ರಿಕರು ಊರಿಗೆ ಮರಳಿದ ಮೇಲೆ ತಾವು ಪಡೆದುಕೊಂಡ ಮಹಾನುಭಾವರ ಸವಿನೆನಪಾಗಿ ಉಳಿಯಲಿ ಎಂಬ ಉದ್ದೇಶದಿಂದ ರಚಿತವಾದುವು. ಇವುಗಳ ಕಲಾವಿದರು ಚಿತ್ರಕಾರರ (ವೃತ್ತಿ ಕಲಾವಿದರು) ಉಪಜಾತಿಯೊಂದಕ್ಕೆ ಸೇರಿದವರು. ಬಟ್ಟೆಗಳ ಮೇಲೆ ರಚಿತವಾದ ಈ ಚಿತ್ರಗಳು ಪುರಿಯಲ್ಲೇ – ಅಂದರೆ ದೇವಸ್ಥಾನದ ನೂರಿನ್ನೂರು ಅಡಿ ಪರಿಧಿಯಲ್ಲೇ ತಯಾರಾಗಿ ಜಗನ್ನಾಥನ ಪವಿತ್ರ ನೆನಪಿಗಾಗಿ ಕಾಣಿಕೆಯೊಂದನ್ನು ಕೊಂಡೊಯ್ಯಬಯಸುವ ಯಾತ್ರಿಕರಿಗೆ ಮಾರಾಟವಾಗುತ್ತವೆ. ಇಂದು ಲಭ್ಯವಿರುವ ಅತ್ಯಂತ ಹಳೆಯ ಚಿತ್ರಗಳು ಕ್ರಿ.ಶ. 1800 ಅಥವಾ ಅದಕ್ಕೂ ಹಿಂದೆ ರಚಿತವಾದುವು. ಬಟ್ಟೆಯ ಮೇಲೆ ಬರೆಯಲಾಗಿರುವ ಈ ಕಲಾಕೃತಿಗಳು ಮಣ್ಣಿನ ವರ್ಣಗಳಿಂದ ಕಡುಕೆಂಪು, ಮಂದವಾದ ನೀಲಿ, ತೆಳು ಹಸಿರು ಮತ್ತು ಕಡುಹಳದಿಯಿಂದ ಕೂಡಿದ್ದು, ಜಗನ್ನಾಥ ದೇವಾಲಯದ ತ್ರಿಮೂರ್ತಿಗಳನ್ನು ವೈವಿಧ್ಯ ಪಾತ್ರಗಳಲ್ಲಿ ತೋರಿಸುತ್ತವೆ.

ಆ. ಚಿತ್ರಪಠ

ಬಟ್ಟೆಯ ಮೇಲೆ ಆಕಾರಗಳನ್ನು ಚಿತ್ರಿಸುವ ಪಠ–ಚಿತ್ರಕಲೆ ಎಂಬ ಒಂದು ಕಲಾಸಂಪ್ರದಾಯ ಮಹಾರಾಷ್ಟ್ರದ ಕೆಲವು ಭಾಗಗಳಲ್ಲಿ 18–19ನೇ ಶತಮಾನದಲ್ಲಿ ಪ್ರಚಲಿತವಾಗಿತ್ತು. ಕೆಲವು ಶ್ರೀಮಂತ ಕುಟುಂಬಗಳವರು ವಿಶೇಷ ಸಮಾರಂಭಗಳಂದು ಆಚರಿಸಬೇಕಾದ ಪೂಜೆ, ಪುನಸ್ಕಾರಗಳ ಸಲುವಾಗಿ ಬಹಳ ದೊಡ್ಡದಾದ ಪಠಗಳನ್ನೂ ಹೊಂದಿರುತ್ತಿದ್ದರು. ಪಠಚಿತ್ರಕಲೆಯ ಈ ಸಂಪ್ರದಾಯ ಈ ಶತಮಾನದ ಹೊಸತರಲ್ಲೇ ಅಂತ್ಯಗೊಂಡಿತು. ಇಂದು ಈ ಕಲೆಯ ಕೆಲವು ಮಾದರಿಗಳು ಮುಂಬಯಿ, ಪುಣೆ, ಅಹಮದ್‌ನಗರ, ಕೊಲ್ಲಾಪುರ ಮತ್ತು ನಾಗಪುರದ ಸಮೀಪವಿರುವ ಕರಂಜಾದ ಕಲಾಶಾಲೆಗಳಲ್ಲಿವೆ. ಈ ಕಲಾ ಮಾರ್ಗದ ಕೆಲವು ಪ್ರಸಿದ್ಧ ಕಲಾಕೃತಿಗಳೆಂದರೆ –

– ಪಂಚ ಕಲ್ಯಾಣಪಟ; ಔರಂಗಾಬಾದ್ ಪಂಥಕ್ಕೆ ಸೇರಿದ ಈ ಪಟ ಕ್ರಿ.ಶ. 1680–1700ರಲ್ಲಿ ರಚಿತವಾಗಿರಬೇಕು. ಕರಂಜಾದ ಸೇನಗಾನ ಮಂದಿರದ ಸಂಗ್ರಹ.

– ಚೈತ್ರಗೌರೀ ಪಠ – ಪೂನಾಪಂಥಕ್ಕೆ ಸೇರಿದ ಈ ಪಟ 19ನೇ ಶತಮಾನದಲ್ಲಿ ರಚಿತವಾಗಿರಬೇಕು. ಪೂನಾದ ಕೇಳ್ಕರ್ ಕಲಾಶಾಲೆಯ ಸಂಗ್ರಹ.

ಇ. ಕಲಂಕಾರಿ :

ದೇವಸ್ಥಾನದ ಗೋಡೆಗಳ ಮೇಲೆ ತೂಗು ಹಾಕುವ ಸಲುವಾಗಿ, ದೇವ–ದೇವತೆಗಳ, ಕಥೆ–ಪುರಾಣಗಳನ್ನು ವಿಸ್ತಾರವಾದ ಬಟ್ಟೆಯ ಮೇಲೆ ಚಿತ್ರಿಸುವ ಒಂದು ಸಂಪ್ರದಾಯ ಇದು. ಕಲಾವಿದ ನೇರವಾಗಿ ಬಟ್ಟೆಯ ಮೇಲೆ ಚಿತ್ರಗಳನ್ನು ರಚಿಸಿ ಅನಂತರ ಅವಕ್ಕೆ ವರ್ಣಗಳನ್ನು ಹಾಕುತ್ತಾನೆ. ಈ ಕಲಾಪ್ರಕಾರ ಪ್ರಸಿದ್ಧ ದೇವಾಲಯಗಳಿರುವ ಯಾತ್ರಾಸ್ಥಳಗಳಲ್ಲೇ ಬೆಳೆದುಬಂದಿದೆಯೆಂಬುದು ಗಮನಿಸಬೇಕಾದ ಸಂಗತಿ. ಮದರಾಸಿನ ಉತ್ತರಕ್ಕಿರುವ ಪ್ರಸಿದ್ಧ ಯಾತ್ರಾಸ್ಥಳ ತಿರುಪತಿಯ ಸಮೀಪವಿರುವ ಕಾಳಹಸ್ತಿ ಈ ಕಲಾಪ್ರಕಾರದ ಅತ್ಯಂತ ಪ್ರಾಚೀನ ಕೇಂದ್ರ. ಕಲಂಕಾರಿಗಳ ಮೂಲ ಉದ್ದೇಶ ಕಥಾನಕವಾಗಿದ್ದು, ಕಥಾವಸ್ತುವನ್ನೂ ಹಿಂದೂ ಪುರಾಣಗಳಿಂದ ಆಯ್ದುಕೊಂಡಿರುತ್ತಾರೆ. ಮಧ್ಯೆ ಒಂದು ಕೇಂದ್ರ ಪ್ರತಿಮೆ ಅಥವಾ ಅಂಕಣಗಳು ಅದರ ಸುತ್ತ ಸಾಲಾಗಿ ಜೋಡಿಸಿರುವ ದೃಶ್ಯಗಳು ಮತ್ತು ಚಿತ್ರಗಳ ಆವರಣ ಪ್ರತಿಯೊಂದು ದೃಶ್ಯ ಚಿತ್ರಕ್ಕೂ ಸಂಬಂಧಪಟ್ಟ ಕಥಾನಕದ ಸಾಲುಗಳು, ಈ ಚೌಕದ ಮೊನಚು, ತೀಕ್ಷ್ಣತೆಯನ್ನು ಮೃದುಗೊಳಿಸಲೆಂದೇ ಚಿತ್ರಿತವಾದ ಪುಷ್ಪಗಳ ಅಂಚು ಮತ್ತು ಪೌರಾಣಿಕ ಪಕ್ಷಿಗಳು – ಇದು ಸಾಮಾನ್ಯವಾಗಿ ಕಲಂಕಾರಿಯ ಹಂದರ.

ದೇವಾಲಯಗಳ ಗೋಡೆಗಳ ಮೇಲೆ ರಾರಾಜಿಸುತ್ತಿರುವ ಈ ತೂಗುಚಿತ್ರಗಳ ಸಂಪ್ರದಾಯ ಇತ್ತೀಚೆಗೆ ದೇಶ–ವಿದೇಶಗಳಲ್ಲಿ ಪ್ರಸಿದ್ಧವಾಗುತ್ತಿದ್ದು, ಜನಪ್ರಿಯವಾಗುವ ಲಕ್ಷಣಗಳು ಕಾಣುತ್ತಿವೆ.

ಈ. ಮೂಡಾಪೂಚಾಗಿಯೇ ರಚಿತವಾದ ತೂಗು ಚಿತ್ರಗಳು :

'ಮಾತಾನಿ ಪಛೇಡಿ' ಎಂದು ಪ್ರಸಿದ್ಧವಾಗಿರುವ 19 x 5 ಅಡಿ ಅಡ್ಡಗಲದ ಈ ತೂಗುಚಿತ್ರಗಳು ಅಚ್ಚೊತ್ತಿನಿಂದ ಬಟ್ಟೆಯ ಮೇಲೆ ಮುದ್ರಣಗೊಂಡಿರುತ್ತವೆ. ಇದನ್ನ ಗುಜರಾತ್ ರಾಜ್ಯದ ಅಹಮದಾಬಾದಿನ ಹರಿಜನ ಕುಟುಂಬಗಳವರು ತಯಾರಿಸುತ್ತಾರೆ. ಮಹಾಮಾತೆಯಾದ ದುರ್ಗೆ ವಿಜಯೋತ್ಸವದಿಂದ ಮಹಿಷವನ್ನೇರಿ ಬರುತ್ತಿರುವುದೇ ಈ ಚಿತ್ರಗಳ ಮುಖ್ಯ ವಸ್ತು. ಅವಳ ಸುತ್ತ ಪುರಾಣ ಕಥೆಗಳ ಚಿತ್ರಣದ ಚಕ್ರವಿರುತ್ತದೆ.

*   *   *   *   *

ಇವು ನಮ್ಮ ಸಂಸ್ಕೃತಿಗೆ ಸೇರಿದ ಕೆಲವು ಜಾನಪದ ಹಾಗೂ ಜನಪ್ರಿಯ ಕಲಾಪರಂಪರೆಯ ಮಾದರಿಗಳು. ವಿಸ್ತಾರವಾದ ಈ ಭವ್ಯ ಹಿನ್ನಲೆಯಲ್ಲಿ 'ಶುಭರಾಯ ಮಠದ ಕಲೆ'ಯ ಸಾಂಸ್ಕೃತಿಕ ಮತ್ತು ಕಲಾತ್ಮಕ ಮೌಲ್ಯಗಳ ನಿಷ್ಕರ್ಷೆ ಮಾಡುವ ಸಾಹಸಕ್ಕೆ ಕೈ ಹಾಕಬಹುದು.

ತನ್ನದೇ ಆದ ವಿಶಿಷ್ಟ ಪ್ರತಿಮಾ ಶೈಲಿ ಹಾಗೂ ಸುಸಂಗತ ವಿನ್ಯಾಸಗಳನ್ನೊಳಗೊಂಡ ಇಂಥದೊಂದು ಕಲಾವಿಧಾನ ಮೂಡಿಬಂದುದೇ ಒಂದು ವಿಶೇಷವೆಂಬ ಸಂಗತಿ 'ಶುಭರಾಯ ಮಠದ ಕಲೆ'ಯನ್ನು ನನ್ನಂತೆಯೇ ಕೂಲಂಕಷವಾಗಿ ಅಭ್ಯಾಸ ಮಾಡಿರುವ ಅನೇಕರಿಗೆ ಕಂಡುಬಂದಿರಬಹುದು. ಶುಭರಾಯ ಮಠದಲ್ಲಿ ಜೀವ ತಳೆದಿರುವ ಈ ಚಿತ್ರಗಳ ಹೊರತಾಗಿ ಸ್ಪಷ್ಟವಾಗಿ ಶೋಲಾಪುರಕ್ಕೆ ಸೇರಿದ್ದೆಂದು ಗುರುತಿಸಬಹುದಾದ ಬೇರಾವ ಕಲಾಚಿತ್ರಗಳೂ ನಮಗೆ ಲಭ್ಯವಾಗಿಲ್ಲ.

ವಿಷಾದದ ಸಂಗತಿ ಎಂದರೆ 'ಶುಭರಾಯ ಮಠದ ಕಲೆ' ಅಲ್ಪಾಯುಷಿಯಾದ ಒಂದು ಕಲಾಮಾರ್ಗ ಎನ್ನುವುದು. ತನ್ನ ಹಿಂದಿನ ಯಾವುದೇ ಪಂಥದೊಂದಿಗೂ ಸಂಬಂಧ ಹೊಂದಿರದ ಅದು ಶುಭರಾಯರ ನಂತರ ಶುಭರಾಯರ ಮಠದಲ್ಲೂ ಮುಂದುವರಿಯಲಿಲ್ಲ. ಈ ಕಲಾಚಿತ್ರಗಳು ಕಲೆಯನ್ನು ಸೃಷ್ಟಿಸಬೇಕೆಂಬ ಯಾವುದೇ ಪ್ರಜ್ಞಾಪೂರ್ವಕ ಪ್ರಯತ್ನ ಮಾತ್ರವಲ್ಲ, ಹಾಗೆ ತನ್ನಿಂದ ಸೃಷ್ಟಿಯಾದ ಚಿತ್ರಗಳು ಕಲೆ ಎಂಬ ಪ್ರಜ್ಞೆಯೂ ಚಿತ್ರಕಾರನಿಗಿರಲಿಲ್ಲ. ಅವನ ದೃಷ್ಟಿಯಲ್ಲಿ ಮಠದ ದೇವರ ಮಂದಾಸನ ಅಥವಾ ಮಂಟಪವನ್ನು ನಿರ್ಮಿಸುವಾಗ ಮತ್ತು ಅದರ ಅಲಂಕರಣದ ಸಲುವಾಗಿ ಮೂಡಿದ ಈ ಚಿತ್ರಕಲೆ ಒಂದು ವಿಧಿ ಸಂಬಂಧವಾದ ಕ್ರಿಯೆ ಅಷ್ಟೆ.

ಗಣಪತಿಯ ಮೂರ್ತಿಯನ್ನು ಮನೆಗಳಲ್ಲಿ ಮತ್ತು ಸಾಮುದಾಯಿಕವಾಗಿ ಪೂಜಿಸುವ ಪರಂಪರೆಯೇ ಇರುವ ಮಹಾರಾಷ್ಟ್ರದಲ್ಲಿ ಈ ಮಂಟಪದ ಅಲಂಕರಣ ಸರ್ವೇಸಾಮಾನ್ಯವಾದ ಸಂಗತಿ. ಮಹಾರಾಷ್ಟ್ರದಲ್ಲಿ ಗಣೇಶನ ಪ್ರತಿಮೆಯನ್ನು ಪೂಜಿಸುವ ಈ ಹಬ್ಬ ಬಂಗಾಳದಲ್ಲಿ ದುರ್ಗಾಪೂಜೆ ಜನಪ್ರಿಯವಾಗಿರುವಷ್ಟೇ ಪ್ರಸಿದ್ಧವಾಗಿದೆ.

ಗಣೇಶ ಪ್ರತಿಮೆಯನ್ನು ಅಲಂಕರಿಸಲ್ಪಟ್ಟ ಮಂಟಪದೊಳಗೆ ಕೂರಿಸುತ್ತಾರೆ. ಮಖಾರ ಮೆಹಿರಾ ಎಂಬ ಹೆಸರಿನ ಈ ಮಂಟಪ ಮರದಿಂದ ಮಾಡಿದ್ದು. ಮಂಟಪದ ಒಳಭಾಗದ ಹಲಗೆಗಳನ್ನು ಅಲಂಕೃತವಾದ ಗಾಜಿನ ಅಥವಾ ಕನ್ನಡಿಗಳ ಅಂಕಣ ಗಳಿಂದ ಅಲಂಕರಿಸುತ್ತಾರೆ. ಹೀಗೆ ಅಲಂಕರಿಸಿದ ಗಾಜು – ಕನ್ನಡಿಯ ಮೇಲೆ ಕೆಲವು ಚಿತ್ರಗಳೂ ಇದ್ದು, ಅವು ಕನ್ನಡಿಯಿಂದ ಪ್ರತಿಫಲಿಸಿದ ಬೆಳಕಿನಲ್ಲಿ ಮನೋಹರವಾಗಿ ಕಾಣುತ್ತವೆ.

ಶುಭರಾಯ ಮಠದ ಇವರ ಕಲಾಚಿತ್ರಗಳು ದೇವರ ಪ್ರತಿಮೆಯನ್ನಿಡುವ ಮಂಟಪದ ದ್ವಾರದ ಅಲಂಕಾರಕ್ಕಾಗಿ ರಚನೆಯಾದಂತವು. ಈ ಕಲಾಚಿತ್ರಗಳನ್ನು ಮೊದಲು ಕಾಗದದ ಮೇಲೆ ಬಿಡಿಸಿಕೊಂಡು, ಅನಂತರ ಮಂಟಪದ ಆಕಾರಕ್ಕನುಗುಣ ವಾದ ಆಕಾರವುಳ್ಳ ಪ್ಯಾನೆಲ್‌ಗಳ ಮೇಲೆ ಅಂಟಿಸಲಾಗಿದೆ. ಮಂಟಪದ ಕೆಲವು ಭಾಗಗಳು ಮುಮ್ಮೂಲೆಯಾಗಿರುವುದರಿಂದ ಅಲ್ಲಿ ಅಂಟಿಸಬೇಕಾದ ಚಿತ್ರಗಳನ್ನು ಅದೇ ಆಕಾರದಲ್ಲಿ ಕತ್ತರಿಸಿ ಅಂಟಿಸಲಾಗಿದೆ. ಬಿದಿರಿನ ಗಳುವಿನಿಂದ ಮಾಡಲಾಗಿರುವ ಈ ಮಂಟಪವನ್ನು ಪ್ರತಿವರ್ಷವೂ ಹೊಸದಾಗಿ ನಿರ್ಮಿಸುವ ಪದ್ಧತಿಯಿರಲಿಲ್ಲವೆಂದು ಕಾಣುತ್ತದೆ. ಒಮ್ಮೆ ನಿರ್ಮಿಸಿದ ಮಂಟಪವನ್ನೇ ವರ್ಷ ವರ್ಷವೂ ಉಪಯೋಗಿಸುತ್ತಿದ್ದುದರಿಂದ, ಪ್ರತಿವರ್ಷವೂ ಹೊಸಚಿತ್ರಗಳನ್ನು ನೂತನವಾದ ಕಾಗದದ ಮೇಲೆ ಬಿಡಿಸಿ ಅವುಗಳನ್ನು ಹಿಂದಿನ ವರ್ಷಗಳ ಚಿತ್ರಗಳ ಮೇಲೆಯೇ ಅಂಟಿಸುತ್ತಿದ್ದರು ಎಂದು ಕಾಣುತ್ತದೆ. ಹಾಗಾಗಿ ಎಲ್ಲೆಲ್ಲಿ ಚಿತ್ರಗಳ ಮೇಲಿನ ಪದರ ಹರಿದಿದೆಯೋ ಅಲ್ಲಿ ಅದರ ಕೆಳಪದರದಲ್ಲಿರುವ ಚಿತ್ರಗಳು ಕಾಣುತ್ತವೆ. ಹೀಗೆ ಬೇರೆ ಬೇರೆ ಪದರಗಳಲ್ಲಿರುವ ಚಿತ್ರಗಳ ಕಲಾವಂತಿಕೆಯಲ್ಲಿ ವ್ಯತ್ಯಾಸವಿರುವುದು ನಿಜ. ಆದರೆ ಈ ವ್ಯತ್ಯಾಸಗಳು ಅಡಿಯ ಮತ್ತು ಮೇಲಿನ ಪದರದ ಚಿತ್ರಗಳ ಶೈಲಿ ಬೇರೆ ಬೇರೆಯೇ ಆಗಿವೆ ಎಂದು ಸೂಚಿಸುವಷ್ಟು ಗಮನಾರ್ಹವಾಗಿಲ್ಲ. ಬದಲಾಗಿ ಒಂದೇ ಶೈಲಿ ಹೇಗೆ ಬೇರ ಬೇರೆ ಹಂತಗಳಲ್ಲಿ ಮೂಡಿಬಂದಿತು ಎಂಬುದನ್ನೂ ಈ ವ್ಯತ್ಯಾಸಗಳು ಸೂಚಿಸುತ್ತವೆ.

ಮೊದಲೇ ಹೇಳಿದ ಹಾಗೆ ಅಂದು ಪ್ರಚಲಿತವಾಗಿದ್ದು, ಜನಪ್ರಿಯವೂ ಆಗಿದ್ದ ಮಿನಿಯೇಚರ್ ಕಲೆ, ಭಿತ್ತಿ ಚಿತ್ರಕಲೆ ಅಥವಾ ತೂಗುಚಿತ್ರಕಲೆ ಅಥವಾ ಇನ್ನಾವುದೇ ಕಲಾಪ್ರಕಾರವಾಗಲೀ ಶುಭರಾಯಮಠದ ಕಲೆಯ ಮೇಲೆ ನೇರವಾದ ಪ್ರಭಾವ ಬೀರಿದಂತೆ ಕಾಣುವುದಿಲ್ಲ. ಆದರೂ ಈ ಎಲ್ಲ ಜನಪ್ರಿಯ ಹಾಗೂ ಜಾನಪದ ಪರಂಪರೆಗಳೊಂದಿಗೆ ಶುಭರಾಯ ಮಠದ ಕಲೆಯನ್ನು ಒಂದುಗೂಡಿಸುವ ಅಂಶವೆಂದರೆ ಈ ಎಲ್ಲ ಪ್ರಕಾರಗಳಂತೆ ಅದೂ ಕೂಡ ಯಾವುದೋ ಒಂದು ಆಚರಣೆಯ ಸಂದರ್ಭದಲ್ಲಿ, ಅದರ ಉದ್ದೇಶಕ್ಕಾಗಿ ರಚಿತವಾದಂಥದ್ದು ಮತ್ತು ಆ ಕಲಾಪ್ರಕಾರಗಳಂತೆ ಕೃಷ್ಣ, ಯಶೋಧ, ಗೋಪಿಯರ ಕಥೆಯನ್ನೂ ಹೇಳುವ ಇದು ಕೂಡ ಕಥನೋದ್ದೇಶ ಮೂಲವಾದುದು ಎಂಬುದು. ಕಥನಾತ್ಮಕ ಕಲೆಯ ಶ್ರೇಷ್ಠ ಮಾದರಿಗಳಾದ ಶುಭರಾಯ

ಮಠದ ಚಿತ್ರಗಳನ್ನೂ ಪುರಿ ಚಿತ್ರಕಲೆ, ಮಹಾರಾಷ್ಟ್ರ ಪಟಚಿತ್ರಗಳು ಮತ್ತು ಕಲಂಕಾರಿಗಳೊಂದಿಗೂ ಹೋಲಿಸಬಹುದು. ಈ ಯುವ ಕಲಾಸಂಪ್ರದಾಯವೂ ಜಾದೂ ಪಟುವಾ, ಚಿತ್ರಕಥಿ ಮತ್ತು ಪಾಬೂಜಿ ಪದಗಳ ಹಾಗೆ ಕಥೆ ಹೇಳುವ ಕಾರ್ಯಕ್ರಮವೊಂದರ ಸಹಾಯಕ ಕಲೆಯಾಗಿ ಹುಟ್ಟಿರಲಿಲ್ಲ. ಮೇಲೆ ಹೇಳಿದ ಎಲ್ಲ ಪರಂಪರೆಗಳೂ ಕಥನ ಕಲಾಮಾರ್ಗಗಳೇ ಆದರೂ ಮೊದಲ ಮೂರು ಸಂಪ್ರದಾಯಗಳ ಉದ್ದೇಶ ಇವರ ಮೂರು ಸಂಪ್ರದಾಯಗಳ ಉದ್ದೇಶಕ್ಕಿಂತ ಭಿನ್ನವಾದುದು. ಇದೇ ರೀತಿಯಲ್ಲಿ ಶುಭರಾಯ ಮಠದ ಕಲೆಗೂ, ಪುರಿ, ಕಲಂಕಾರಿ ಮತ್ತು ಪಟ ಕಲೆಗೂ ಇರುವ ಮೂಲಭೂತ ವ್ಯತ್ಯಾಸವೆಂದರೆ ಶುಭರಾಯ ಮಠದ ಕಲೆ ಕಾಗದ, ಗೋಡೆಯ ರೀತಿಯ ಚಪ್ಪಟೆಯಾದ ಮೇಲ್ಮೈಯುಳ್ಳ ಕ್ಯಾನ್‌ವಾಸ್ ಮೇಲೆ ರಚಿತವಾಗಿರದೆ ತ್ರಿಗುಣಾಕೃತಿಯುಳ್ಳ ಮಂಟಪದ ಮೇಲೆ ಅಂಟಿಸಿರುವಂಥದು. ಪುರಿ, ಕಲಂಕಾರಿ ಮತ್ತು ಪಠಕಲೆಗಳು ಚಪ್ಪಟೆಯಾದ ಭಿತ್ತಿಯ ಮೇಲೆ ರಚಿತವಾಗಿರುವ ಸಾಂಪ್ರದಾಯಿಕ ಚಿತ್ರಗಳು. ಶುಭರಾಯಮಠದ ಕಲೆಯ ಇನ್ನೊಂದು ವಿಶೇಷವೆಂದರೆ ಈ ಚಿತ್ರಗಳನ್ನು ಅಂಟಿಸಿರುವ ಹಲಗೆಗಳು ಬೇರೆ ಬೇರೆಯೇ ಆದ ಅಂಕಣಗಳಾದರೂ, ಅವೆಲ್ಲವನ್ನೂ ಒಟ್ಟಿಗೇ ಪಕ್ಕಪಕ್ಕದಲ್ಲಿಟ್ಟು ವೀಕ್ಷಿಸಿದಾಗ ಅವುಗಳ ಸಂಸರ್ಗದಲ್ಲಿರುವ ಏಕತೆ ಮತ್ತು ಸಾವಯವ ಕಂಡುಬರುತ್ತದೆ. ಈ ಎಲ್ಲ ಚಿತ್ರಗಳಲ್ಲೂ ಸಮಾನವಾಗಿರುವ ಏಕ ಸೂತ್ರತೆ ಮತ್ತು ಭಾವಗೀತಾತ್ಮಕ ಚಲನಶೀಲತೆ, ಒಂದು ಅಂಕಣದಲ್ಲಿರುವ ಚಿತ್ರಗಳಿಂದ ಮತ್ತೊಂದು ಅಂಕಣದಲ್ಲಿರುವ ಚಿತ್ರಗಳಿಗೆ ಹರಿದು, ಎಲ್ಲವೂ ಏಕಸೂತ್ರದಿಂದ ಬಂಧಿತವಾಗಿ, ಚಿತ್ರಗಳು ಹೇಳುವ ಕಥೆಯ ನಿರೂಪಣೆಯಲ್ಲಿ ಸುಸಾಂಗತ್ಯ ಕಂಡುಬರುತ್ತದೆ.

ಈ ಚಿತ್ರಗಳ ಪ್ರತಿಮಾ ಗುಣ ಅನನ್ಯವಾದುದು. ಚಿತ್ರಗಳ ಅವಯುವಗಳ ಅಳತೆ, ಆಕಾರ ಮತ್ತು ಚಲನಶೀಲತೆಯಲ್ಲಿ ಸ್ವಲ್ಪಮಟ್ಟಿನ ಪ್ರಮಾಣರಾಹಿತ್ಯವಿದೆ ಎಂದು ಸಾಮಾನ್ಯ ವೀಕ್ಷಕನ ಕಣ್ಣಿಗೆ ಬಿದ್ದರೂ, ಅವುಗಳಲ್ಲಿರುವ ಒಂದು ತೆರನಾದ ತಾರ್ಕಿಕ ಏಕಸೂತ್ರತೆಯಿಂದ ಚಿತ್ರಗಳಲ್ಲಿ ಮಾನವಾಕೃತಿಗಳಿಗೆ ಅಸಾಧಾರಣವಾದ ಸೌಂದರ್ಯ ಬಂದಿದೆ.

ಪ್ರತಿಯೊಂದು ಮಾನವಾಕೃತಿಯೂ ಉಳಿದ ಎಲ್ಲ ಆಕೃತಿಗಿಂತಲೂ ಭಿನ್ನವಾಗಿದೆ. ವಿವಿಧ ಚರ್ಯೆಗಳಲ್ಲಿರುವ ಬಾಲಕೃಷ್ಣ, ರಾಧಾ–ಗೋಪಿಯರೊಂದಿಗೆ ಆಡುತ್ತಿರುವ ವೇಣುವಾದಕ ಕೃಷ್ಣ, ಬಲರಾಮ ಮುಂತಾದ ಎಲ್ಲಾ ಆಕೃತಿಗಳೂ ಏಕ ರೀತಿಯ ಪ್ರಮಾಣದಿಂದ ರಚಿತವಾಗಿದ್ದು, ಅವುಗಳ ಪ್ರತಿಮಾಗುಣವೂ ಏಕತೆರನಾಗಿದೆ. ನಗುಮುಖ, ಮೀನಿನಾಕಾರದ ವಿಶಾಲವಾದ ನೇತ್ರಗಳು, ಗಡುಸಾದ ಸೊಂಟ ಸ್ವಲ್ಪ ಅಗಲವಾಯಿತೇನೋ ಎನಿಸಿದರೂ ಮುಖದ ಆಕಾರಕ್ಕೆ ತಕ್ಕುದಾದ ಪಾದಗಳತ್ತ ಕ್ರಮೇಣವಾಗಿ ಜಾರುವ ಮನೋಹರವಾದ ನಿತಂಬ – ಹೀಗೆ ಪ್ರತಿಯೊಂದು ಚಿತ್ರವೂ ಸುಂದರವಾದ

ಪ್ರಮಾಣಬದ್ಧವಾದ ಪ್ರತಿಮಾ ಚಿತ್ರಗಳಾಗಿವೆ. ಪ್ರತಿಯೊಂದು ಆಕೃತಿಯನ್ನು ಶ್ರೀಮಂತವಾಗಿ ಅಲಂಕರಿಸಿದ್ದು, ಅವು ತೊಟ್ಟಿರುವ ವಸ್ತ್ರ ವಿನ್ಯಾಸದಲ್ಲಿ ಸೊಗಸಾದ ಸಾಗಂತ್ಯವಿದೆ. ಇತರ ಚಿತ್ರವಸ್ತುಗಳಾದ ತರುಗಳು, ಸುಮಗಳೂ, ಬೆಟ್ಟಗಳೂ, ಉಯ್ಯಾಲೆಗಳೂ – ಇತ್ಯಾದಿ. ಕಲಾವಿದ ಅಲಂಕರಣ ಕಲೆಯತ್ತ ತಿರುಗಿರುವುದನ್ನು ಸಾಂಕೇತಿಕವಾಗಿ ಸೂಚಿಸುತ್ತವೆ. ಉಪಯೋಗಿಸಿರುವ ವರ್ಣಗಳು ಪ್ರಖರವಾಗಿದ್ದು, ಅವು ತಮ್ಮ ಭೇದರಾಹಿತ್ಯ ಸೀಮಿತ ಪರಿಧಿಯಲ್ಲಿ ಅಸಾಧಾರಣವಾದ ಸಮತೋಲನವನ್ನು ಸಾಧಿಸಿವೆ.

ಈ ಚಿತ್ರಗಳನ್ನು ಹತ್ತಿರದಿಂದ ಪರೀಕ್ಷಿಸಿದಾಗ ಒಂದು ಕುತೂಹಲಕಾರಿಯಾದ ಸಂಗತಿ ನಮ್ಮ ಗಮನವನ್ನು ಸೆಳೆಯುತ್ತದೆ. ಈ ಚಿತ್ರಗಳನ್ನು ನೇರವಾಗಿ ಕಾಗದದ ಮೇಲೆ ವರ್ಣಗಳಿಂದ ರಚಿಸಿರದೆ ಬೇರೆ ಬೇರ ಕಾಗದದ ಹಾಳೆಗಳ ಮೇಲೆ ಮೊದಲು ಚಿತ್ರಗಳನ್ನು ಬರೆದು, ಅನಂತರ ಬೇಕಾದ ಭಾಗಗಳನ್ನು ಕತ್ತರಿಸಿ, ಪ್ಯಾನೆಲ್‌ಗಳ ಮೇಲೆ ಅಂಟಿಸಿರುವುದು ಕುತೂಹಲಕಾರಿಯಾದ ಸಂಗತಿ. ಚಿತ್ರಗಳನ್ನು ಅಂಟಿಸಿರುವ ಪ್ಯಾನೆಲ್‌ಗಳು ಕೆಲವೊಮ್ಮೆ ವರ್ಣಸಹಿತವಾಗಿದ್ದರೆ ಇನ್ನೂ ಕೆಲವು ವೇಳೆ ವರ್ಣರಹಿತವಾಗಿದ್ದು ಸಾದಾ ಆಗಿವೆ. ಪ್ರಾಯಶಃ ಹಿಂದಿನ ವರ್ಷಗಳಲ್ಲಿ ರಚಿಸಿ, ಉಪಯೋಗಿಸಲ್ಪಟ್ಟು ಮುಂದೆ ತ್ಯಜಿಸಿದ್ದ ಯಾವುದೋ ಚಿತ್ರದ ಬಿಡಿಭಾಗಗಳನ್ನು ಸುರಕ್ಷಿತವಾಗಿ ಕತ್ತರಿಸಿ ಹೊಸದಾಗಿ ರಚಿತವಾದ ಚಿತ್ರವೊಂದಕ್ಕೆ ಸೇರಿಸಿ, ಹಳೆಯ ಚಿತ್ರಗಳಿಗಿಂತ ಭಿನ್ನವಾದ ಹಿನ್ನೆಲೆಯ ಮೇಲೆ ಅಂಟಿಸಿರುವುದರಿಂದ ಹೀಗಾಗಿರಬಹುದು. ಇಷ್ಟಾಗಿಯೂ ಈ ಶಸ್ತ್ರ ಚಿಕಿತ್ಸೆಯನ್ನು ಅತ್ಯಂತ ಚಾಣಾಕ್ಷತೆ, ಬುದ್ಧಿವಂತಿಕೆಗಳಿಂದ ಮಾಡಲಾಗಿದೆ ಎಂಬುದನ್ನು ಅಲ್ಲಗಳೆಯಲಾಗದು.

ಕಲಾವಿದನ ರಚನಾ ಪ್ರಾವೀಣ್ಯ ಅಡ್ಡ–ಅಗಲವಾದ, ಲಂಬಾಕಾರದ, ಮೂಲೆಯಾಕಾರದ ಪ್ರತಿಯೊಂದು ಅಂಕಣಗಳಲ್ಲೂ ಎದ್ದು ಕಾಣುತ್ತದೆ. ಆಕೃತಿಗಳ ಸ್ಥಳ ನಿರ್ದೇಶನ ,ಸ್ವಲ್ಪ ಸರಳೀಕೃತವಾಯಿತೇನೋ ಎನಿಸಿದರೂ ದೃಶ್ಯಗಳ ಸಮತೋಲ– ಸಾಮರಸ್ಯಗಳನ್ನು ಕಲಾವಿದ ಅದ್ಭುತವಾಗಿ ಸಾಧಿಸಿದ್ದಾನೆ. ಚಿತ್ರಕಲೆಯಲ್ಲಿ ನಿಜಕ್ಕೂ ಇದೇ ಬಹುಮುಖ್ಯವಾದ ಅಂಶ. ಆಕೃತಿಗಳ ನಡುವೆ ಸಾಕಷ್ಟು ಸ್ಥಳಾವಕಾಶವಿರುವಂತೆ ಚಿತ್ರದ ತೆರಪನ್ನು ಸಂಯೋಜಿಸಲಾಗಿದೆ. ಒಂದೇ ಆಕೃತಿ ಮತ್ತೆ ಮತ್ತೆ ಬರುವಂಥ ಕಡೆಗಳಲ್ಲಿ, ಅದರ ಸುಂದರ ಗಂಭೀರ ನಿಲುವಿನಲ್ಲೇ ಚಲನಶೀಲತೆಯನ್ನೂ ಸಾಧಿಸಲಾಗಿದೆ. ಪ್ರತಿಯೊಂದು ಅಂಕಣಗಳನ್ನೂ ಪ್ರತ್ಯೇಕವಾಗಿ ವೀಕ್ಷಿಸಿದಾಗ ಅದು ತನ್ನಷ್ಟಕ್ಕೆ ತಾನೇ ಸ್ವಯಂಪೂರ್ಣವಾದ ಕಲಾಚಿತ್ರವೆಂದು ಕಂಡುಬರುತ್ತದೆ. ಹೀಗಿದ್ದೂ ಶ್ರೀಕೃಷ್ಣನ ಜೀವನವನ್ನು ನಿರೂಪಿಸುವ, ವಿಶಿಷ್ಟ ಶೈಲಿಯಲ್ಲಿ ರಚಿತವಾದ ಮತ್ತು ವರ್ಣರಂಜಿತವಾದ ಚಿತ್ರಗಳನ್ನುಳ್ಳ ಅನೇಕ ಅಂಕಣಗಳ ಸಂಯೋಜಿತ ಕಲಾಕೃತಿಯಾದ ಇಡೀ ಮಂಟಪವನ್ನು ಒಮ್ಮೆಗೇ ವೀಕ್ಷಿಸಿದಾಗ ಉಂಟಾಗುವ ಕಲಾನುಭವ ಅಪೂರ್ವವಾದುದು.

ಶುಭರಾಯ ಮಠದ ಕಲೆ ಅನುಯಾಯಿಗಳೇ ಇಲ್ಲದ ಒಂದು ವಿಶಿಷ್ಟವಾದ, ವೈಯಕ್ತಿಕ ಕಲಾಶೈಲಿ. ತಾನು ಕಲೆಯನ್ನು ಸೃಷ್ಟಿಸುತ್ತಿದ್ದೇನೆಂಬ ಅರಿವೂ ಇಲ್ಲದ ಆತ್ಮವಿಜ್ಞಾನಿಯೊಬ್ಬ ಸೃಷ್ಟಿಸಿದ ಕಲೆ. ಆತನ ಕಲಾ ಸೃಷ್ಟಿ ತನಗೆ ತಾನೇ ಹೊಮ್ಮಿ, ಚಿಲುಮೆಯೊಡೆದು ಹರಿವ ನದಿಯಂತೆ ಹರಿಯುತ್ತಾ ಹೋಯಿತು. ಅದು ಅಂತಃಸ್ಫೂರ್ತಿಯಿಂದ ಚಿಮ್ಮಿದ ಕಲೆಯಾದ್ದರಿಂದ ಅದರಲ್ಲಿ ಉತ್ಸಾಹ ಮತ್ತು ಜೀವಸತ್ವಗಳೊಂದಿಗೆ ಸಹಜಸೌಂದರ್ಯವೂ ಇದೆ.

ಕಲಾವಿದನ ಅಂತಃಸ್ಫೂರ್ತಿಯಿಂದ ಆಕಾರವನ್ನು ಪಡೆಯುವ ಕಲೆಗೆ ಸರ್ವ ಜೀವನಶಕ್ತಿಯನ್ನು ಆಳುವ, ಸತ್ವವನ್ನು ಸೃಷ್ಟಿಸುವ ಶಕ್ತಿಯಿರುತ್ತದೆ. ಅಂಥ ಜೀವಸತ್ವವ ವನ್ನು ಸೃಷ್ಟಿಸುವ, ಅಂತಃಸ್ಫೂರ್ತಿಯ ಕಾಲ ಬಂದೊದಗಿದಾಗ ಗಿಡದಲ್ಲಿ ಸಕಾಲಕ್ಕೆ ಹೂವು–ಹಣ್ಣುಗಳು ಮೂಡಿಬರುವಂತೆ, ಸಕಾಲದಲ್ಲಿ ಕಲೆ ತನಗೆ ತಾನೇ ಹೊಮ್ಮಿ ಬರುತ್ತದೆ.

ನಾನು ಕಲೆಯ ಸಾಮಾನ್ಯ ವಿದ್ಯಾರ್ಥಿ. ಶ್ರೀ ಶುಭರಾಯರ ಕಲೆಯ ಬಗೆಗೆ ಅದು ನನಗೆ ಕಂಡಂತೆ ನನಗೆ ತಿಳಿದಷ್ಟು ನನ್ನ ಅಭಿಪ್ರಾಯಗಳನ್ನು ನಿಮ್ಮ ಮುಂದಿರಿಸಿದ್ದೇನೆ. ಉಳಿದದ್ದನ್ನು ವಿದ್ವಾಂಸರೂ, ಇತಿಹಾಸವನ್ನು ಅಭ್ಯಾಸ ಮಾಡುವವರೂ ಹೇಳಲೆಂದು ನನ್ನ ಅಭಿಲಾಶೆ.

ಅನು : **ಕೆ.ಎಸ್. ರಾಧಾಕೃಷ್ಣ**

ಸಂತ, ಕವಿ, ಚಿತ್ರಕಾರ – ಶುಭರಾಯ

ಎಸ್.ಸಿ. ದೇಸಾಯಿ

ಸಂಗೀತ ನೃತ್ಯಗಳಿಂದ ಭಗವಂತನನ್ನು ಆರಾಧಿಸುವವರನ್ನು ಕೇಳಿದ್ದೇವೆ. ಆದರೆ ಚಿತ್ರಗಳ ಮೂಲಕ ಆರಾಧಿಸುವವರನ್ನು ನೀವು ಕೇಳಿರಲಾರಿರಿ. ಬಹುಶಃ ಸಂತ ತತ್ವಜ್ಞಾನಿ ಶುಭರಾಯರೊಬ್ಬರೇ ಹಾಗೆ ಮಾಡಿರುವವರಲ್ಲಿ ಮೊದಲಿಗರೇನೊ? ಎರಡು ಶತಮಾನಗಳ ಹಿಂದೆ ಕಲೆಯ ಮೂಲಕ ತನ್ನ ಇಷ್ಟ ದೈವವನ್ನು ಪೂಜಿಸಿದ ಸಂತ ಕವಿ–ಚಿತ್ರಕಾರ ಶುಭರಾಯರ ವರ್ಣಚಿತ್ರಗಳು ಇಂದಿಗೂ ಆಚ್ಚರಿಗೊಳಿಸುತ್ತವೆ. ಇಂದಿಗೂ ಕಿಂಚಿತ್ತಾದರೂ ಅವುಗಳ ಬಣ್ಣ ಮಾಸಿಲ್ಲ.

ಯಾರು ಈ ಶುಭರಾಯ?

ಇಂದಿನ ಯುವ ಪೀಳಿಗೆಗೆ ಖಂಡಿತಾ ಅವರ ಹೆಸರು ಗೊತ್ತಿರಲಾರದು. ಶುಭರಾಯರ ನಿಜ ನಾಮಧೇಯ ಸುಬ್ಬರಾಯ. ಅವರು ಕನ್ನಡಿಗರೆಂಬುದು ನಾವೆಲ್ಲ ಹೆಮ್ಮೆಪಡುವ ವಿಷಯ. ಅವರು ಮೈಸೂರು ಹುಲಿ ಟಿಪ್ಪುಸುಲ್ತಾನನ ಬಳಿ ಪೇಶ್ವೆಗಾರರಾಗಿದ್ದರಂತೆ. ಶ್ರೀರಂಗಪಟ್ಟಣದ ಕೊನೆಯ ಯುದ್ಧಕ್ಕೆ ಮೊದಲು ಟಿಪ್ಪುಸುಲ್ತಾನ ನನ್ನು ಬ್ರಿಟಿಷ್‌ರೊಂದಿಗೆ ಸಂಧಾನ ನಡೆಸಲು ಒಬ್ಬ ಸುಬ್ಬರಾಯನೆಂಬುವನನ್ನು ಮದರಾಸು ಗವರ್ನರ್ ಬಳಿಗೆ ಕಳುಹಿಸಿದ್ದನೆಂದು ಸೊಲ್ಲಾಪುರದ ಇತಿಹಾಸ ಸಂಶೋಧಕರೊಬ್ಬರು ಕಂಡುಹಿಡಿದಿದ್ದಾರೆ.

ಶುಭರಾಯರು ಹುಟ್ಟಿದ್ದು ಕ್ರಿಸ್ತ ಶಕ ೧೭೫೦ರಲ್ಲಿ, ಕೋಲಾರ ಜಿಲ್ಲೆಯ ಮಾಲೂರಿನ ವೈದಿಕ ಬ್ರಹ್ಮಣ ಮನೆತನದಲ್ಲಿ. ಮನೆ ಮಾತು ತೆಲುಗು. ಕನ್ನಡ, ತೆಲುಗು, ತಮಿಳು, ಉರ್ದು ಭಾಷೆಗಳಲ್ಲಿ ಹಾಗೂ ಮರಾಠಿಯಲ್ಲಿ ಅವರಿಗೆ ಅಗಾಧ ಜ್ಞಾನವಿತ್ತು. ಕನ್ನಡದ ಸುಬ್ಬರಾಯ ಮುಂದೆ ಮಹಾರಾಷ್ಟ್ರಕ್ಕೆ ಹೋಗಿ ಅಲ್ಲಿ ನೆಲೆಸಿದ ಬಳಿಕ ಮರಾಠಿಯಲ್ಲಿ ಶುಭರಾಯ ಆಗಿರಬೇಕು.

ಶ್ರೀರಂಗಪಟ್ಟಣದ ಕೊನೆಯ ಯುದ್ಧದಲ್ಲಿ ಟಿಪ್ಪುವಿನ ಪತನದ ಬಳಿಕ ಶುಭ ರಾಯರು ಕರ್ನಾಟಕವನ್ನು ತ್ಯಜಿಸಿದರೋ ಅಥವಾ ಅದಕ್ಕೂ ಮೊದಲೇ ತ್ಯಜಿಸಿದರೋ ಎಂಬುದು ಸ್ಪಷ್ಟವಾಗಿ ತಿಳಿದುಬಂದಿಲ್ಲ. ಅವರಿಗೆ ಮದುವೆಯಾಗಿತ್ತೋ ಅಥವಾ ಬ್ರಹ್ಮಚರ್ಯದಿಂದ ಸನ್ಯಾಸದೆಡೆಗೆ ಹೋದರೋ ಅದೂ ತಿಳಿಯದು. ಅವರಲ್ಲಿ ಹುದುಗಿದ್ದ ಆಧ್ಯಾತ್ಮಿಕ ದಾಹವೇ ಅವರನ್ನು ಮನೆಯಿಂದ ಹೊರಗೆಳೆದಿರಬೇಕು. ಶುಭರಾಯರು ಟಿಪ್ಪುವಿನ ರಾಜ್ಯವನ್ನು ತ್ಯಜಿಸಿ ಹೋಗಲು ಕಾರಣವಾದ ಒಂದು ಘಟನೆ ಬಗೆಗೆ ಮರಾಠಿ ಸಾಹಿತ್ಯದಲ್ಲಿ ಉಲ್ಲೇಖಿಸಲಾಗಿದೆ.

ಟಿಪ್ಪುವಿನ ದರಬಾರಿಗೆ ಒಮ್ಮೆ ಹಿರಿಯ ಖಾಜಿಯೊಬ್ಬ ಬಂದಿರುತ್ತಾನೆ. ಆತ ಟಿಪ್ಪುವಿಗೆ ಒಂದು ಉಪದೇಶ ಮಾಡುತ್ತಾನೆ. ಪೈಗಂಬರನ ಸನ್ನಿಧಿಗೆ ಸೇರಬೇಕೆಂಬ ಇಚ್ಛೆ ಇದ್ದರೆ ತಮ್ಮ ಮುಂಗೈಗೆ ಎಣ್ಣೆ ಅಥವಾ ತುಪ್ಪ ಸವರಿಕೊಂಡು ಎಳ್ಳಿನ ರಾಶಿಯಲ್ಲಿ ಆ ಕೈಯನ್ನು ತುರುಕಿ ತೆಗೆಯಬೇಕು. ಹೀಗೆ ಕೈ ತೆಗೆದಾಗ ಕೈಗೆ ಎಷ್ಟು ಎಳ್ಳು ಹತ್ತಿರುತ್ತದೋ ಅಷ್ಟು ಬ್ರಾಹ್ಮಣರನ್ನು ಮುಸಲ್ಮಾನರನ್ನಾಗಿ ಪರಿವರ್ತಿಸಬೇಕೆಂಬುದು ಖಾಜಿಯ ಉಪದೇಶ. ಶುಭರಾಯರು ಯಾವತ್ತೂ ಟಿಪ್ಪುವಿನ ಬಳಿ ಇರುತ್ತಿದ್ದುದರಿಂದ ಈ ಉಪದೇಶ ಅವರ ಕಿವಿಗೆ ಬಿದ್ದು ತೀವ್ರ ಗೊಂದಲಕ್ಕೊಳಗಾಗುತ್ತಾರೆ. 'ಸ್ವಧರ್ಮೇ ನಿಧನಂ ಶ್ರೇಯಃ ಪರಧರ್ಮೋ ಭಯಾವಹಃ' ಎಂಬ ಭಗವಂತನ ವಾಣಿ ನೆನಪಾಗುತ್ತದೆ. ಇನ್ನು ಇಲ್ಲಿರುವುದು ಯೋಗ್ಯವಲ್ಲ ಎಂದು ಪರಿಗಣಿಸಿ ಮನೆ–ಮಠ ತ್ಯಜಿಸುತ್ತಾರೆ. ಅವರು ಊರೂರು ಸಂಚರಿಸಿ ಅಲೆಯುತ್ತಲೆಯುತ್ತ ಬಂದುದು ಕರ್ನಾಟಕದ ಗಡಿ ಪ್ರದೇಶ ಸೊಲ್ಲಾಪುರದ ಹೊರವಲಯದ ಪಡಘಾಚಿಮಳ ಎಂಬ ತೋಟಕ್ಕೆ. ಈ ತೋಟದಲ್ಲಿ ಅವರು ತಮ್ಮ ಇಷ್ಟದೈವ ಮಾರುತಿ ಧ್ಯಾನದಲ್ಲಿ ಕೆಲವು ದಿನ ಕಳೆದರು. ಅವರೊಬ್ಬರು ಮಹಾ ಸತ್ಪುರುಷರೆಂದು ಪರಿಗಣಿಸಿ ಸುತ್ತಮುತ್ತಲಿನ ಜನತೆ ತೋಟಕ್ಕೆ ಬಂದು ಗೌರವಿಸಿದರು. ಈ ಸುದ್ದಿ ಸೊಲ್ಲಾಪುರದ ಕಿಲ್ಲೇದಾರ ಅಂಬಾಜಿ ಖಂಡಲೆ ಅವರ ಕಿವಿಗೂ ಬಿತ್ತು. ಸುಬ್ಬರಾಯನ ವಾಸಕ್ಕೆ ಅನುಕೂಲವಾಗಲೆಂದು ಆ ತೋಟವನ್ನು ಅವರ ಹೆಸರಿಗೆ ಬರೆದನಂತೆ. ಇಂದು ಅದೇ ಸ್ಥಳದಲ್ಲಿ ಶುಭರಾಯ ಮಠವಿದೆ.

ಒಮ್ಮೆ ಶುಭರಾಯರ ಕನಸಿನಲ್ಲಿ ಪಂಡರಾಪುರದ ವಿಠಲನು ಕಾಣಿಸಿಕೊಂಡು 'ಚಂದ್ರಭಾಗಾ ನದಿಯಲ್ಲಿ ಇಂಥಲ್ಲಿ ಇದ್ದೇನೆ, ನನ್ನನ್ನು ಒಯ್ದು ನಿನ್ನ ಮಠದಲ್ಲಿ ಸ್ಥಾಪಿಸು' ಎಂದು ಹೇಳಿದಂತಾಯಿತು. ಆಗಿನ ಕಾಲದಲ್ಲಿ ವಾಹನಗಳ ಸೌಕರ್ಯವಿರಲಿಲ್ಲ. ಆಗ ಶೇಠ ಎಂಬ ಭಕ್ತರೊಬ್ಬರು ತಮ್ಮ ಕುದುರೆಯೊಂದಿಗೆ ಹೋಗಿ ಚಂದ್ರಭಾಗಾ ನದಿಯಲ್ಲಿ ಮುಳುಗಿ ಸ್ನಾನ ಮಾಡಿ ಹುಡುಕಿದಾಗ ಒಂದಷ್ಟು ಉಸುಕು ಕೈಗೆ ದೊರಕುತ್ತದೆ. ಕೈಗೆತ್ತಿಕೊಂಡ ಕೂಡಲೇ ಉಸುಕು ಮೂರ್ತಿ ರೂಪಕ್ಕೆ ಪರಿವರ್ತಿತವಾಗುತ್ತದೆ. ಅದೇ ವಿಠಲಸ್ವಾಮಿ. ವಿಠಲಮೂರ್ತಿಯನ್ನು ವಿಜೃಂಭಣೆಯಿಂದ ಮಠಕ್ಕೆ ತಂದು ಪ್ರತಿಷ್ಠಾಪಿಸಲಾಗುತ್ತದೆ. ಅಂದು ಆಷಾಢ ಶುದ್ಧ ಏಕಾದಶಿ. ಶುಭರಾಯ ಮಠದಲ್ಲಿ

ಇಂದಿಗೂ ಪೂಜೆಗೊಳ್ಳುತ್ತಿರುವುದು ಪಂಡರಾಪುರದ ವಿಠಲನೇ. ಆಷಾಢ ಮತ್ತು ಕಾರ್ತೀಕ ಏಕಾದಶಿ, ವಸಂತ ಪಂಚಮಿಯನ್ನು ಮಠದಲ್ಲಿ ಆಚರಿಸುತ್ತಾರೆ. ಆ ದಿನ ಗಳಲ್ಲಿ ಅಲ್ಲಿ ರಥೋತ್ಸವ ನಡೆಯುತ್ತದೆ. ಶುಭರಾಯರ ನಂತರ ಆ ಮಠಕ್ಕೆ ಯಾರೂ ಪೀಠಸ್ಥ ರಾಗಲಿಲ್ಲ. ಬಾರಾಮತಿಯಿಂದ ಬಂದ ಬುವಾ ಕುಟುಂಬದವರೇ ಮಠದ ವ್ಯವಹಾರಗಳನ್ನು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ಮಠಕ್ಕೆ ಈಗ ಉಳಿದಿರುವ ಆಸ್ತಿ ಎಂದರೆ ಶುಭರಾಯರ ಚಿತ್ರಗಳಷ್ಟೇ. ಬುವಾ ಮನೆತನದ ಪುರುಷೋತ್ತಮ ಬುವಾ ಪತ್ರಕರ್ತರು. ಶುಭರಾಯರ ಚಿತ್ರಗಳನ್ನು ಜೋಪಾನವಾಗಿ ಉಳಿಸಿ ನಾಲ್ಕು ಜನರ ಕಣ್ಣಿಗೆ ಬೀಳುವಂತೆ ಮಾಡಿರುವುದು ಅವರೇ. ಅವರು ಆಸಕ್ತಿ ವಹಿಸಿ ಶುಭರಾಯರ ಚಿತ್ರಗಳ ಪ್ರಥಮ ಪ್ರದರ್ಶನವನ್ನು ಸೊಲ್ಲಾಪುರದಲ್ಲಿ ಏರ್ಪಡಿಸಿದ್ದರು. ಪಂಡಿತ್ ಜವಾಹರಲಾಲ್ ನೆಹರೂ ಆದರ ಉದ್ಘಾಟನೆ ನೆರವೇರಿಸಿದರು.

ಅನಂತರ ದಿಲ್ಲಿ, ಮುಂಬೈ, ಪುಣೆ ಷಹರಿನಲ್ಲಿ, ಕಲಬುರ್ಗಿಯಲ್ಲಿಯೂ ಶುಭರಾಯರ ಚಿತ್ರಗಳ ಪ್ರದರ್ಶನ ನಡೆಯಿತು.

ವಿಶಿಷ್ಟ ಶೈಲಿ

ಸಂತ ಚಿತ್ರಕಾರ ಶುಭರಾಯರ ಕಲೆಯ ವಿಷಯಗಳು, ವಸ್ತುಗಳೆಂದರೆ ಪೌರಾ ಣಿಕ ಸಂದರ್ಭಗಳು ಮಾತ್ರ. ಹಿಂದಿನ ಎಲ್ಲ ಚಿತ್ರಕಾರರಿಗೆ ಸ್ಫೂರ್ತಿ ನೀಡಿದ್ದು ಪೌರಾಣಿಕ ಪ್ರಸಂಗಗಳೇ. ರಾಮಾಯಣ, ಮಹಾಭಾರತ, ಕೃಷ್ಣಲೀಲೆಯ ಪ್ರಸಂಗಗಳೂ ಕಲಾವಿದರಿಗೆ ಸ್ಫೂರ್ತಿ ನೀಡಿವೆ. ಶುಭರಾಯರದು ವಿಶಿಷ್ಟ ಶೈಲಿ. ಆಗಿನ ಕಾಲದ ಯಾವುದೇ ಪ್ರಾದೇಶಿಕ ಕಲಾ ಶೈಲಿ ಅವರ ಮೇಲೆ ಪ್ರಭಾವ ಬೀರಿಲ್ಲ. ಅವರು ಮಠ ಬಿಟ್ಟು ಹೊರಗೆಲ್ಲೂ ಹೋಗದೇ ಇರುವುದೂ ಇದಕ್ಕೆ ಕಾರಣವಾಗಿದ್ದಿರಲೂಬಹುದು. ಶುಭರಾಯರು ತಮ್ಮ ಚಿತ್ರಗಳಿಗೆ ಆರಿಸಿಕೊಂಡ ಪ್ರಸಂಗಗಳಲ್ಲಿ ಹೆಚ್ಚಿನವು. ರಾಮಾಯಣ, ಕೃಷ್ಣಾವತಾರಕ್ಕೆ ಸಂಬಂಧಿಸಿದುದು. ಕೃಷ್ಣ ಮತ್ತು ಗೋಪಿಕಾ ಸ್ತ್ರೀಯರು. ಗೋಪಿಕಾ ಸ್ತ್ರೀಯರ ಸೀರೆ ಗಳನ್ನು ಕದ್ದು ಮರವೇರಿ ಕುಳಿತ ಕೃಷ್ಣ, ಗೋಕುಲದಲ್ಲಿ ರಾಕ್ಷಸಿ ಪೂತನಿಯನ್ನು ಕೊಲ್ಲುವ ಬಾಲಕೃಷ್ಣ ಹೀಗೆ ಪ್ರತಿಯೊಂದು ಚಿತ್ರದಲ್ಲಿಯೂ ಶುಭರಾಯರ ವರ್ಣ ಸಂಯೋಜನೆ, ವಿಷಯ ನಿರೂಪಣೆ ಆಕರ್ಷಕ ಗಿಡಮೂಲಿಕೆಗಳಿಂದ ತಯಾರಿಸಿದ ಬಣ್ಣಗಳನ್ನೇ ಅವರು ಹೆಚ್ಚಾಗಿ ಬಳಸಿದ್ದಾರೆ.

ಆಗಿನ ಕಾಲದಲ್ಲಿ ಕಾಗದವೊಂದು ಅಪರೂಪದ ವಸ್ತು. ಎಷ್ಟೋ ಸಂದರ್ಭದಲ್ಲಿ ಶುಭರಾಯರು ವ್ಯಾಪಾರಸ್ಥರು ಲೆಕ್ಕಪತ್ರಗಳನ್ನು ಬರೆದ ರದ್ದಿ ಕಾಗದದ ಮೇಲೆ ಚಿತ್ರಗಳನ್ನು ರಚಿಸುತ್ತಿದ್ದರು.

ಮಠದಲ್ಲಿ ತಾವೇ ಸ್ವತಃ ಪೂಜೆಯನ್ನು ಮಾಡುತ್ತಿದ್ದರಲ್ಲದೆ, ಮಂಟಪ ನಿರ್ಮಿಸಿ ಅಲಂಕಾರ ಮಾಡುತ್ತಿದ್ದರು. ಇಂದಿಗೂ ಮಠದಲ್ಲಿರುವ ಕಮಲಾಸನ, ಮಯೂರಾಸನ



ರಾಮಾವತಾರ, ಶುಭರಾಯರು ರಚಿಸಿದ ಚಿತ್ರ

(ಎ)



(ಬಿ)



(ಎ) ಮತ್ಸ್ಯ – ಕೂರ್ಮ (ಬಿ) ವರಾಹ – ನಾರಸಿಂಹ ಅವತಾರಗಳು







(ಎ) ವಾಮನ (ಬಿ) ಪರಶುರಾಮ (ಸಿ) ವಿಷ್ಣು

(ಎ)




(ಎ) ಮತ್ತು (ಸಿ) ಗೋಪಿಯರು (ಬಿ) ಗೋಪಾಲರು



ರಾಧಾಕೃಷ್ಣರ ಕಾಲವರಿಯದ ಪ್ರಣಯ

(ಎ)



(ಬಿ)



(ಎ) ರಾಸಲೀಲೆ (ಬಿ) ಗೋಪಾಲಕ (ಆಕೃತಿಗಳನ್ನೇ ಡಿಸೈನ್‌ಗಳಂತೆ ರೂಪಿಸಿರುವುದು)



ರಾಧಾ—ಮಾಧವ ವಿನೋದ ಹಾಸ

(ಎ)



(ಬಿ)



(ಎ) ಗರುಡ–ಪುಷ್ಪಕ ವಿಮಾನಗಳೊಂದಿಗೆ ಶ್ರೀರಾಮ





(ಬಿ) ಅಕ್ರೂರನ ಆಗಮನ, ಗೋಕುಲ ನಿರ್ಗಮನ



(ಎ)



(ಎ) ನಂದಕಿಶೋರ (ಬಿ) ನವನೀತಚೋರ



ಬೆಣ್ಣೆ ಕದ್ದ ನಮ್ಮ ಕೃಷ್ಣ, ಬೆಣ್ಣೆ ಕದ್ದನಮ್ಮ



(ಎ)



(ಬಿ)



(ಸಿ)

(ಎ) ನಿಲ್ಲಿ ಹುಡ್ಗಗಳೆ, ಹೊರಟಿರಲ್ಲಿಗ? (ಬಿ) ಮುರಳೀಲೋಲ (ಸಿ) ಗೋಪಾಲ



ಸಾಯಂಕಾಲೇ, ಕುಸುಮಿತ ಸಮಯ....



(ಎ)



(ಬಿ)




(ಸಿ)

(ಎ) ಚಿಕ್ಕವನಿವನೆಂದು ಎತ್ತಿಕೊಂಡರೆ... (ಬಿ) ಕೋಲು ಕೋಲಣ್ಣ ಕೋಲೆ.....
(ಸಿ) ಅಮ್ಮ ನಿಮ್ಮ ಮನೆಗಳಲ್ಲಿ – ಕಂಡಿರೇನಮ್ಮ.....



ಬುದ್ಧ : ಜಗವೆಲ್ಲ ಮಲಗಿರಲು.....



(ಎ)



(ಬಿ)

(ಎ) ಸಂಗೀತ ಲೋಲ (ಬಿ) ಶೃಂಗಾರ ಲೀಲ

ಮೂರ್ತಿಯನ್ನಿರಿಸಿದ್ದು ಮಂಟಪಗಳನ್ನು ಶುಭರಾಯರೇ ನಿರ್ಮಿಸಿದ್ದರು. ಹಬ್ಬ-ಹರಿದಿನಗಳಲ್ಲಿ ತಾವೇ ನಿರ್ಮಿಸಿದ ಮಂಟಪಗಳಲ್ಲಿ ಚಿತ್ರಗಳನ್ನು ವರ್ಣದಲ್ಲಿ ಬಿಡಿಸಿ ಅಲಂಕರಿಸುವ ಪದ್ಧತಿಯನ್ನು ಶುಭರಾಯರು ರೂಢಿಸಿಕೊಂಡು ಬಂದರು. ಮಂಟಪದ ಅಲಂಕಾರಕ್ಕಾಗಿ ಅವರು ನಿರ್ಮಿಸಿದ ಚಿತ್ರಗಳನ್ನು ವಿವಿಧ ವರ್ಗಗಳಲ್ಲಿ ವಿಂಗಡಿಸಬಹುದು. ದಶಾವತಾರ, ಕೃಷ್ಣಾವತಾರದ ಚಿತ್ರಗಳೂ, ಕೃಷ್ಣನ ಬಾಲಲೀಲೆ, ರಾಮಾಯಣದ ಚಿತ್ರಗಳು ಹಾಗೂ ಒಂದಿಷ್ಟು ಅಲಂಕಾರಿಕ ಚಿತ್ರಗಳು.

ಚಿತ್ರಕಲೆಯಲ್ಲಿ ಇಂದು ನಾವು 'ಎಕ್ಸ್‌ಪ್ರೆಶನ್' ಎಂದು ಕರೆಯುವ ತಂತ್ರ ಶುಭರಾಯರ ಕಾಲದಲ್ಲಿಯೇ ಪ್ರಸಿದ್ಧಿಗೆ ಬಂದಿತ್ತು. ಗೋಪಿಕಾ ವಸ್ತ್ರಾಪಹರಣ ತಂತ್ರದಲ್ಲಿ ಇವನ್ನು ಕಾಣಬಹುದು. ಶ್ರೀಕೃಷ್ಣ ಗೋಪಿಕಾ ಸ್ತ್ರೀಯರ ಸೀರೆಗಳನ್ನು ತೆಗೆದುಕೊಂಡು ಮರವೇರಿದಾಗ ಅವನ್ನು ಮರಳಿ ಕಸಿದುಕೊಳ್ಳಲು ಅವರೂ ಮರವೇರಿ ಏನು ಈ ಕುಚೋದ್ಯ ಎಂದು ಹೇಳಿ ಸೀರೆಯನ್ನು ಮರಳಿಸಲು ಕೇಳಿಕೊಂಡಿದ್ದಾರೆ. ಹಗಲು-ರಾತ್ರಿಗಳನ್ನು ತೋರುವ ವರ್ಣ ವೈವಿಧ್ಯವೂ ಚಿತ್ರಗಳಲ್ಲಿ ಅಗಾಧವಾಗಿದೆ. ಮಾನವರ, ಪಶು-ಪಕ್ಷಿಗಳ ದೈಹಿಕ ಚಲನವಲನವನ್ನು ತೋರಿಸುವಲ್ಲಿಯೂ ಅವರ ಜಾಣ್ಮೆ ಹಿರಿದು. ಕೃಷ್ಣ, ರಾಧೆ, ಗೋಪಿಕೆಯರ ನೃತ್ಯದ ಚಿತ್ರದಲ್ಲಿ ಇದನ್ನು ಕಾಣಬಹುದು. ಕೋಲಾಟದ ಮಹಿಳೆಯರು, ಹಾಲು ಮಾರುವ ಗೌಳಿಗರು ಮುಂತಾದ ಅಲಂಕಾರಿಕ ಚಿತ್ರಗಳಲ್ಲಿ ವರ್ಣ ವೈವಿಧ್ಯ ಗಮನಾರ್ಹ. 'ಭಕ್ತಿ' ಅವರ ಎಲ್ಲ ಚಿತ್ರಗಳಲ್ಲಿ ಅಂತರ್ವಾಹಿನಿಯಾಗಿ ಹರಿದಿರುವ ಭಾವ.

ಭಕ್ತ ಕವಿ

ಶುಭರಾಯರು ಕವಿಯೂ ಆಗಿದ್ದರು. ಮರಾಠಿಯಲ್ಲಿ ೧೪೭ ಭಕ್ತಿ ಕಾವ್ಯಗಳನ್ನು ಅವರು ರಚಿಸಿದ್ದಾರೆ. ಅದಕ್ಕೆ ಸಂಗೀತ ಜೋಡಿಸಿದವರು ಅಂದು ಸೊಲ್ಲಾಪುರ ಜಿಲ್ಲೆಯಲ್ಲಿ ಖಜಾನೆದಾರರಾಗಿದ್ದ ದಿವೇಕರ ಶಾಸ್ತ್ರಿ. ಕಳೆದ ೧೫೦ ವರ್ಷಗಳ ಅವಧಿಯಲ್ಲಿ ಅವರ ಧಾರ್ಮಿಕ ಗೀತೆಗಳು ಗೋವಾ, ಆಂಧ್ರಪ್ರದೇಶ, ತಮಿಳುನಾಡಿನಲ್ಲಿಯೂ ಪ್ರಸಿದ್ಧವಾಗಿದ್ದುವು. ಅವರೂ ಸ್ವತಃ ನುರಿತ ಸಂಗೀತಗಾರರೂ, ನುರಿತ ನೃತ್ಯ ಕಲಾವಿದರೂ ಆಗಿದ್ದರು.

ಹೀಗೇ ಸಂತನಾಗಿ, ಕವಿಯಾಗಿ, ಸಮಾಜ ಸುಧಾರಕರಾಗಿ, ರಾಜಕಾರಣಿಯಾಗಿ, ಸಂಗೀತಗಾರನಾಗಿ, ಚಿತ್ರಕಾರನಾಗಿ ಬಾಳಿ ಕ್ರಿಸ್ತ ಶಕ ೧೮೨೦ರಲ್ಲಿ ಶುಭರಾಯರು ಸಮಾಧಿಸ್ಥರಾದರು. ಅವರು ನಮಗೆ ಬಿಟ್ಟು ಹೋದ ಅಮೂಲ್ಯ ಆಸ್ತಿಯೆಂದರೆ ಅವರೇ ರಚಿಸಿದ ಕೆಲವು ವರ್ಣಚಿತ್ರಗಳು.

ಇಂದು ಸೊಲ್ಲಾಪುರ ಶ್ರೀ ಶುಭರಾಯ ಆರ್ಟ್ ಗ್ಯಾಲರಿಯಲ್ಲಿ ಸಂತ-ಚಿತ್ರಕಾರ ಶುಭರಾಯರ ಬಗೆಗೆ ಕರ್ನಾಟಕ ಲಲಿತಕಲಾ ಅಕಾಡೆಮಿ ವತಿಯಿಂದ ವಿಚಾರ ಸಂಕಿರಣವೊಂದು ಜರುಗಲಿದೆ. ಕರ್ನಾಟಕ ಮತ್ತು ಮಹಾರಾಷ್ಟ್ರದ ಸುಪ್ರಸಿದ್ಧ ವಿದ್ವಾಂಸರು, ಕಲಾವಿದರು ಈ ವಿಚಾರ ಸಂಕಿರಣದಲ್ಲಿ ಭಾಗವಹಿಸುತ್ತಿದ್ದಾರೆ.

ಸಂತ ಕಲಾವಿದ ಶುಭರಾಯ್

ಬಿ.ವಿ. ತಿವಾರಿ

ಸಂತ ಶ್ರೀ ಶುಭರಾಯ ಇವರ ಚಿತ್ರಕಲೆ ಹಾಗೂ ಕಾವ್ಯದ ಬಗೆಗೆ ನನಗೆ ವಿಶೇಷವಾದ ಪ್ರೀತಿ, ಭಕ್ತಿ ಇರುವುದು ನಿಜವಾದರೂ ನಾನು ಕಲೆಯ ಅತಿಸಾಮಾನ್ಯವಾದ ವಿದ್ಯಾರ್ಥಿ. ಆದುದರಿಂದಲೇ ನಾನು ಶ್ರೀ ಶುಭರಾಯರ ಕಾವ್ಯ ಹಾಗೂ ಚಿತ್ರಕಲೆಗಳ ವಿಮರ್ಶೆ ಮಾಡುತ್ತಿದ್ದೇನೆಂದು ತಾವು ಭಾವಿಸಬಾರದು ಎಂದು ಪ್ರಾರ್ಥಿಸುತ್ತೇನೆ. ಈಗ ನಾನು ಮಾಡಹೊರಟಿರುವ ಕಾರ್ಯವೆಂದರೆ ನನ್ನ ಅಧ್ಯಯನದ ಅವಧಿಯಲ್ಲಿ ಗಮನಿಸಿದ ಕಂಡುಕೊಂಡ ಕೆಲವು ವಿಚಾರಗಳನ್ನೂ, ಸಂಗತಿಗಳನ್ನೂ ಶ್ರೀ ಶುಭರಾಯರ ಅಭಿಮಾನಿಗಳ ಅವಗಾಹನೆಗೆ ತರುವುದಷ್ಟೇ ಆಗಿದೆ. ನಾನು 1965ರಿಂದ 1984ರವರೆಗಿನ ಅವಧಿಯಲ್ಲಿ ಶ್ರೀ ಶುಭರಾಯರನ್ನು ಕುರಿತಂತೆ ಆಮೂಲಾಗ್ರವಾದ, ತಲಸ್ಪರ್ಶಿಯಾದ ಸಂಶೋಧನೆ ಮಾಡಿದ್ದೇನೆ. ಮಾತ್ರವಲ್ಲದೆ, ಭಾರತ ಸರಕಾರದ ವಿಶ್ವವಿದ್ಯಾನಿಲಯ ಧನಸಹಾಯ ಆಯೋಗದ ಆಶ್ರಯದಲ್ಲಿ 'ಸಂತ ಶುಭರಾಯ ಅನಿಕಾವ್ಯ'[1] ಎಂಬ ಶುಭರಾಯರನ್ನು ಕುರಿತ ನನ್ನ ಹತ್ತನೆಯ ಸಂಶೋಧನಾ ಅಧ್ಯಯನವನ್ನು ಮುಗಿಸಿದ್ದೇನೆ. ಈ ಅಧ್ಯಯನ ಸಂದರ್ಭದಲ್ಲಿ ಶ್ರೀಶುಭರಾಯರ ಜೀವನ ಚರಿತ್ರೆ, ಕಾವ್ಯ, ಸಂಗೀತ ಹಾಗೂ ಚಿತ್ರಕಲೆಗೆ ಸಂಬಂಧಿಸಿದಂತೆ ಸಂಸ್ಕೃತ, ಮರಾಠೀ, ಗುಜರಾತೀ, ಕನ್ನಡ, ಇಂಗ್ಲಿಷ್ ಹಾಗೂ ಹಿಂದಿಯಲ್ಲಿರುವ 66 ಗ್ರಂಥಗಳನ್ನೂ 13 ಪತ್ರಿಕಾ ಲೇಖನಗಳನ್ನೂ, ನಾಲ್ಕು ಹಸ್ತಪ್ರತಿಗಳನ್ನೂ ಅಭ್ಯಾಸ ಮಾಡಿದ್ದೇನೆ. ಮರಾಠೀ ಭಾಷೆಯಲ್ಲಿರುವ ಸಂತ ಶ್ರೀ ದಾಸಗಾಣು ಮಹಾರಾಜ್ ಅವರು ಬರೆದ ಹಾಗೂ ಶ್ರೀ ವಾಮನ ಗೋವಿಂದ ಬುವಾ ಅವರು ಬರೆದ ಶ್ರೀ ಶುಭರಾಯರ ಜೀವನ ಚರಿತ್ರೆಗಳೂ, ಬಾಬಾ ಜಯಲ್ ಅವರು ಸಂಸ್ಕೃತದಲ್ಲಿ ಶ್ರೀ ಶುಭರಾಯರನ್ನು ಕುರಿತಂತೆ ಬರೆದ ಪರಿಚಯಾತ್ಮಕ ಲೇಖನವೂ ನನ್ನ ಅಭ್ಯಾಸದ ನೆರವಿಗೆ ಬಂದಿವೆ. ಇವುಗಳ ಜೊತೆಗೆ ಶುಭರಾಯರ ಕಾವ್ಯದ ಎರಡು ಹಸ್ತಪ್ರತಿಗಳನ್ನೂ ಶೋಧಿಸಿದ್ದೇನೆ. ಅದೇ ರೀತಿ 1792ನೇ ಮಾರ್ಚ್ 22ನೇ ದಿನಾಂಕದಿಂದ

ಅದೇ ತಿಂಗಳು 10ನೇ ತಾರೀಖಿನವರೆಗೆ ಟಿಪ್ಪೂವಿನ ವಕೀಲರು ಮತ್ತು ಲಾರ್ಡ್ ಕಾರ್ನ್‌ವಾಲಿಸ್‌ನ ನಡುವೆ ನಡೆದ 'ಶ್ರೀರಂಗಪಟ್ಟಣದ ಒಪ್ಪಂದ'ದಲ್ಲಿ ಪ್ರತ್ಯಕ್ಷ ಸಾಕ್ಷಿಯಾಗಿದ್ದ ಲಾರ್ಡ್ ಕಾರ್ನ್‌ವಾಲಿಸ್‌ನ ಲೆಕ್ಕಪತ್ರಾಧಿಕಾರಿಯಾಗಿದ್ದ ಜಾನ್ ಕೆನಾವೆ ಎಂಬುವವನು ಅಲ್ಲಿ ನಡೆದ ಮಾತುಕತೆಗಳನ್ನು ತನ್ನ ಸ್ವಹಸ್ತಾಕ್ಷರದಲ್ಲೇ ಬರೆದಿಟ್ಟ ದಿನಚರಿಯೂ[2] ಸೇರಿದಂತೆ ಅನೇಕ ಮಿಲಿಟರಿ ದಾಖಲೆಗಳನ್ನೂ ನಾನು ಅಭ್ಯಾಸ ಮಾಡಿದ್ದೇನೆ. ತಮಿಳುನಾಡಿನ ಎಗ್‌ಮೋರಿನ ಪ್ರಾಚ್ಯ ಇಲಾಖೆಯಲ್ಲಿರುವ ಈ ಮಿಲಿಟರಿ ದಾಖಲೆಗಳನ್ನು ನನ್ನ ಅಧ್ಯಯನಕ್ಕೆ ದೊರಕಿಸಿಕೊಟ್ಟು ಉಪಕಾರ ಮಾಡಿದ ಭಾರತದ ಮಾಜೀ ಉಪರಾಷ್ಟ್ರಪತಿಗಳಾದ ಡಾ. ಬಿ.ಡಿ. ಜತ್ತಿಯವರಿಗೆ ನಾನು ಆಭಾರಿಯಾಗಿದ್ದೇನೆ. ಕೆನಾವೆ ಅವರ ದಿನಚರಿಯಿಂದ[3] ಸಂತ ಶ್ರೀ ಶುಭರಾಯರ ಮೊದಲ ಹೆಸರು 'ಸುಬ್ಬರಾವ್' ಎಂದೂ ಅವರು ಟಿಪ್ಪೂಸುಲ್ತಾನನ ಆಸ್ಥಾನದಲ್ಲಿ ಮುಖ್ಯ ಪೇಷ್ಕಾರ್ ರಾಗಿದ್ದರೆಂದೂ ಮತ್ತು ಕೆಲವು ಮರಾಠೀ, ಇಂಗ್ಲಿಷ್ ಹಾಗೂ ಕನ್ನಡ ಪತ್ರಿಕೆಗಳಲ್ಲಿ ಬಂದಿರುವ ಅನೇಕ ಲೇಖನಗಳೂ[4] ಪುಸ್ತಕಗಳೂ[5] ಹೇಳುವಂತೆ ಟಿಪ್ಪುಸುಲ್ತಾನನ ಸಂಸ್ಥಾನದಲ್ಲಿ ಉಪಪ್ರಧಾನಿಗಳಾಗಿರಲಿಲ್ಲವೆಂಬುದೂ ಸಾಬೀತಾಗುತ್ತದೆ. ಅವರು ಉಪಪ್ರಧಾನಿಗಳಾಗಿದ್ದರು ಎನ್ನುವುದು ಕಲ್ಪಿತ ಕಥೆಯೊಂದನ್ನು ಮೇಲೆ ಹೇಳಿ, ಬರೆದು, ಪ್ರಕಟಿಸಿ ಇತಿಹಾಸವನ್ನಾಗಿ ಮಾಡುವ ವಿಫಲ ಪ್ರಯತ್ನವಷ್ಟೆ. ಶ್ರೀ ಶುಭರಾಯರು ಶ್ರೀರಂಗಪಟ್ಟಣದಿಂದ ತಲೆಮರೆಸಿಕೊಂಡು ಸೋಲಾಪುರಕ್ಕೆ ಓಡಿಬಂದುದೂ ಮತ್ತು ಶಹೀರ್ ರಾಮಜೋಶಿಯರೊಂದಿಗೆ ಅವರ ಸಂಬಂಧ ಇವು ನಮ್ಮನ್ನು ಗಂಭೀರವಾದ ಆಲೋಚನೆಗೆ ತೊಡಗಿಸಬೇಕು. ಕಟ್ಟುಕಥೆಯೊಂದನ್ನು ಮೇಲೆ ಮೇಲೆ ಪ್ರಚಾರ ಮಾಡಿ ಇತಿಹಾಸವೆಂಬ ಭ್ರಮೆಯನ್ನುಂಟುಮಾಡುವ ಪ್ರಯತ್ನ ನಡೆದಿರುವ ಈ ಸಂದರ್ಭದಲ್ಲಿ ಅಕಾಡೆಮಿ ವಿದ್ವಾಂಸರನ್ನೂ, ಸಂಶೋಧಕರನ್ನೂ ನಾನು ಪ್ರಾರ್ಥಿಸುವುದೆಂದರೆ ಈ ಕಟ್ಟುಕಥೆಗಳಿಗೆ ಬೆಂಬಲ ನೀಡದೆ, ದಾಖಲೆಗಳು ಹಾಗೂ ಸಾಕ್ಷ್ಯಾಧಾರದಿಂದ ಸಿದ್ಧವಾಗುವ ನೈಜ ಸಂಗತಿಗಳನ್ನು ಒಪ್ಪಿಕೊಂಡು, ಅವನ್ನೂ ದಾಖಲು ಮಾಡಿ ಎಂಬುದು. ವಿವಾದವೊಂದನ್ನು ಹುಟ್ಟುಹಾಕುವುದು ನನ್ನ ಉದ್ದೇಶವಲ್ಲ. ಬದಲಾಗಿ ನನ್ನ ಉದ್ದೇಶ ನಾನು ಕಂಡುಕೊಂಡ ಸಂಗತಿಗಳನ್ನು ವಿದ್ವಾಂಸರಿಗೂ ಪ್ರಸಿದ್ಧರಾದ ಕಲೆಗಾರರ ಹಾಗೂ ಶುಭರಾಯರ ಕಲೆಯ ವಿಮರ್ಶೆಯಲ್ಲಿ ತೊಡಗಿರುವ ಎಲ್ಲಾ ಕಲಾವಿಮರ್ಶಕರ ಅವಗಾಹನೆಗೂ ತರುವುದಷ್ಟೇ ಆಗಿದೆ.

ಸಂತ ಶುಭರಾಯರು (ಮೂಲ ಹೆಸರು ಸುಬ್ಬರಾವ್) 1750ರಲ್ಲಿ ಮೈಸೂರು ರಾಜ್ಯದ ಮಾಲೂರು ಎಂಬ ಸಣ್ಣ ಹಳ್ಳಿಯೊಂದರಲ್ಲಿ ವಾಸವಾಗಿದ್ದ ತೆಲುಗು ಬ್ರಾಹ್ಮಣ ಕುಟುಂಬವೊಂದರಲ್ಲಿ ಜನಿಸಿದರು. ಅವರಿಗೆ ಶಂಕರರಾವ್ ಮತ್ತು ಬೊಂಡಪ್ಪ ಎಂಬ ಅಣ್ಣನೂ, ತಮ್ಮನೂ ಇದ್ದರು.

ಅವರು ಸಂಸ್ಕೃತ, ತಮಿಳು, ಕನ್ನಡ, ಪರ್ಶಿಯನ್, ಮರಾಠೀ ಮತ್ತು ಉರ್ದು

ಭಾಷೆಗಳಲ್ಲಿ ಪರಿಶ್ರಮವಿದ್ದ ಮಹಾಪ್ರತಿಭಾನ್ವಿತರು. ಅಂತಹ ಅಸಾಧಾರಣ ಪ್ರತಿಭೆಯಿದ್ದ ವಿದ್ವಾಂಸರಾಗಿದ್ದುದರಿಂದಲೇ ಶುಭರಾಯರು ರಾಜಕಾರಣಿಯಾಗಿ, ಆಡಳಿತಗಾರರಾಗಿ, ಅರ್ಥಶಾಸ್ತ್ರಜ್ಞರಾಗಿ, ಕವಿ–ದಾರ್ಶನಿಕರಾಗಿ ಸಂಗೀತ, ನೃತ್ಯ, ಕಲೆಗಳನ್ನೂ ಕಲಿತವರಾಗಿ, ಭಾಷಾ ಶಾಸ್ತ್ರಜ್ಞ, ಸಂತ ಮತ್ತು ಕಲಾವಿದರಾಗಿ ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಂಡರು.

ನಮಗೆ ದೊರಕುವ ಸಮಕಾಲೀನ ಐತಿಹಾಸಿಕ ಹಾಗೂ ಮಿಲಿಟರಿ ದಾಖಲೆಗಳ ಪ್ರಕಾರ* ಶ್ರೀಶುಭರಾಯರು ಟಿಪ್ಪುವಿನ ಉಪಪ್ರಧಾನಿಯಾಗಿರಲಿಲ್ಲ. ಬದಲಾಗಿ ಅವರು ಪ್ರಧಾನ ಪೇಷ್ಕಾರ್ ಆಗಿದ್ದರು. ಅವರು ತಮ್ಮ ಪತ್ನಿ ಸುಬ್ಬಕ್ಕ ಎಂಬುವರೊಡನೆ ಸುಖಸಂಸಾರ ನಡೆಸಿದ್ದರು.

1792ರಲ್ಲಿ ಟಿಪ್ಪುಸುಲ್ತಾನ್ ಕಾರ್ನ್‌ವಾಲಿಸ್‌ನ ಎದುರು ಅನುಭವಿಸಿದ ಸೋಲು ಶುಭರಾಯರ ಜೀವನದಲ್ಲೊಂದು ಮುಖ್ಯ ಹಂತ. ಅಂದಿನ ಸಂಸ್ಥಾನದ ಪ್ರಧಾನ ಪೇಷ್ಕಾರ್‌ರಾಗಿದ್ದ ಅವರು ಸಲ್ಲಿಸಿದ ಸಂಸ್ಥಾನದ ವಿವಿಧ ಭಾಗಗಳ ಕಂದಾಯ ವಿವರಗಳು ಅಕ್ರಮ ಹಾಗೂ ಅಸತ್ಯದಿಂದ ಕೂಡಿದ್ದುವಾದುದರಿಂದ ಅವು ಕೆನಾವೆಗೆ ಒಪ್ಪಿಗೆಯಾಗಲಿಲ್ಲ.[6] ಇತ್ತ ಸುಲ್ತಾನನ ಕೋಪಕ್ಕೆ ತುತ್ತಾಗುವ ಭಯದಿಂದ ಸತ್ಯ ಸಂಗತಿಗಳನ್ನೂ ಮರೆಮಾಚಿದ್ದ ಸುಬ್ಬರಾಯರು ಅತ್ತ ತಾವು ತಯಾರಿಸಿದ್ದ ದಾಖಲೆಗಳಿಂದ ಕೆನಾವೆಯನ್ನೂ ನಂಬಿಸಲಾಗಲಿಲ್ಲ. ಸತ್ಯ ಸಂಗತಿಗಳನ್ನೊಳಗೊಂಡ ದಾಖಲೆಗಳನ್ನೂ ಕೆನಾವೆಗೆ ಸಲ್ಲಿಸಿದ್ದರೆ, ಅವರು ಸುಲ್ತಾನನ ಕೋಪಕ್ಕೆ, ಶಿಕ್ಷೆಗೆ ತುತ್ತಾಗುವ ಭಯವಿತ್ತು. ಈಗಾಗಲೇ ತಾವೇ ಕೆನಾವೆಗೆ ಸಲ್ಲಿಸಿದ್ದ ಸುಳ್ಳು ವಿವರಗಳಿಂದಾಗಿ ಸರ್ಕಾರ ಅವರ ವಿರುದ್ಧ ದಸ್ತಗಿರಿ, ಶಿಕ್ಷೆ, ಚಿತ್ರಹಿಂಸೆಗಳಂಥ ಮಿಲಿಟರಿ ಕ್ರಮ ಜರುಗಿಸುವ ಸಾಧ್ಯತೆ ಇತ್ತು. ಇಂಥ ಸಂದಿಗ್ಧ ಪರಿಸ್ಥಿತಿಯಲ್ಲಿ ಶ್ರೀರಂಗಪಟ್ಟಣವನ್ನು ತೊರೆದು ಬೇರೊಂದು ಕಡೆ ತಲೆತಪ್ಪಿಸಿಕೊಂಡು ಓಡಿಹೋಗುವುದನ್ನು ಬಿಟ್ಟರೆ ಶುಭರಾಯರಿಗೆ ಅನ್ಯಮಾರ್ಗವೇ ಇರಲಿಲ್ಲ.

ಮೇಲೆ ಕಾಣಿಸಿದ ಐತಿಹಾಸಿಕ ಸತ್ಯಗಳಿಂದ ಸಾಬೀತಾಗುವ ಸಂಗತಿ ಇದು. ಶ್ರೀ ಶುಭರಾಯರು ಒಬ್ಬ ಖಾಜಿ ಹಾಗೂ ಟಿಪ್ಪುಸುಲ್ತಾನನಿಂದ ಬಲವಂತವಾಗಿ ಇಸ್ಲಾಂ ಧರ್ಮವನ್ನು ಸ್ವೀಕರಿಸಬೇಕಾಯಿತು.[7] ಎಂಬುದು ಸಂಪೂರ್ಣವಾಗಿ ನಿರಾಧಾರ ಮಾತ್ರವಲ್ಲ, ಇಸ್ಲಾಂ ಧರ್ಮ ಹಾಗೂ ಸುಲ್ತಾನನ ವಿರುದ್ಧ ನಡೆಸಿದ ಅಪಪ್ರಚಾರ ಕೂಡ ಹೌದು ಎಂಬುದು.

---

* ಖಾಸರೆ ಮಿಲಿಟರಿ ದಾಖಲೆಗಳು – ಸರ್‌ಜಾನ್ ಕೆನಾವೆ – ಸಂಪುಟ ಸಂಖ್ಯೆ 106 – ಟಿಪ್ಪು ಸುಲ್ತಾನರ ವಕೀಲ ಮತ್ತು ಲಾರ್ಡ್ ಕಾರ್ನ್‌ವಾಲಿಸ್ ಅವರ ನಡುವೆ ನಡೆದ ಒಪ್ಪಂದ–ಸಂವಾದಗಳು ಪುಟ ಸಂಖ್ಯೆ 24, ದಿನಾಂಕ : ಮಾರ್ಚ್ 2, 1792

ಶುಭರಾಯರು ತೆಲುಗು ಬ್ರಾಹ್ಮಣನ ವೇಷದಲ್ಲಿ ಕೊಲ್ಹಾಪುರ ಹಾಗೂ ಪಂಡರಾಪುರದ ಮಾರ್ಗವಾಗಿ 1792ರಲ್ಲಿ ಶೋಲಾಪುರಕ್ಕೆ ಬಂದರು.[8] ಅವರು ಶೋಲಾಪುರಕ್ಕೆ ಬಂದ ವರ್ಷ 1785 ಎಂದು ಶ್ರೀ ವಿ.ಜಿ. ಬುವಾ ಹೇಳುತ್ತಾರೆ. ಅವರು ಹೇಳುವಂತೆ 1785ರಲ್ಲಿ ಶೋಲಾಪುರಕ್ಕೆ ಬಂದುದು ಸತ್ಯವಾದರೆ ಅವರು ಟಿಪ್ಪುವಿನ ಪ್ರಧಾನ ಪೇಷ್ಕಾರರಾಗಿ 'ಶ್ರೀರಂಗಪಟ್ಟಣದ ಒಪ್ಪಂದ'ದಲ್ಲಿ ಭಾಗವಹಿಸಲು 1792ರಲ್ಲಿ ಶ್ರೀರಂಗಪಟ್ಟಣಕ್ಕೆ ಮರಳುವುದು ಸಾಧ್ಯವಿತ್ತೇ?

ತಮಗೆ ನಿಕಟ ಪರಿಚಯವಿದ್ದ ರಾಜ ದರ್ಬಾರು ಹಾಗೂ ರಾಜನಿವಾಸಗಳಿಂದ ಕಾವ್ಯ, ಚಿತ್ರಕಲೆ, ಸಂಗೀತ, ನೃತ್ಯಗಳಂಥ ಲಲಿತಕಲೆಗಳನ್ನು ಶುಭರಾಯರು ದೇವಸ್ಥಾನದೊಳಕ್ಕೆ ತಂದರು. ಶೋಲಾಪುರದಲ್ಲೊಂದು ಮಠವನ್ನು ಸ್ಥಾಪಿಸಿ ತಮ್ಮ ಪೂಜೆ, ಕಾವ್ಯ, ಚಿತ್ರ, ಸಂಗೀತ, ನೃತ್ಯಗಳ ಮೂಲಕವಾಗಿ ಜೀವನವನ್ನೇ ಪಾಂಡುರಂಗನ ಸೇವೆಗೆ ಮುಡುಪಾಗಿಟ್ಟರು. ಕೆಳಜಾತಿಯ ಚೀಮನೆಂಬುವನಿಗೆ ತಮ್ಮ ಮಠದ ಪಾಂಡುರಂಗನೆದುರು ಹಾಡಲು, ನೃತ್ಯ ಮಾಡಲು ಅವಕಾಶವಿತ್ತರು.

ಇಷ್ಟೇ ಅಲ್ಲದೆ, ಸಮಾಜಸುಧಾರಕರಾದ ಅವರು ಆಷಾಢ ಮತ್ತು ಕಾರ್ತೀಕ ಏಕಾದಶಿಗಳಂದು ಪಾಂಡುರಂಗನ ರಥವನ್ನೆಳೆಯಲು ಹರಿಜನರಿಗೆ ಅವಕಾಶವಿತ್ತರು. ಇದರಿಂದಾಗಿ ಅವರು ಕರ್ಮಠ ಬ್ರಾಹ್ಮಣರ ವಿರೋಧವನ್ನೂ ಎದುರಿಸಬೇಕಾಯಿತು.

ಅಂದಿನ ಶಂಕರಾಚಾರ್ಯರು ಶುಭರಾಯರ ಮಠಕ್ಕೆ ಭೇಟಿ ನೀಡಿ ಅಲ್ಲಿ ಭಕ್ತಿ ಮತ್ತು ಆಧ್ಯಾತ್ಮ ಮಾರ್ಗದಲ್ಲಿ ಹರಿಜನರಿಗೆ ಸಿಕ್ಕಿದ್ದ ರಕ್ಷಣೆಯನ್ನು ಕೊಂಡಾಡಿದರು ಎಂಬುದು ಗಮನಿಸಬೇಕಾದ ಅಂಶ. ಶುಭರಾಯರು ಭಟ್ಟ ಭಾಸ್ಕರರಾಯರ ಸಂಪ್ರದಾಯಕ್ಕೆ ಸೇರಿದ ಭಕ್ತಿಪಂಥದ ಅನುಯಾಯಿಗಳು. ಆಗ ಶೋಲಾಪುರದ ಕಿಲ್ಲೇದಾರರಾಗಿದ್ದ ಶ್ರೀ ಆಬಾ ಸಾಹೇಬ ಕುಂದಾಲೆ, ಶೋಲಾಪುರದ ಭಂಡಾರಿಗಳಾಗಿದ್ದ ಶ್ರೀ ಬಾಬಾ ಜಯಿಲ್, ಶ್ರೀ ಹರಿಪಂಥ ತಾತ್ಯಾರಾಲೇರಸ್ಕರ್ ಮುಂತಾದವರು ಶುಭರಾಯರ ಹಿತಚಿಂತಕರು, ಬೆಂಬಲಿಗರಾಗಿದ್ದರು. ಇವರಲ್ಲದೆ ತಮ್ಮ ಬಗೆಗೆ ಭಕ್ತಿ, ಗೌರವಗಳನ್ನಿಟ್ಟುಕೊಂಡಿದ್ದ 200 ಮಂದಿ ಶಿಷ್ಯರೂ ಅವರಿಗಿದ್ದರು.

ಸಂತ ಶುಭರಾಯರು ಅತ್ಯುಚ್ಚಮಟ್ಟದ ಕಲಾವಿದರು. ಅವರು ಕವಿಯಾಗಿ, ದಾರ್ಶನಿಕರಾಗಿ, ಸಂಗೀತಗಾರರಾಗಿ, ತಮ್ಮ ನೃತ್ಯ, ಚಿತ್ರಕಲೆಯ ಮೂಲಕ ಪಾಂಡುರಂಗನನ್ನು ಅತ್ಯಂತ ಭಕ್ತಿ–ಭಾವದಿಂದ ಸೇವಿಸಿದರು.

ಶೋಲಾಪುರದ ಪ್ರಸಿದ್ಧ ಕವಿಯಾದ ಶ್ರೀ ಶಹೀರ್ ರಾಮ ಜೋಶಿಯವರು ಒಂದು ಲಾವಣಿ ಬರೆದು ಅದರಲ್ಲಿನ 'ಹಯ್ ತಟಾನೆ ಪಟಾ ರಂಗಪತಿ ಜಟ ಘರೀಶಿ ಕಾ ರಿಶಿ ಮಗಬಾ ಉಠಾ ಠೇವ್ ಕಾ ತರಿ'[9] ಎಂಬ ಸಾಲುಗಳನ್ನು ಶ್ರೀ ಶುಭರಾಯರನ್ನು

ಅವಮಾನಿಸುವುದಕ್ಕೆಂದೇ ಬರೆದರು ಎಂಬುದು ಮರಾಠೀ ಲೇಖಕರು ಸೃಷ್ಟಿಸಿರುವ ಒಂದು ಕಟ್ಟುಕಥೆ. ಶ್ರೀ ಶಂಕರ ತುಕಾರಾಂ ಶಾಲಿಗ್ರಾಮ್ ಅವರು ಶ್ರೀ ಸೋಯಾರೋಭನಾಥ ಅಂಬಿಯೆ ಅವರ ಬಗೆಗೆ ತಮಗಿದ್ದ ತಿರಸ್ಕಾರವನ್ನೂ ತೋರುವುದಕ್ಕಾಗಿ ಶ್ರೀರಾಮ ಜೋಶಿಯವರು ಈ ಲಾವಣಿಯನ್ನೂ ಬರೆದರು ಎಂದು ಹೇಳುತ್ತಾರೆ.[10] ಆದರೆ ಶ್ರೀ ಸೋಯಾರೋಭನಾಥ ಅಂಬಿಯೆ ಅವರಿಗಾಗಲೀ, ಶೋಲಾಪುರಕ್ಕಾಗಲೀ, ರಾಮಜೋಶಿ ಯವರಿಗಾಗಲೀ ಯಾವ ಸಂಬಂಧವೂ ಇಲ್ಲ. ಆದ್ದರಿಂದ 1928ರಲ್ಲಿ ವಿನಾಯಕ ಲಕ್ಷ್ಮಣ್ ಭಾವೆಯವರು ಈ ಸಾಲುಗಳಲ್ಲಿದ್ದ ಶ್ರೀ ಸೋಯಾರೋಭನಾಥ ಅಂಬಿಯೆ ಅವರ ಹೆಸರನ್ನು ತೆಗೆದು ಅದರ ಜಾಗದಲ್ಲಿ ಸಂತ ಶುಭರಾಯರ ಹೆಸರನ್ನು ಸೇರಿಸಿ ಬಿಟ್ಟರು.[11] ಹೀಗೆ ಶ್ರೀರಾಮಜೋಶಿಯವರ ಬಗೆಗೆ ಮತ್ತು ಒಬ್ಬ ಸಂತನ ಬಗೆಗೆ ಅವರಿಗಿದ್ದ ಅಭಿಪ್ರಾಯಗಳನ್ನು ಕುರಿತು ತಪ್ಪು ಅಭಿಪ್ರಾಯ ಮೂಡಿಸುವ ಇಂಥ ಪ್ರಯತ್ನಗಳಿಗೂ, ಅಪಪ್ರಚಾರಕ್ಕೂ ಶ್ರೀ ಶ್ರೀಪಾದ ಮಹಾದೇವ ವರದೆ ಅವರು 1930ರಷ್ಟು ಹಿಂದೆಯೇ ಬೀಮಾರಿ ಹಾಕಿದ್ದಾರೆ.[12] ಆದಾಗ್ಯೂ ಶ್ರೀ ವಿ.ಎಲ್. ಭಾವೆಯವರ ಹಿಂಬಾಲಕರು[13] ಇಂದಿಗೂ ಆ ಲಾವಣಿಗೂ, ಶುಭರಾಯರಿಗೂ ಗಂಟು ಹಾಕುತ್ತಲೇ ಬಂದಿದ್ದಾರೆ.

ಶ್ರೀ ಶುಭರಾಯರದು ಆತ್ಮಜ್ಞಾನದ ಬೆಳಕು ಕಂಡ ಜೀವ. ಅವರು 147 ಆಧ್ಯಾತ್ಮಿಕ ಪದಗಳನ್ನೂ ಮರಾಠೀ ಸಾಹಿತ್ಯಕ್ಕೂ, 500 ಚಿತ್ರಗಳನ್ನು ಭಾರತೀಯ ಕಲಾ ಪ್ರಪಂಚಕ್ಕೂ ಬಳುವಳಿಯಾಗಿ ನೀಡಿ ತಮ್ಮ ನೆನಪಿನೊಂದಿಗೇ ಬಿಟ್ಟು ಹೋಗಿದ್ದಾರೆ. ಅವರು ಕೊನೆಯುಸಿರೆಳೆದದ್ದು 1820ರಲ್ಲಿ. ತಾವು ಕಟ್ಟಿದ ಮಠದ ಆವರಣದಲ್ಲಿಯೇ ಅವರ ಸಮಾಧಿಯನ್ನೂ ನಿರ್ಮಿಸಲಾಗಿದೆ.

ಶ್ರೀ ಶುಭರಾಯರ ರಚನೆಗಳ ಒಂದು ವಿಶೇಷ ಗುಣವೆಂದರೆ ಅವರು ತಾವು ಬರೆದ 147 ಪದಗಳಲ್ಲೇ ಭಾರತೀಯ ಸಂಗೀತದ 64 ರಾಗಗಳನ್ನೂ, ರಾಗಿಣಿಗಳನ್ನೂ ಬಳಸಿದ್ದಾರೆ ಎನ್ನುವುದು. ಹೀಗೆ ಸಂಗೀತಗಾರನೊಬ್ಬ ತನ್ನ ಕೆಲವೇ ಕೆಲವು ರಚನೆಗಳಲ್ಲಿ ಇಷ್ಟೊಂದು ರಾಗ-ರಾಗಿಣಿಗಳನ್ನು ಬಳಸಿಕೊಂಡ ನಿದರ್ಶನ ಬೇರೆ ಯಾವುದೇ ಭಾರತೀಯ ಭಾಷೆಯಲ್ಲಿ ಮಾತ್ರವಲ್ಲ, ಜಗತ್ತಿನ ಯಾವ ಭಾಷೆಯಲ್ಲೂ ಇಲ್ಲ. ಅವರ ಈ ಪದಗಳು ರಚನೆಕಾರರ ಆಧ್ಯಾತ್ಮಿಕ ಅನುಭವ ಹಾಗೂ ಅವರ ಭಕ್ತಿಭಾವದಿಂದ ಮೂಡಿಬಂದಿದೆ.

ಮಹಾಪ್ರಭು ಚೈತನ್ಯರು ತಮ್ಮ ಭಕ್ತಿಯ ಆವೇಶದಲ್ಲಿ ರಾಧಾಕೃಷ್ಣನ ಮುಂದೆ ಹಾಡಿ-ನರ್ತಿಸ ಮಾಡುತ್ತಿದ್ದಂತೆಯೇ ಶುಭರಾಯರೂ ಕೂಡ ಪಾಂಡುರಂಗನ ಮುಂದೆ ಹಾಡಿ ನರ್ತಿಸುತ್ತಿದ್ದರು. ಭಕ್ತಿಪಂಥ ಕಾವ್ಯದ ಸರಿಸುಮಾರು ಹನ್ನೆರಡು ಮುಖ್ಯ ಅಂಶಗಳು ಶ್ರೀ ಶುಭರಾಯರ ರಚನೆಗಳಲ್ಲೂ ಕಾಣಬರುತ್ತವೆ. ಅವುಗಳನ್ನು ಅರ್ಥ ಮಾಡಿಕೊಳ್ಳಬೇಕಾದರೆ ಉಪನಿಷತ್ತುಗಳ, ಭಟ್ಟಭಾಸ್ಕರರಾಯರ ಸಂಪ್ರದಾಯದ ಮುಖ್ಯ

ಅಂಶಗಳ ಮತ್ತು ವೈಷ್ಣವ ಭಕ್ತಿಪಂಥದ ಮೂಲಭೂತ ತತ್ವಗಳ ಅರಿವು ನಮಗಿರಬೇಕು.

ಈಗಾಗಲೇ ಪ್ರಕಟವಾಗಿರುವ ಶ್ರೀ ಸುಭರಾಯರ ಹಾಡುಗಳ ಜೊತೆಗೆ ನಾನು ಅವರ 'ಪದವಲಿ'ಯ ಎರಡು ಹಸ್ತಪ್ರತಿಗಳನ್ನೂ ಶೋಧಿಸಿ ಸಂಪಾದಿಸಿದ್ದೇನೆ. 'ಪಟ ಸುಬರಾಯ್ ಬಾಬಾ ಯಾಂಚೆ' ಎಂಬ ಕೃತಿಯ ಎರಡು ಪುಟಗಳನ್ನು ಓದುಗರ ಹಾಗೂ ವಿದ್ವಾಂಸರ ಗಮನಕ್ಕೆ ಇಲ್ಲಿ ತರಲಾಗಿದೆ.

ಒಂದು ರಾಜ್ಯದಿಂದ ಬೇರೆ ರಾಜ್ಯಕ್ಕೆ ವಲಸೆ ಹೋಗಿ ತಮ್ಮ ಮಾತೃಭಾಷೆಯಲ್ಲದ ಅನ್ಯಭಾಷೆಯಲ್ಲಿ ಕಾವ್ಯ ರಚನೆ ಮಾಡಿ, ರಾಷ್ಟ್ರೀಯ ಐಕಮತ್ಯಕ್ಕೆ ತಮ್ಮ ಕಾಣಿಕೆಯನ್ನು ನೀಡಿರುವ ಸಂತರ ಸಾಲಿನಲ್ಲಿ ಮಹಾರಾಷ್ಟ್ರ ನಾಮದೇವರೊಂದಿಗೆ ನಿಲ್ಲಬಲ್ಲಂಥವರು ಶ್ರೀ ಸುಭರಾಯರು. ನಾಮದೇವರ ಮಾತೃಭಾಷೆ ಮರಾಠೀ. ಅವರು ಮಹಾರಾಷ್ಟ್ರದಿಂದ ಉತ್ತರಕ್ಕೆ ಹೋಗಿ ಹಿಂದಿಯಲ್ಲಿ ಪದ್ಯರಚನೆ ಮಾಡಿದರು. ಅವರ ಕೆಲವು ಗೀತೆಗಳು ಪಠನೆಯ ಪೂಜ್ಯ ಗೀತೆಗಳಾಗಿ ಗುರುಗ್ರಂಥ ಸಾಹಿಬ್‌ನಲ್ಲಿ ಸೇರ್ಪಡೆಯಾಗಿವೆ. ಅದೇ ರೀತಿ ಸುಭರಾಯರ ಮಾತೃಭಾಷೆ ತೆಲುಗು. ಅವರೂ ಕೂಡ ಕರ್ನಾಟಕದ ಉತ್ತರಕ್ಕೆ ವಲಸೆ ಹೋಗಿ ಮರಾಠಿಯಲ್ಲಿ ಕಾವ್ಯರಚನೆ ಮಾಡಿದರು. ಅವರ ಹಾಡುಗಳನ್ನೂ ಮಹಾರಾಷ್ಟ್ರದ ಅನೇಕ ಕಥೆ ಜೀವನಕಾರರು ಬಳಸಿಕೊಳ್ಳುತ್ತಾರೆ.

ಭಕ್ತಿಪಂಥದ ಪ್ರಸಿದ್ಧ ಕವಿ ಸೂರದಾಸ್ ಹಿಂದಿಯಲ್ಲಿ ಬರೆದಿರುವ ಪದಗಳ ಮತ್ತು ಶ್ರೀ ಸುಭರಾಯರ ಚಿತ್ರಕಲೆ ಎರಡಕ್ಕೂ ಮೂಲ ಆಕರ ಶ್ರೀಮದ್ಭಾಗವತ. ಹಾಗಾಗಿ ಸೂರದಾಸರ ಪದಗಳನ್ನು ಎಚ್ಚರದಿಂದ ಆಯ್ಕೆ ಮಾಡಿ ಸುಭರಾಯರು ಬರೆದಿರುವ ಚಿತ್ರಗಳೊಂದಿಗೆ ಪ್ರಕಟಿಸಿದರೆ ಅದು ಭಾರತೀಯ ಸಾಹಿತ್ಯ ಮತ್ತು ಕಲಾ ವಾಙ್ಮಯದಲ್ಲೇ ವಿಶಿಷ್ಟ ಕೃತಿಯಾಗಬಲ್ಲದು. ಸೂರದಾಸರ ಹಾಡುಗಳ ರಾಗ-ಲಯಗಳನ್ನು ಸುಭರಾಯರ ಚಿತ್ರಗಳಲ್ಲೂ, ಸುಭರಾಯರ ಚಿತ್ರಗಳ ಧ್ವನಿಯನ್ನು ಸೂರದಾಸರ ಹಾಡುಗಳಲ್ಲೂ ಗುರುತಿಸಬಹುದು.

ಸುಭರಾಯರ ಚಿತ್ರರಚನೆಗಳು ಅದ್ಭುತವಾಗಿವೆ. ತಮ್ಮ ವೈಷ್ಣವ ಭಕ್ತಿಯ ಅಖಂಡವಾದ ಭಕ್ತಿ-ಭಾವದ ಅಭಿವ್ಯಕ್ತಿಗಾಗಿ ಸುಭರಾಯರು ಚಿತ್ರಮಾಧ್ಯಮವನ್ನು ಬಳಸಿಕೊಂಡಿದ್ದಾರೆ. ಅವರ ಈ ಸೃಷ್ಟಿಕ್ರಿಯೆಗೆ ವಿಷಯವನ್ನು ಒದಗಿಸಿದ ಮೂಲ ಆಕರಗಳು – ಶ್ರೀಮದ್‌ಭಗವದ್ಗೀತೆ, ಮಹಾಪುರಾಣ, ರಾಮಾಯಣ, ಗೀತಗೋವಿಂದ ಹಾಗೂ ಅನಂತವಾದ ಪ್ರಕೃತಿ. ಕೃಷ್ಣಜನ್ಮಾಷ್ಟಮಿ, ರಾಮನವಮಿ, ಆಷಾಢ ಹಾಗೂ ಕಾರ್ತೀಕ ಏಕಾದಶಿಯಂಥ ಹಬ್ಬ-ಹರಿದಿನಗಳಲ್ಲಿ ತಮ್ಮ ಮಠ ಹಾಗೂ ಪಾಂಡುರಂಗನ ಗುಡಿಯನ್ನು ತಮ್ಮ ಚಿತ್ರಗಳಿಂದ ಅವರು ಅಲಂಕರಿಸುತ್ತಿದ್ದರು.

ಈ ಚಿತ್ರರಚನೆಗೆ ಅವರು ಲೆಕ್ಕಪತ್ರ ಬರೆದಿರುವ ಹಾಳೆಗಳನ್ನೂ ಉಪಯೋಗಿಸಿದ್ದಾರೆ. ಈ ಕಾಗದಕ್ಕೆ 'ವಹಿಖಾತಾ' ಎಂದು ಹೆಸರು. ಅಲ್ಲಲ್ಲಿ ಹರಿದಿರುವ ಈ ರಚನೆಗಳ ಅಡಿಯ ಹಾಳೆಗಳ ಮೇಲೆ ಮೋಡಿ ಅಕ್ಷರಗಳಲ್ಲಿ ಬರೆದಿರುವ ಲೆಕ್ಕ-ಪತ್ರಗಳನ್ನು ಕಾಣಬಹುದು.

ಈ ಹಾಳೆಗಳನ್ನು ಒಂದರ ಮೇಲೊಂದು ಅಂಟಿಸಿ, ದಪ್ಪವಾಗುವಂತೆ ಮಾಡಿ ಅದನ್ನೇ ಕ್ಯಾನ್‌ವಾಸ್ ರೀತಿಯಲ್ಲಿ ಬಳಸಲಾಗಿದೆ. ಕೆಲವು ಚಿತ್ರಗಳಿಗೆ ಬಿದಿರಿನ ಕಟ್ಟುಹಾಕಿ ಕಾಗದಕ್ಕೆ ಸಾಕಷ್ಟು ಬಿಗಿಯನ್ನು ಒದಗಿಸಲಾಗಿದೆ. ಈ ಚಿತ್ರಗಳು ತಮ್ಮ ಆಕಾರ ಮತ್ತು ಅಳತೆಯಲ್ಲಿ ಒಂದಕ್ಕೊಂದು ಭಿನ್ನವಾಗಿವೆ. ಪ್ರತಿವರ್ಷವೂ ಬೇರೆ ಬೇರೆ ಸಂದರ್ಭಗಳಲ್ಲಿ ಇವುಗಳ ಉಪಯೋಗವಾಗುತ್ತಿದ್ದುದರಿಂದ, ಶುಭರಾಯರು ಹಳೆಯ ಚಿತ್ರಗಳ ಮೇಲೆ ಹೊಸ ಚಿತ್ರಗಳನ್ನು ಅಂಟಿಸಿರುವುದೂ ಉಂಟು. ಇದು ಪ್ರಕಟಿತಗೊಂಡಿರುವ ಕೆಲವು ರಚನೆಗಳಿಂದ ಸ್ಪಷ್ಟವಾಗುತ್ತದೆ

ಶ್ರೀ ಶುಭರಾಯರು ಸಸ್ಯವರ್ಣಗಳನ್ನು ಉಪಯೋಗಿಸಿದ್ದು, ಅವು ಇಂದಿಗೂ ಹೊಚ್ಚ ಹೊಸದಾಗಿ ಕಾಣುತ್ತವೆ. ಕೆಂಪು, ಕಡುನೀಲಿ, ಕಪ್ಪು, ಕಡುಹಸುರು, ಹಳದಿ ಮತ್ತು ಶ್ವೇತವರ್ಣಗಳು ಈ ಚಿತ್ರಗಳಲ್ಲಿ ಎದ್ದುಕಾಣುವ ಬಣ್ಣಗಳು. ಈ ಚಿತ್ರಗಳ ವರ್ಣ ಸಂಯೋಜನೆ ವೈವಿಧ್ಯದಿಂದ ಕೂಡಿದ್ದು, ಹಿತವಾಗಿಯೂ, ಆಕರ್ಷಕವಾಗಿಯೂ ಇದೆ. ತ್ರಿ–ಪದರ ಭ್ರಮೆ (Three dimensional effect) ಹುಟ್ಟಿಸಲು ಶುಭರಾಯರು ಚಿತ್ರದ ಪಾತ್ರಗಳು, ಧರಿಸಿರುವ ಬಟ್ಟೆಗಳ ಅಲಂಕರಣಕ್ಕೆಂದು ಮಂದವಾದ ವರ್ಣಚಿಕ್ಕೆಗಳನ್ನಿಟ್ಟಿದ್ದಾರೆ. ಈ ಚಿಕ್ಕೆಗಳು ವ್ಯಕ್ತಿಚಿತ್ರಗಳು ಧರಿಸಿರುವ ವಸ್ತ್ರಗಳಿಗೆ ಅಲಂಕಾರ ವನ್ನೀಯುವುದರ ಜೊತೆಗೆ ಉಬ್ಬುಚಿತ್ರದ ಅನುಭವ ನೀಡುತ್ತವೆ. ಅಂತೆಯೇ ಅವು ಧರಿಸಿರುವ ಆಭರಣಗಳನ್ನೂ, ಅಲಂಕರಣ ಸಾಮಗ್ರಿಗಳನ್ನೂ ಇಂಥವೇ ಚಿಕ್ಕೆಗಳಿಂದ ತುಂಬಿದ್ದು, ಈ ಶೈಲಿ ಚಿತ್ರಗಳಿಗೂ, ವರ್ಣಸಂಯೋಜನೆಗೂ ವಿಶೇಷ ಪ್ರಭಾವ ತಂದಿದೆ.

ಇನ್ನೂ ಕೆಲವು ರಚನೆಗಳಲ್ಲಿ ಮೊದಲು ಒಂದು ಹಾಳೆಯ ಮೇಲೆ ಚಿತ್ರ ಬರೆದು, ಅದನ್ನು ಹಾಳೆಯಿಂದ ಕತ್ತರಿಸಿ, ಬೇರೆ ಕಾಗದದ ಮೇಲೆ ಅಂಟಿಸಿ, ಅನಂತರದಲ್ಲಿ ಅದರ ಹಿನ್ನೆಲೆಗೆ ಬಣ್ಣ ಹಾಕಲಾಗಿದೆ. ಹೀಗೆ ಮಾಡಿರುವುದರಿಂದ ಆ ಚಿತ್ರಗಳು ತಮ್ಮ ಹಿನ್ನೆಲೆಯಿಂದ ಎದ್ದು ನಿಂತಿರುವಂತೆ ಕಾಣುತ್ತವೆ.

ಶ್ರೀ ಶುಭರಾಯರು ಚಿತ್ರಿಸಿರುವ ರಚನೆಗಳು ಸಾಮಾನ್ಯವಾಗಿ ತೋರವಾಗಿಯೂ, ಗುಂಡುಗುಂಡಾಗಿಯೂ ಇದ್ದರೂ ತಮ್ಮ ಆಂಗಿಕ ರಚನೆಯ ಅಳತೆಯಲ್ಲಿ ನಿಷ್ಕೃಷ್ಟವಾಗಿಯೂ, ಮೊನಚಾಗಿಯೂ ಇವೆ. ನೀಳವಾದ ಕಣ್ಣುಗಳೂ, ಮೊನಚಾದ ನಾಸಿಕ ಮತ್ತು ಆಕರ್ಷಕವಾದ ಮುಖಭಾವವಿರುವ ಈ ಚಿತ್ರಗಳು ಮನಸೂರೆಗೊಳ್ಳುತ್ತವೆ. ನೃತ್ಯ ಮಾಡುತ್ತಿರುವಂತೆ ರಚನೆಯಾಗಿರುವ ಚಿತ್ರಗಳು, ಸಂಗೀತದ ಲಯಕ್ಕೆ ಸರಿಸಮವಾದ ಭಾವ–ಭಂಗಿಯೊಡನೆ ಮಿಳಿತವಾಗಿವೆ. ರಾಧಾ, ಕೃಷ್ಣ ಗೋಪಿಯರ ನೃತ್ಯ ಮತ್ತು ಪ್ರೇಮ ಸಲ್ಲಾಪಗಳನ್ನು ಕುರಿತ ಚಿತ್ರಗಳಂತೂ ಮತ್ತೆ ಮತ್ತೆ ನೋಡಬೇಕೆನ್ನಿಸುವಂಥವು.

ಬಾಲಕೃಷ್ಣ, ಗೊಲ್ಲಕೃಷ್ಣ, ರಾಧಾ, ಗೋಪ–ಗೋಪಿಯರು – ಅವರ ಲೀಲೆಗಳೂ, ಗೋವುಗಳು, ದಂತಿಗಳು, ರಾಮ–ಸೀತೆ, ಹನುಮಂತ ಮತ್ತು ಋಷಿಗಳು

ಈ ಎಲ್ಲ ರಚನೆಗಳೂ ತುಂಬಾ ಸುಂದರವಾಗಿವೆ. ಅನೇಕ ರಚನೆಗಳಲ್ಲಿ ಸುತ್ತಲಿನ ಸನ್ನಿವೇಶವನ್ನು ಹೂವಿನ ಗಿಡಗಳು, ಬಳ್ಳಿಗಳು ಮತ್ತು ಎಲೆಗಳು ತುಂಬಿದ್ದು, ಪ್ರಕೃತಿಯ ಈ ಸೌಂದರ್ಯ ಆ ಚಿತ್ರಗಳಲ್ಲಿನ ಮಾನವಾಕಾರಗಳಿಗೂ, ಅವುಗಳ ಭಾವ ಸನ್ನಿವೇಶಕ್ಕೂ ಹೊಸ ಸೌಂದರ್ಯವನ್ನು ಒದಗಿಸುತ್ತವೆ. ಈ ಕಾರಣದಿಂದಲೇ ಶ್ರೀ ಶುಭರಾಯರ ಪ್ರತಿಯೊಂದು ಕಲಾಪ್ರದರ್ಶನದಲ್ಲೂ ಸುಂದರ, ಬಹುಸುಂದರ, ಅದ್ಭುತ ಎಂಬ ಉದ್ಗಾರಗಳು ವೀಕ್ಷಕರಿಂದ ಕೇಳಿಬರುತ್ತದೆ.

ಶ್ರೀ ಶುಭರಾಯರ ಚಿತ್ರಗಳನ್ನು ನಾಲ್ಕು ಗುಂಪುಗಳನ್ನಾಗಿ ವಿಂಗಡಿಸಬಹುದು. ಅವು ಹೀಗಿವೆ :

1. ವಿಷ್ಣು ಮತ್ತು ಅವನ ದಶಾವತಾರದ ಚಿತ್ರಗಳು
2. ಕೃಷ್ಣಾವತಾರದ ಚಿತ್ರಗಳು ಅಂದರೆ ಬಾಲಕೃಷ್ಣ, ಗೋಪ–ಗೋಪಿಯರು, ರಾಧಾ–ಕೃಷ್ಣ ಮತ್ತು ಅವರ ಲೀಲೆಗಳನ್ನು ತೋರಿಸಿರುವ ರಚನೆಗಳು
3. ರಾಮಾಯಣ ಕಥೆಯನ್ನಾಧರಿಸಿದ ಚಿತ್ರಗಳು
4. ಪ್ರಕೃತಿ ಸಂಬಂಧವಾದ ಚಿತ್ರಗಳು

(ಅ) ವಿಷ್ಣುವಿನ ದಶಾವತಾರದ ಚಿತ್ರಗಳು

ಚಿತ್ರ 6 : ಶೇಷನಾಗನ ಮೇಲೆ ಪವಡಿಸಿ, ಶ್ರೀಲಕ್ಷ್ಮಿ, ಬ್ರಹ್ಮ ಮತ್ತು ಗಂಧರ್ವರಿಂದ ಸೇವಿಲ್ಪಡುತ್ತಿರುವ ವಿಷ್ಣು.

7. ಮತ್ಸ್ಯಾವತಾರ ಮತ್ತು ಕೂರ್ಮಾವತಾರಗಳು
8. ವರಾಹವತಾರ ಮತ್ತು ನರಸಿಂಹಾವತಾರಗಳು
9. ವಾಮನಾವತಾರ
10. ಪರಶುರಾಮಾವತಾರ
11. ರಾಮಾವತಾರ ಮತ್ತು ಕೃಷ್ಣಾವತಾರಗಳು
12. ಕಲ್ಕ್ಯಾವತಾರ ಮತ್ತು ಬುದ್ಧಾವತಾರಗಳು
13. ವಿಷ್ಣುವಿನ ಮೂವರು ಭಕ್ತರು (1 ನಾರದ, 2 ಹನುಮಾನ್ 3 ಗರುಡ)

(ಆ) ಕೃಷ್ಣಾವತಾರದ ಚಿತ್ರಗಳು

14. ರೋಹಿಣಿ ಬಲರಾಮನಿಗೆ ಹಾಲುಣಿಸುತ್ತಿರುವುದು. ಬೆಣ್ಣೆಗಾಗಿ ಕೃಷ್ಣ ಯಶೋಧೆಯನ್ನು ಬೇಡುತ್ತಿರುವುದು.

15. ಪೂತನೀ ವಧೆ
16. ಕೃಷ್ಣ–ಬಲರಾಮರು ಕಳ್ಳತನದ, ತುಂಟಾಟದ ಆರೋಪಗಳನ್ನು ಪರಸ್ಪರರ ಮೇಲೆ ಹಾಕುತ್ತಿರುವುದು
17. ನವನೀತಚೋರ ಹಾಗೂ ಅವನ ಗೆಳೆಯರ ಕೃತ್ಯವನ್ನು ಗೋಪಿ ಮತ್ತು ಅವಳ ಅತ್ತೆ ನೋಡುತ್ತಿರುವುದು
18. ದಿವ್ಯಚೋರನನ್ನು ಬಂಧಿಸಲು ಯಶೋಧ ಮತ್ತು ಗೋಪಿಯರು ಪ್ರಯತ್ನಿಸುತ್ತಿರುವುದು.
19. ಯಮಲರಾರ್ಜುನ ಮೋಕ್ಷ
20. ಬ್ರಜದೇಶದ ಗೋಪರು
21. ಹಾಲು–ಮೊಸರು ಮಾರಲು ಹೊರಟಿರುವ ಗೋಪರು
22. ಹಾಲು–ಮೊಸರು ಮಾರಲು ಹೊರಟಿರುವ ಗೋಪಿಯರು
23. ಹಾಲು–ಮೊಸರು ಮಾರಲು ಹೊರಟಿರುವ ಗೋಪಿಯರನ್ನ ಅಡ್ಡಗಟ್ಟಿರುವ ಕೃಷ್ಣ–ಬಲರಾಮರು
24. ತನ್ನ ದಿವ್ಯವಾದನದಿಂದ ಗೋವುಗಳನ್ನು ಕರೆಯುತ್ತಿರುವ ಬೃಂದಾವನದ ದಿವ್ಯ ಕೊಳಲುವಾದಕ
25. ಕಾಳಿಂಗ ನರ್ತನ ಲೀಲಾ
26. ಗೋವುಗಳು, ಬಾಲಗೋಪಾಲರು, ದಾವಾನಿಲದಿಂದ ಜೀವ ಉಳಿಸಿ ಕೊಳ್ಳಲು ಓಡುತ್ತಿರುವುದು.
27. ಪ್ರೇಮ–ಸೌಂದರ್ಯಗಳ ಸಾಕಾರ ರೂಪಿ ಕೃಷ್ಣ
28. ಚಕ್ರಿಯನ್ನು ನುಡಿಸುತ್ತಿರುವ ಪ್ರೇಮ–ಸೌಂದರ್ಯಗಳ ಸಾಕಾರ ರೂಪಿ ಗೋಪ
29. ಬಳ್ಳಿಯೊಂದರಿಂದ ಹೂ ಬಿಡಿಸುತ್ತಿರುವ ರಾಧೆ
30. ಉದ್ಯಾನದಲ್ಲಿ 'ಫುಗಾದಿ' ಆಡುತ್ತಿರುವ ರಾಧಾ–ಕೃಷ್ಣರು.
31. ಫುಗಾದಿ (ಗಿರಗಟ್ಟಿ) ಆಡುತ್ತಿರುವ ರಾಧಾ–ಕೃಷ್ಣರು
32. ಗೋಪಿಯರು ಗೆಳತಿಯರೊಂದಿಗೆ ಗಿರಗಟ್ಟಿ ಆಡುತ್ತಿರುವುದು
33. ವಸ್ತ್ರಾಪಹರಣ
34. ಗಿಡವೊಂದರ ನೆರಳಿನಲ್ಲಿ ರಾಧಾ–ಕೃಷ್ಣರು
35. ರಾತ್ರಿಯಲ್ಲಿ 'ಭವನ'ದಲ್ಲಿರುವ ರಾಧಾ–ಕೃಷ್ಣರು. ಇಲ್ಲಿನ ಗೋಪುರಗಳು ಮುಸ್ಲಿಂ ಪ್ರಭಾವವನ್ನು ತೋರಿಸುತ್ತವೆ.
36. ವಿಶ್ರಾಂತಿಯಲ್ಲಿರುವ ಕೃಷ್ಣ ಮತ್ತು ಅವನನ್ನು ಸೇವಿಸುತ್ತಿರುವ ರಾಧಾ

37. 'ಶೃಂಗಾರ'ದ ನಂತರದಲ್ಲಿ ಬೃಂದಾವನದ ಬಳಿ ಸಂಧಿಸಿರುವ ರಾಧಾ–ಕೃಷ್ಣರು
38. ಶೃಂಗಾರದ ತರುವಾಯ ತನ್ನ ಸೌಂದರ್ಯವನ್ನು ಹಾಗೂ ಕೃಷ್ಣನ ಮುಖವನ್ನು ಕನ್ನಡಿಯ ಪ್ರತಿಬಿಂಬದಲ್ಲಿ ಕಾಣುತ್ತಿರುವ ರಾಧಾ.
39. ಜ್ಞಾತ ಯೌವನ ನಾಯಿಕೆಯಾದ ರಾಧಾ ಚಕ್ರಿಯೊಂದಿಗೆ ಆಡುತ್ತಿರುವಾಗ ಅವಳ ಏಕಾಂತತೆಗೆ ಭಂಗ ತರುತ್ತಿರುವ ಕೃಷ್ಣ
40. ನಿಕುಂಜಲೀಲಾ ಉದ್ಯಾನದಲ್ಲಿ ರಾಧೆಯ ಜಡೆ ಹೆಣೆಯುತ್ತಿರುವ ಕೃಷ್ಣ
41. ತನ್ನ ಪ್ರಿಯಕರಳ 'ವೇಣೀಗುಂಫನ'ದಲ್ಲಿ ತೊಡಗಿರುವ ಕೃಷ್ಣ
42. ರಾತ್ರಿ ರಾಧಾ–ಕೃಷ್ಣರು ಪರಸ್ಪರ ಸಂಧಿಸಿರುವ ಮೂರು ಚಿತ್ರಗಳು
43. ಪ್ರೇಮದ ಏಕಾಂತದಲ್ಲಿರುವ ರಾಧಾ–ಕೃಷ್ಣರನ್ನು ತೋರಿಸುವ ಎರಡು ಚಿತ್ರಗಳು
44. ಕೃಷ್ಣನಿಗೆ ವೀಳೆಯವನ್ನು ಮಡಿಸಿಕೊಡುತ್ತಿರುವ ರಾಧಾ
45. ರಾಧಾ–ಕೃಷ್ಣ ಬೃಂದಾವನದ ಕೊಳಲಿನ ಮಾಂತ್ರಿಕ
46. ಕೃಷ್ಣ ಮತ್ತು ಇಬ್ಬರು ಗೋಪಿಯರು ನರ್ತಿಸುತ್ತಿರುವುದು
47. ಕೈಹಿಡಿದು ನರ್ತಿಸುತ್ತಿರುವ ಗೋಪಿಯರು
48. ರಾಧಾ–ಕೃಷ್ಣ ಮತ್ತು ಗೋಪಿಯರ ನರ್ತನದ ಒಂದು ದೃಶ್ಯ
49. ರಾಸಲೀಲೆಯ ಒಂದು ದೃಶ್ಯ. ನಾಲ್ವರು ಗೋಪಿಯರು ಇರುವ ಗುಂಪಿನೊಂದಿಗೆ ಕೃಷ್ಣ
50. ಉದ್ಯಾನದಲ್ಲಿ ನರ್ತಿಸುತ್ತಿರುವ ಕೃಷ್ಣ ಮತ್ತು ಈರ್ವರು ಗೋಪಿಯರು
57. ಗೋಪಿಯರ 'ದಂಡಿಯ ರಾಸನೃತ್ಯ' (ಕೋಲಾಟ)
52. ಉತ್ಸಾಹದಿಂದ ನರ್ತಿಸುತ್ತಿರುವ ಗೋಪಿಯರು
53. ರಾಸಲೀಲೆಯ ಸಮಯದಲ್ಲಿ ಅದೃಶ್ಯನಾದ ಕೃಷ್ಣನನ್ನು ಎಲ್ಲಿರುವೆ ಎಂದು ಅರಸುತ್ತಿರುವ ಗೋಪಿಯರು
54. ರಾಸಲೀಲೆಯ ಸಮಯದಲ್ಲಿ ರಾಧೆಯೊಂದಿಗೆ ಅದೃಶ್ಯನಾಗಿದ್ದ ಕೃಷ್ಣನನ್ನು ಮತ್ತೆ ಕಂಡು ಆನಂದ ಹೊಂದಿರುವ ಗೋಪಿಯರು
55. ಅಕ್ರೂರನು ಬಲರಾಮ–ಕೃಷ್ಣರನ್ನು ಬ್ರಜದೇಶದಿಂದ ಮಥುರೆಗೆ ಕರೆದೊಯ್ಯುವಾಗ ತಮ್ಮ ದಿವ್ಯಪ್ರೇಮಿಯನ್ನು ಕಳೆದುಕೊಂಡ ಗೋಪಿಯರು ದುಃಖಸಾಗರದಲ್ಲಿ ಮುಳುಗಿರುವುದು.

(ಇ) ರಾಮಾಯಣದ ಕಥೆಯನ್ನಾಧರಿಸಿದ ಚಿತ್ರಗಳು

56. ಪಟ್ಟಾಭಿಷಿಕ್ತನಾದ ರಾಮನನ್ನು ಹರಸುತ್ತಿರುವ ಋಷಿಗಳು ಮತ್ತು ಅವನ ಪಾದ ಸೇವೆ ಮಾಡುತ್ತಿರುವ ಹನುಮಂತ

57. ಶ್ರೀರಾಮ ಪಟ್ಟಾಭಿಷೇಕವಾದ ತರುವಾಯ ಸೀತೆಯನ್ನೂ ಸೇವಿಸುತ್ತಿರುವ ಲಕ್ಷ್ಮಣ, ಭರತ–ಶತ್ರುಘ್ನರು.

58. 11–4–60ರಂದು ನಡೆದ ಶ್ರೀ ಶುಭರಾಯರ ಕಲಾಪ್ರದರ್ಶನದಲ್ಲಿ ಪಂಡಿತ ಜವಹರ್‌ಲಾಲ್ ಅವರು. ಅವರ ಹಿಂದೆ ಶ್ರೀರಂಗ ವೈದ್ಯ ಅವರೂ ಇದ್ದಾರೆ.

(ಈ) ಪ್ರಕೃತಿ ಸಂಬಂಧವಾದ ಚಿತ್ರ

59. ಅರಣ್ಯದಲ್ಲಿರುವ ಆನೆಗಳು, ಪ್ರಾಯಶಃ ಶುಭರಾಯರು ಮೈಸೂರಿನಲ್ಲಿ, ಅಲ್ಲಿನ ಅರಣ್ಯದಲ್ಲಿ ಕಂಡಿರಬಹುದಾದ ಆನೆಗಳ ನೆನಪಿನಿಂದ ಮೂಡಿರಬೇಕು.

ಈ ಶುಭರಾಯರ ಹೆಚ್ಚಿನ ರಚನೆಗಳು ಭಾಗವತ ಪುರಾಣದಲ್ಲಿ ಹೇಳಿರುವ ಕೃಷ್ಣನ 'ಬ್ರಜ ಲೀಲೆ'ಗೆ ಸಂಬಂಧಿಸಿದುವು. ಶ್ರೀಕೃಷ್ಣಚರಿತೆಯ ಇವರ ಎರಡು ಆಕರಗಳಾದ ಶ್ರಮದ್‌ಭಗವದ್ಗೀತೆ ಮತ್ತು ಮಹಾಭಾರತ ಕಥೆಗಳನ್ನಾಧರಿಸಿದ ಯಾವ ಚಿತ್ರ ರಚನೆಯನ್ನೂ ಅವರು ಮಾಡಿಲ್ಲ. ಅವರು ಮಾಡಿರುವ ಕೆಲವು ರಚನೆಗಳನ್ನು ಚಿತ್ರ ಕಲೆಯ ದೃಷ್ಟಿಯಿಂದ ಮಾತ್ರವಲ್ಲದೆ ಕೃಷ್ಣಭಕ್ತಿ ಸಂಪ್ರದಾಯವನ್ನು ಕುರಿತಂತಿರುವ ಹಾಡುಗಳು ಮತ್ತು ನಾಯಕ– ನಾಯಿಕೆ, ಭೇದ ದೃಷ್ಟಿಯಿಂದಲೂ ಅಧ್ಯಯನ ಮಾಡಬಹುದು.

ಪಂಡಿತ ಜವಹರಲಾಲ್ ನೆಹರೂ, ಆಚಾರ್ಯ ವಿನೋಬಾ ಭಾವೆ, ಡಾ. ಡಿ.ಆರ್. ಬೇಂದ್ರೆ, ಶ್ರೀ ಮಾಧವ ಸಾತಾವಲೇಕರ್, ಶ್ರೀ ಎ.ಎ. ಆಲಮೇಲ್‌ಕರ್, ಶ್ರೀ ಶಂಕರರಾವ್ ಪಾಲ್ಸೀಕರ್, ಶ್ರೀ ಭೈಯಾ ಸಾಹೇಬ್ ಓಂಕಾರ್, ಶ್ರೀ ಜತಿನ್‌ದಾಸ್, ಇಟಲಿಯ ಮಿಸ್ ಮರೀನಾ ಜೋ ಮಂತಾದವರು ಶ್ರೀ ಶುಭರಾಯರ ಕಲೆಯನ್ನು ಮೆಚ್ಚಿಕೊಂಡಿದ್ದಾರೆ. ಶ್ರೀ ಶುಭರಾಯರು ಮತ್ತು ಅವರ ಚಿತ್ರಕಲೆ ಈ ಮೆಚ್ಚಿಕೆಗೆ ಅರ್ಹವಾಗಿವೆ.

ಗ್ರಂಥ ಸೂಚಿ

(1) **ಸಂತ ಶುಭರಾಯ; ವ್ಯಕ್ತಿ ಅಧ್ಯಯನ** –
ಡಾ. ಬಿ.ಡಿ. ತಿವಾರಿಯವರ 10ನೇ ಸಂಶೋಧನಾ ಯೋಜನೆ. ಭಾರತ ಸರ್ಕಾರದ ವಿಶ್ವವಿದ್ಯಾನಿಲಯ ಅನುದಾನ ಆಯೋಗದಿಂದ ಅನುಮೋದಿತವಾಗಿದೆ ಮತ್ತು ಧನ ಸಹಾಯ ಪಡೆದಿದೆ. ನವದೆಹಲಿ, ಮೋಡಿ ಪತ್ರ ಸಂ. ಎಫ್ 7–21/82 (ಹೆಚ್.ಆರ್.–ಐ) ದಿನಾಂಕ 25–5–82.

2. ಮಿಲಿಟರಿ ಸಂಡ್ರೀಸ್. ಸಂಪುಟ ಸಂ. 106, ಜರ್ನಲ್ ಆಫ್ ಜಾನ್ ಕೆನ್ನಾವೆ (ಟಿಪ್ಪೂನ ವಕೀಲ ಮತ್ತು ಲಾರ್ಡ್ ಕಾರ್ನ್‌ವಾಲಿಸ್ ಅವರೊಂದಿಗಿನ ಸಮಾಲೋಚನೆ) ತಮಿಳುನಾಡು ಪತ್ರಾಗಾರ, ಎಗ್‌ಮೋರ್, ಮದ್ರಾಸ್-8, ದಿನಾಂಕ 2ನೇ ಮಾರ್ಚ್ 1792ರಿಂದ 10ನೇ ಮಾರ್ಚ್ 1792.

   * ಹಿಸ್ಟರಿ ಆಫ್ ಟಿಪ್ಪುಸುಲ್ತಾನ್ – ಮೊಹಿಬ್ಬುಲ್ ಹಸನ್. ದಿ ವರ್ಲ್ಡ್ ಪ್ರೆಸ್ ಪ್ರೈ. ಲಿಮಿಟೆಡ್. 37, ಕಾಲೇಜ್ ಸ್ಟ್ರೀಟ್, ಕಲಕತ್ತಾ – 122 ಎರಡನೇ ಸಂಪುಟ, 1971, ಪುಟ – 358

3. ಮಿಲಿಟರಿ ಸಂಡ್ರೀಸ್. ಸಂಪುಟ ಸಂ. 106, (ಪೂರ್ವೋಕ್ತ) ದಿನಾಂಕ 2ನೇ ಮಾರ್ಚ್, 1792, ಪುಟ ಸಂ. 224.

4. ರಸಿಕ ಕಲಾವಂತ ಸಂತ ಕವಿ ಶ್ರೀ ಶುಭರಾಯ (ಲೇಖನ) ಶ್ರೀ ಪು.ಜ. ಬುವಾ, ತರುಣ ಭಾರತ, ಪುಣೆ, 6ನೇ ಅಕ್ಟೋಬರ್, 1970, ವರ್ಷ – 33, ಸಂಖ್ಯೆ – 257, ಪುಟ – 2

   * ಕಲಾಮರ್ಮಜ್ಞ ಸಂತ ಶುಭರಾಯ (ಲೇಖನ) – ಶ್ರೀ ಗ.ತ್ರ್ಯಂ. ಕುಲಕರ್ಣಿ, ಲೋಕಪ್ರಭಾ, ಮುಂಬಯಿ, 228, ಸೆಪ್ಟೆಂಬರ್, 1975, ವರ್ಷ – 2, ಅಂಕ – 28, ಪುಟ – 13.

   * ದ ಆರ್ಟ್ ಆಫ್ ಶುಭರಾಯ ಮಹಾರಾಜ್ – ಶ್ರೀ ಗುರುದೇವಶರಣ, ದ ಇಲಸ್ಟ್ರೇಟೆಡ್ ವೀಕ್ಲಿ ಆಫ್ ಇಂಡಿಯಾ, ಸೆಪ್ಟೆಂಬರ್ 21–27, 1980, ಪುಟ – 25

   * ಆರ್ಟ್ ಆಫ್ ಶುಭರಾಯ – ಮಿಸ್ ಮರಿನಾ ಜೋ (ಇಟಲಿ) ಮಹಾರಾಷ್ಟ್ರ ಹೆರಾಲ್ಡ್, ಪುಣೆ. ದಿನಾಂಕ 31ನೇ ಮಾರ್ಚ್ 1982, ಪುಟ–2

   * ಅಜ್ಞಾತ ಸಂತ ಚಿತ್ರಕಾರ ಶುಭರಾಯ – ಚಿತ್ರ ಲೇಖನ : ಶ್ರೀ ಎನ್. ಸಿ. ದೇಸಾಯಿ. ಉದಯವಾಣಿ (ಕನ್ನಡ ಪತ್ರಿಕೆ) – ದೀಪಾವಳಿ ವಿಶೇಷಾಂಕ, 1984, ಉದಯವಾಣಿ ಪ್ರೆಸ್ ಪ್ರಕಾಶನ, ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್, ಮಣಿಪಾಲ, ದಕ್ಷಿಣ ಕನ್ನಡ ಜಿಲ್ಲೆ (ಕರ್ನಾಟಕ), ಪುಟ – 20

   * ಶ್ರೀ ಸಂತ್ ಶುಭರಾಯ ಮಹಾರಾಜ್ – ದಿ ಮ್ಯಾನ್ ದ ಆರ್ಟಿಸ್ಟ್ ಅಂಡ್ ದ ಲೈಫ್ ಆಫ್ ಕ್ರಿಯೇಟಿವ್ ಸ್ಪಿರಿಟ್ (ವ್ಯಕ್ತಿಯಾಗಿ, ಕಲಾವಿದನಾಗಿ ಮತ್ತು ಸೃಜನಾತ್ಮಕ ಚೇತನದ ಜೀವನ) – ಫ್ರಾಂಸು

ಪಾಲರು ಸಿ.ಡಿ. ಜೋಶಿ, ಕೊ ಎವಲೂಪಸ್ ಡಿಸೈನ್ ಫೌಂಡೇಷನ್, 250/ಬಿ–107, ನಾಗ್ಲ ಪಾರ್ಕ್, ಕೊಲ್ಹಾಪುರ – 416 003, ದಿನಾಂಕ 6ನೇ ಸಪ್ಟೆಂಬರ್, 1992, ಪುಟ – 3 ಮತ್ತು 4.

5. ಶ್ರೀ ಸಂತ ಕವಿ ಶುಭರಾಯ – ಲೇಖಕ, ಸಂಪಾದಕ, ಪ್ರಕಾಶಕರು – ಕವಿ ಶ್ರೀ ಕುಂಜಬಿಹಾರಿ, ಗೀತಾ ಗುರುನಾಥ ಪ್ರಕಾಶನ, ಓನಾಮಾ ಮಂದಿರ, ಸೋಲಾಪುರ, ಸನ್ 1963, ಪುಟ –2

* ಮರಾಠ ವಾಙ್ಮಯ ಕೋಶ – ಪ್ರಾಚೀನ ಖಂಡ – ಮುಖ್ಯ ಸಂಪಾದಕರು ಶ್ರೀ ಅ.ನಾ. ದೇಶಪಾಂಡೆ, ಪ್ರಕಾಶಕರು – ಶ್ರೀ ವಾ. ಭಾಗವತ, ಕುಲಸಚಿವರು, ನಾಗಪುರ ವಿದ್ಯಾಪೀಠ, ನಾಗಪುರ, ಪ್ರಥಮಾವೃತ್ತಿ, 174, ಪ್ರಾಚೀನ ಖಂಡ ಗ್ರಂಥಕಾರ
* ಭಾರತೀಯ ಸಂಸ್ಕೃತ ಕೋಶ – ಖಂಡ 9, ಸಂಪಾದಕರು – ಶ್ರೀ ಮಹಾದೇಶ ಶಾಸ್ತ್ರಿ ಜೋಶಿ, ಭಾರತೀಯ ಸಂಸ್ಕೃತ ಕೋಶ ಮಂಡಳಿ, 410, ಶನಿವಾರ ಪೇಟ, ಪುಣೆ – 411 030, ಪ್ರಥಮ ಆವೃತ್ತಿ, 1976, ಪುಟ – 409
* ಶ್ರೀ ಸಂತ ಶುಭರಾಯ ಮಹಾರಾಜ, ವರ್ಣಚಿತ್ರಗಳು, ಚಿತ್ರ ಚಿರಂತನ – ಮಹಾರಾಷ್ಟ್ರ ರಾಜ್ಯ ಮಂಡಳಿ, ಸಾಹಿತ್ಯ ಮತ್ತು ಸಂಸ್ಕೃತಿ, ಮುಂಬಯಿ – 400 032, ಮೇ 1988, ಪುಟ – 11

6. ಹಿಸ್ಟರಿ ಆಫ್ ಟಿಪ್ಪುಸುಲ್ತಾನ್ – ಮೊಹಿಬ್ಬುಲ್ ಹಸನ್ ಖಾನ್ ಬಿ.ಎ. (ಲಂಡನ್) – ಬಿಬ್ ಲಿಯೊಫೈಲ್ ಲಿಮಿಟೆಡ್ 191, ಪಾರ್ಕ್ ಸ್ಟ್ರೀಟ್, ಕಲಕತ್ತಾ – 17, ಮಾರ್ಚ್ 1951, ಪುಟ ಸಂ. 261

7. ಶ್ರೀ ಶುಭರಾಯ ಮಹಾರಾಜ ಯಾಂಚೆ ಚರಿತ್ರ ಆಣಿ ಪದೆ – ಶ್ರೀ ವಿ.ನ ಜಕ್ಕಲ, ಸೊಲ್ಲಾಪುರ ಸಮಾಚಾರ, ಸೊಲ್ಲಾಪುರ ಶಕೆ 1853, ಶ್ರೀ ಶುಭರಾಯ ಮಹಾರಾಜಾಂಚೆ ಅಲ್ಪಚರಿತ್ರ, ಪುಟ – 2

* ಶುಭರಾಯ ಕಾ ಚಿತ್ರ ಸಂಪ್ರದಾಯ (ಲೇಖನ) – ಶ್ರೀ ಭೀಮಶಂಕರ ಪಾಟಣೆ, ಧರ್ಮಯುಗ, ಸಂಪಾದಕ – ಡಾ. ಧರ್ಮವೀರ ಭಾರತಿ, ಟೈಮ್ಸ್ ಆಫ್ ಇಂಡಿಯಾ ಪ್ರೆಸ್, ಮುಂಬಯಿ, 29ಮೇ, 1960, ಪುಟ – 35
* ಶ್ರೀ ಸಂತ ಕವಿ ಶುಭರಾಯ – ಲೇಖಕ, ಸಂಪಾದಕ, ಪ್ರಕಾಶಕ – ಕವಿ ಶ್ರೀ ಕುಂಜಬಿಹಾರಿ (ಪೂರ್ವೋಕ್ತ) ಗೀತಾ ಗುರುನಾಥ

ಪ್ರಕಾಶನ, ಓನಾಮಾ ಮಂದಿರ, ಸೋಲಾಪುರ, ಸನ್ 1963, ಪುಟ – 3–4

8. ರಸಿಕ ಕಲಾವಂತ ಸಂತ ಕವಿ ಶ್ರೀ ಶುಭರಾಯ (ಲೇಖನ) – ಶ್ರೀ ಪು.ಜನ. ಬುವಾ. (ಪೂರ್ವೋಕ್ತ), ಪುಟ – 2.

9. ಮಹಾರಾಷ್ಟ್ರ ಕವಿ ಚರಿತ್ರ – 2ನೆಯ ಭಾಗ – ಶ್ರೀ ಜಗನ್ನಾಥ ರಘುನಾಥ ಅಜಗಾಂವ್‌ಕರ್, ಪ್ರಕಾಶಕ – ದಾಮೋದರ ಸಾಂವಳಾರಾಮ ಮತ್ತು ಮಂಡಳಿ, 434, ಠಾಕುರ ದ್ವಾರ, ಮುಂಬಯಿ, ಸನ್ 1913, ಪುಟ – 98

10. ರಾಮಜೋಷಿಕೃತ ಲಾವಣ್ಯಾ – ಸಂಪಾದಕ – ಶ್ರೀ ಶಂಕರ ತುಕಾರಾಮ ತಾಳಿಗ್ರಾಮ, ಚಿತ್ರಶಾಲಾ ಪ್ರೆಸ್, ಪುಣೆ, ಮೂರನೇ ಆವೃತ್ತಿ, ಸನ್ 1908, ಪುಟ 86–87

11. ಮಹಾರಾಷ್ಟ್ರ ಸಾರಸ್ವತ–ಭಾಗ ಎರಡು–ಲೇಖಕ ಮತ್ತು ಪ್ರಕಾಶಕ – ಲಕ್ಷ್ಮಣ ವಿನಾಯಕ ಭಾವೆ, ಠಾಣೆ, ಮೂರನೆ ಆವೃತ್ತಿ, ಸನ್ 1928, ಪುಟ – 297

12. ಮರಾಠಿ ಕವಿತೇ ಚಾ ಉಷಃಕಾಲ ಕಿಂವಾ ಮರಾಠಿ ಶಾಹಿರ –ಲೇಖಕ ಮತ್ತು ಪ್ರಕಾಶಕ ಶ್ರೀ ಶ್ರೀಪಾದ ಮಹಾದೇವ ವರ್ದೆ, ಗರಗಾಂವ್, ಬ್ಯಾಂಕ್ ರಸ್ತೆ, ಮುಂಬಯಿ – 4, ದ್ವಿತೀಯ ಆವೃತ್ತಿ, ಸನ್ 1930, ಪುಟ 88–89

13. ಭಾರತ ವರ್ಷೀಯ ಮಧ್ಯಯುಗೀನ ಚರಿತ್ರಕೋಶ – ವಿದ್ಯಾವಾರಿಧಿ ಸಿದ್ಧೇಶ್ವರ ಶಾಸ್ತ್ರಿ ಚಿತ್ರಾವ, ಪ್ರಕಾಶಕ – ಭಾರತ ವರ್ಷೀಯ ಚರಿತ್ರಕೋಶ ಮಂಡಳ ಲಿಮಿಟೆಡ್, 58, ಶನಿವಾರ ಪೇಟ, ಪುಣೆ – 2, ಪ್ರಥಮ ಆವೃತ್ತಿ, 1937, ಪುಟ – 782.

* ಮೋರೋ ಪಂತ್ರ : ಚರಿತ್ರ ಆಣಿ ಕಾವ್ಯ ವಿವೇಚನ – ಶ್ರೀ ಲಕ್ಷ್ಮಣ ರಾಮಚಂದ್ರ ಪಾಂಗಾರಕರ, ಬಿ.ಎ. ಕರ್ನಾಟಕ ಪಬ್ಲಿಷಿಂಗ್ ಹೌಸ್, ಚೀರಾ ಬಜಾರ್, ಮುಂಬಯಿ – 2, ಎರಡನೆ ಆವೃತ್ತಿ, 1943, ಪಂತಾಂಚಿ ಮಿಶ್ರ ಮಂಡಳಿ – ಸುಬರಾವ್ ಬಾಬಾ, ಪುಟ – 126

* ಮರಾಠಿ ವಾಙ್ಮಯಾಂಚಾ ಇತಿಹಾಸ–ಮೂರನೆ ಖಂಡ, ಸಂಪಾದಕ: ಪ್ರೊ. ರಾ. ಶ್ರೀ ಜೋಗ್, ಮಹಾರಾಷ್ಟ್ರ ಸಾಹಿತ್ಯ ಪರಿಷತ್, ಟಿಳಕ ಪಥ, ಪುಣೆ, 1973, ಸ್ಫುಟ ಕಾವ್ಯ, ಪುಟ – 333

* ಅಜ್ಞಾನ ಸಂತ ಚಿತ್ರಕಾರ ಶುಭರಾಯ – ಚಿತ್ರಲೇಖನ. ಶ್ರೀ ಎಸ್.ಸಿ. ದೇಸಾಯಿ, ಉದಯವಾಣಿ (ಕನ್ನಡ ಪತ್ರಿಕೆ), ದೀಪಾವಳಿ ವಿಶೇಷಾಂಕ, 1984 (ಪೂರ್ವೋಕ್ತ), ಪುಟ – 27.

ಸಂತ ಶ್ರೀ ಶುಭರಾಯರ ವ್ಯಕ್ತಿತ್ವ, ಕಲಾಸಕ್ತಿ ಹಾಗೂ ಸೃಜನಶೀಲ ಚೈತನ್ಯಮಯಿ ಜೀವನ

ಆಚಾರ್ಯ ಜೋಶಿ ಸಿ.ಡಿ.

ಶ್ರೀ ಶುಭರಾಯ ಮಹಾರಾಜರ ಚಿತ್ರಕಲೆಗಳ ವಿಷಯ ಇಲ್ಲಿ ನಡೆಯುವ ಈ ಚರ್ಚಾಕೂಟ, ಅವರ ಜೀವನ ಹಾಗೂ ಸೃಜಶೀಲತೆಯ ಬಗೆಗೆ ಹೊಸ ವಿಷಯಗಳನ್ನು ತಿಳಿಯಲು ಹಾಗೂ ಹಳೆಯ ನೆನಪುಗಳನ್ನು ಹೊಸತು ಮಾಡಲು ಒಂದು ಒಳ್ಳೆಯ ಸಂದರ್ಭ ಹಾಗೂ ಸುಸಂಧಿ. ಶ್ರೀ ಶುಭರಾಯರು ನಮಗೆಲ್ಲಾ ಒಬ್ಬ ಮಾದರಿ ವ್ಯಕ್ತಿ, ಧ್ಯೇಯವಾದಿ ಹಾಗೂ ಪರಿಪೂರ್ಣತೆಯಿಂದ ತುಂಬಿದ ವ್ಯಕ್ತಿ. ನಾವು ಈ ವಿಚಾರ ಸಂಕಿರಣದ ಧ್ಯೇಯ, ಗುರಿ ಹಾಗೂ ಸಂದರ್ಭಗಳನ್ನು ಸ್ಪಷ್ಟಪಡಿಸೋಣ. ಆದಕ್ಕೋಸ್ಕರ ನಾವೊಂದು ವಿಶಾಲ ಹಾಗೂ ಪ್ರಗಾಢ ಸಂದರ್ಭವನ್ನು ತಯಾರು ಮಾಡಲು ಹಾಗೂ ಅದರಿಂದ ವಾಸ್ತವಿಕ ಪ್ರಯೋಜನಗಳನ್ನು ಇಲ್ಲಿ ಸೇರಿರುವ ಮಹಾಶಯರುಗಳ ಚಿಂತನೆಗಳಿಂದ ಪಡೆಯಲು ಉದ್ಯುಕ್ತರಾಗೋಣ. ಇದು ನನ್ನ ಭಾವನೆ.

ಶ್ರೀ ಶುಭರಾಯರ ಜೀವನಕಥೆಯು ಪ್ರಾಮುಖ್ಯವಾಗಿ ಒಂದು ನೈಜಕಥೆ. ಈ ಕಥೆಯು ನಮ್ಮ ಅಂತರಾಳದ ಭಾವ ಹಾಗೂ ಭಾವನೆಗಳನ್ನು ಮುಟ್ಟುತ್ತದೆ. ಈ ಕಥೆಯು ಯಾವ ಕ್ಷಣದಲ್ಲಿಯೂ ಪೂರ್ಣವಾಗಿದೆ ಎಂದೆನಿಸಿದರೂ ಇನ್ನು ಅದು ವಿಕಾಸವಾಗುತ್ತಾ ಇದೆ. ಶ್ರೀ ಶುಭರಾಯರು, ಒಬ್ಬ ಚಿತ್ರಕಾರ ಮಾತ್ರವಲ್ಲದೆ, ಅವರೊಬ್ಬ ಕವಿ, ಸಂಗೀತಗಾರ, ನೃತ್ಯಕಾರ, ಸಮಾಜ ಸುಧಾರಕ, ತತ್ವಜ್ಞಾನಿ, ಸಂತ ಹಾಗೂ ಒಬ್ಬ ಯೋಗಿ ಕೂಡಾ ಆಗಿದ್ದರು. ಅವರು ಈ ವಿವಿಧ ಭೂಮಿಕೆಗಳಲ್ಲಿ ಪಾತ್ರವಹಿಸಲು ಹೇಗೆ ಸಾಧ್ಯವಾಯಿತೆಂದರೆ ಅವರು ದ್ವೈತಾತೀತ ಪೂರ್ಣ ಚೇತನ ಸ್ವರೂಪವನ್ನು ಹೊಂದಿದ್ದರು ಹಾಗೂ ಏಕಾತ್ಮ ಚೇತನ ಸ್ವರೂಪದಲ್ಲಿ ಜೀವಿಸುತ್ತಿದ್ದರು. ಆದ್ದರಿಂದ ಅವರು, ಕಪ್ಪು–

ಬಿಳಿ, ಆಸ್ತಿಕ–ನಾಸ್ತಿಕ ಎಂಬೆಲ್ಲಾ ವಿಚಾರ ಸರಣಿಯಲ್ಲಿರಲಿಲ್ಲ ಹಾಗೂ ಅವುಗಳಿಗೆ ಪ್ರತಿಕ್ರಿಯೆಗಳನ್ನೂ ತೋರಿಸುತ್ತಿರಲಿಲ್ಲ. ಆದರೆ ನಾವು ಅದು–ಇದು, ಎಂಬೆಲ್ಲಾ ಭೇದ–ಭಾವನೆಗಳಿಗೆ ಅತೀ ತೀಕ್ಷ್ಣವಾಗಿ ಪ್ರತಿಕ್ರಿಯೆಗಳನ್ನು ನೀಡುತ್ತೇವೆ. ಕಲೆಯು ನಮಗೆ ಸಂಗೀತದ ಲಯದಿಂದ ಬೇರೆಯೆಂದು ತೋರುತ್ತದೆ. ಹಾಗೇನೇ ನೃತ್ಯವು ಕಲಿಕೆಯಿಂದ, ತತ್ವಜ್ಞಾನವು ಅನುಭವದಿಂದ ಬೇರೆಯೆಂದು ತೋರುತ್ತದೆ. ಈ ರೀತಿಯ ದ್ವಂದ್ವ ಹಾಗೂ ವಿರೋಧಾಭಾಸಗಳು, ಒಂದಕ್ಕೊಂದು ಪ್ರತಿಕ್ರಿಯೆಯನ್ನುಂಟುಮಾಡುತ್ತವೆ. ಆದರೆ ಪಶು ಮನಸ್ಸಿನ ಮಟ್ಟದಿಂದ ಬುದ್ಧಿಪ್ರಣೀತ ಮನಸ್ಸಿನ ಮಟ್ಟಕ್ಕೆ ಉಂಟಾದ ನವ್ಯದೃಷ್ಟಿಯ ಭೇದನವು ಏನನ್ನು ತಿಳಿಸುತ್ತದೆಂದರೆ ಇದಾಗಲೇ ಇನ್ನೊಂದು ಮಹತ್ವದ ನವ್ಯದೃಷ್ಟಿಯ ಭೇದನ ಉಂಟಾಗಿದೆ ಎಂದು ಅದೇ ಬುದ್ಧಿಪ್ರಣೀತ ಸ್ತರದಿಂದ, ಏಕಾತ್ಮಚೇತನಕ್ಕೆ ಈ ಚೇತನವು, ಪೃಥಕ್ಕರಣ, ಭೇದ, ವಿರೋಧಾಭಾಸ, ಧ್ರುವೀಕರಣಗಳ ಸ್ತರದಲ್ಲಿ ಕಾರ್ಯಗತವಾಗುವುದಿಲ್ಲ. ಅದು ಕಾರ್ಯಗತವಾಗುವುದು ಏಕೀಕರಣದಿಂದ ಹಾಗೂ ಸರ್ವಾತ್ಮಕ ಆಲಿಂಗನದಿಂದ.

ನವ ವಿಜ್ಞಾನವು ಈ ರೀತಿ ತೋರಿಸುವ ಹೊಸ ರೂಪಾವಳಿ ಅಥವಾ ಹೊಸ ರೂಪ ಸರಣಿಯು ಹಾಗೂ ವಾಸ್ತವಿಕತೆಯ ನವ್ಯ ದೃಶ್ಯವು ಏನನ್ನು ಸ್ಪಷ್ಟವಾಗಿ ತಿಳಿಸುತ್ತದೆಂದರೆ ಆಧುನಿಕ ವಿಜ್ಞಾನವೇ ರೂಪಾಂತರ ಹಾಗೂ ನೂತನೀಕರಣವನ್ನು ಹೊಂದುತ್ತಾ ಇದೆ ಎಂಬುದನ್ನು. ಡೇವಿಡ್ ಬೋಮ್, ಕಾರ್ಲ್ ಪ್ರೀಬ್ರಮ್, ಇಲಿಯಾ ಪ್ರಿಗೋಗಿನ್ ಹಾಗೂ ರೂಪರ್ಟ ರೇಡ್ರೇಕ್ ಇವರಂತಹ ವಿಜ್ಞಾನಿಗಳ "ಮಾನಸಿಕ ಸಮ್ಮೋಹಗಳನ್ನು ಉಂಟುಮಾಡುವ ಪ್ರವಾಸಗಳು" ಬ್ರಹ್ಮಾಂಡದ ವಿಷಯ ನಮಗಿರುವ ತಿಳುವಳಿಕೆಗಳನ್ನು ಹಾಗೂ ಮಾನವ ಮತ್ತು ಪ್ರಕೃತಿಯ ವಿಷಯ ನಮಗಿರುವ ವಿಚಾರಗಳನ್ನು ಕ್ರಾಂತಿಗೊಳಿಸುವ ಹೊಸ ಹಾಗೂ ಆಶ್ಚರ್ಯಕಾರಕ ಸಿದ್ಧಾಂತಗಳನ್ನು ನಮಗೀಯುತ್ತವೆ.

ಕಲಾಕ್ಷೇತ್ರದಲ್ಲಿಯೂ ಕೂಡಾ ಮೊಹಲಿ ನೇಗಿಯವರ "ಹೊಸದೃಷ್ಟಿ"ಯಿಂದ "ಚಲಿಸುತ್ತಿರುವ ಹೊಸ ದೃಷ್ಟಿ" ಹಾಗೂ "ದೃಷ್ಟಿ + ಮೂಲ್ಯ" ಎಂಬ ಜಾರ್ಜ್ ಕೆಪ್ಸೆ ಅವರ ದೃಷ್ಟಿಕೋನದ ಪ್ರಕಾರ ನಾವು "ವಾಸ್ತವಿಕತೆಯ ದೃಷ್ಟಿಯ ಗತಿಕ ಪರಿಮಾಣ"ದ ಕಡೆಗೆ ಮುಂದುವರಿಯುತ್ತಾ ಇದ್ದೇವೆ. ಕಲೆ ಬರೀ ಒಂದು ಹೊರಗಿನ ದೃಶ್ಯವಲ್ಲ. ಅದರ ಹಿಂದೆ ಅದಕ್ಕೊಂದು "ಪ್ರಾಥಮಿಕ ಮೂಲ್ಯಾತ್ಮಕ ಪರಿಮಾಣವು" ಅದಕ್ಕೆ ಆಧಾರ ಕೊಡುತ್ತದೆ. ಪೌಲ್ ಕ್ಲೇಯವರು ಮೂಲ್ಯಾತ್ಮಕ ಪರಿಮಾಣಕ್ಕೆ ಇನ್ನೂ ಸ್ವಲ್ಪ ಸೇರಿಸಿ ಹೇಳುತ್ತಾರೆ – "ಕಲೆಯೆಂದರೆ ಅದೃಶ್ಯವಾದುದನ್ನು ದೃಷ್ಟೀಕರಿಸುವುದು" ಎಂದು.

ನವ್ಯ ವಿಕಾಸೀಣ ಮರ್ಮದೃಷ್ಟಿ (ಅಂತರ್ದೃಷ್ಟಿ)ಗಳನ್ನು ಗ್ರಹಣ ಮಾಡಲು ಹಾಗೂ ಅದರ ಮೂಲ್ಯಾಂಕನ ಹಾಗೂ ಶೋಧನೆ ಮಾಡಲು ನಮಗೆ ಬಹುಸ್ತರೀಯ

ದೃಷ್ಟಿಕೋನಗಳು ಬೇಕಾಗುತ್ತವೆ. ಶ್ರೀ ಶುಭರಾಯರ ಮೂರ್ತರೂಪದ ಜೀವನವು ಬಹುಸ್ತರೀಯವಾದುದು. ಶಾರೀರಕವಾಗಿಯೂ, ಮಾನಸಿಕ, ಕಾಲ್ಪನಿಕ, ಪೌರಾಣಿಕ, ಆಧ್ಯಾತ್ಮಿಕ ಹಾಗೂ ವಿಕಸಿತ ಸ್ತರಗಳಲ್ಲಿ. ನಾವು ಬರೇ ಅಂತರ್ಸ್ತರೀಯ ದೃಷ್ಟಿಕೋನ ಹಾಗೂ ಕ್ರಮಗಳನ್ನು ಮಾತ್ರವಲ್ಲ, ಬಹುಸ್ತರೀಯ ದೃಷ್ಟಿಕೋನ ಹಾಗೂ ಕ್ರಮಗಳನ್ನೇ ಅನುಸರಿಸಬೇಕಾಗುತ್ತದೆ. ಬರೀ ಒಂದೇ ಒಂದು ಸಂಶೋಧನಾ ಕೂಟದಲ್ಲಿ ಇವನ್ನೆಲ್ಲಾ ತಿಳಿಯಲು ಸಾಧ್ಯವಾಗದ ವಿಷಯ. ಇದು ಸತತವಾಗಿಯೂ, ನಿರಂತರವಾಗಿಯೂ ನಡೆಯಬೇಕಾದ ಅನ್ವೇಷಣೆ ಕಾರ್ಯ. ಬರೇ ಸಂಕಲ್ಪನಾ (conceptual) ಸ್ತರದಲ್ಲಿ ಮಾತ್ರವಲ್ಲ, ಅಸ್ತಿತ್ವ (existential) ಹಾಗೂ ಅನುಭವದ (experientail) ಹಿನ್ನಲೆಯಲ್ಲಿ ಸಂವೇದನಾಶೀಲ ಅನುಭವದಲ್ಲಿ ನಾವು ಪೂರ್ಣತೆಯ ಅನುಭವದ ಹೊಸ ಸರಣಿಯನ್ನು ರಚಿಸಬೇಕು.

ಆಧುನಿಕ ಆಳದ ಮನಶಾಸ್ತ್ರವು ನಮಗೆ ಹೊಸ ಸಾಧನ ಹಾಗೂ ವಿಧಾನಗಳನ್ನು ಪ್ರಧಾನ ಮಾಡುತ್ತಿವೆ. ಯೂಂಗ್‌ರ ಮೂಲಾಕೃತಿಗಳ ಹಾಗೂ ಸಂಧಿ ಪ್ರಕಾಶಾತ್ಮಕ ಬಿಂಬಗಳು, ಸ್ವಪ್ನಗಳು, ಸಂಕೇತಗಳು ಮತ್ತು ವ್ಯಕ್ತೀಕರಣ ಕ್ರಿಯೆಗಳ ಮೂಲಕ ಅಬೋಧ ಮನವು ನಡೆಸುವ ಸೃಜನಶೀಲತೆಗಳು, ಶ್ರೀ ಶುಭರಾಯರ ವ್ಯಕ್ತಿತ್ವವನ್ನು ನಾವು ತಿಳಿಯಲು ಹಾಗೂ ಗ್ರಹಣ ಮಾಡಿಕೊಳ್ಳಲು ಸಾಧನಗಳಾಗಿವೆ. ಜೋಸೆಫ್ ಕೆಂಬಲ್‌ರವರು ಭಾರತೀಯ ಪೌರಾಣಿಕ ವಿಷಯಗಳ ಮೇಲೆ ಅವಿಸ್ಮರಣೀಯ ಲೇಖನಗಳನ್ನು ಬರೆದಿದ್ದಾರೆ ಹಾಗೂ ಡಿ. ಜೀನ್ ಹೂಸ್ಟನ್ ಅವರು ಪೌರಾಣಿಕ ಕಥೆಗಳ ವಿಧಾನವನ್ನು ತಮ್ಮ ಚರ್ಚಾಕೂಟ ಹಾಗೂ ಕರ್ಮಶಾಲೆಗಳಲ್ಲಿ ಪ್ರಯೋಗಿಸುತ್ತಿದ್ದಾರೆ. ಈ ಹೊಸ ವಿಧಾನಗಳೆಲ್ಲಾ, ಶ್ರೀ ಶುಭರಾಯರ ಜೀವನವನ್ನು ತಿಳಿದುಕೊಳ್ಳಲು ಸಂದರ್ಭಗಳಾಗಿವೆ. ಶ್ರೀ ಶುಭರಾಯರ ಸೃಜನಶೀಲ ಜೀವನವನ್ನು ನಮ್ಮಲ್ಲಿ ಅಂತರ್ಗತಿಸಲು ಡಾ. ಇರಾ ಪ್ರೊಗ್ರಾಫ್‌ರವರ "ಉತ್ಕರ್ಷ ಜ್ಞಾನಪತ್ರಿಕೆ" ಹಾಗೂ "ಪ್ರಕ್ರಿಯೆ ಧ್ಯಾನ"ಗಳ ಮೇಲೆ ವಿಕಾಸಗೊಳಿಸಿದ "ಜೀವನ–ಅಭ್ಯಾಸ" ಕಾರ್ಯಕ್ರಮಗಳು ಒಂದು ಅಂತರಾಳದ ಪ್ರತ್ಯಕ್ಷಾನುಭವ (First hand depth experience). ಜೀವನವೆಂದರೆ ಸಂಬಂಧಗಳು. ಎಲ್ಲಾ ಸಜೀವ ಸಂಬಂಧಗಳು ಸಂವಾದದ ಮೂಲಕ ಬೆಳೆಯುತ್ತವೆ ಹಾಗೂ ವಿಕಾಸಗೊಳ್ಳುತ್ತವೆ. "ಜೀವನ–ಅಭ್ಯಾಸ" ಕ್ರಮದಲ್ಲಿ ನಾವು ಮನುಷ್ಯನನ್ನು ಅವನು ಮಾಡುವ ಕಾರ್ಯ ಅವರ ಶರೀರ, ಸಮಾಜ, ಘಟನೆಗಳು, ಸಂಧಿ ಪ್ರಕಾಶಬಿಂಬ ಹಾಗೂ ಸ್ವಪ್ನಬಿಂಬ ಅಂತರ್ಜ್ಞಾನ (Inner wisdom) ಹಾಗೂ ಶಿಖರಬಿಂದು ಮತ್ತು ಗಾಢ ಅನುಭವಗಳು ಇವುಗಳ ಸಂಬಂಧಗಳಿಂದ ಅಧ್ಯಯನ ಮಾಡುತ್ತೇವೆ. ಆದ್ದರಿಂದ "ಜೀವನ ಅಭ್ಯಾಸ"ವೆಂದರೆ ಕಲಾವಿದರು, ಕವಿಗಳು, ವಿಚಾರವಂತರ ಹಾಗೂ ಆಧಾತ್ಮವಾದಿಗಳ ಸೃಜನಶೀಲ ಜೀವನಗಳನ್ನು ಅನುಭವಿಸುವುದು. ಡಾ. ಇರಾ ಪ್ರೊಗ್ರಾಫ್‌ರವರ ಅಂತರಾಳದ ಸೃಜನಶೀಲತೆ ಹಾಗೂ "ಪ್ರಕ್ರಿಯ ಧ್ಯಾನ" ವಿಧಾನಗಳು

ನೈಜವಾಗಿದ್ದು, ಸಕ್ರಿಯಾತ್ಮಕ ಹಾಗೂ ಕಾರ್ಯರೂಪಕ್ಕೆ ಬರುವಂತಾ ವಿಧಾನಗಳು. ಸಾಧು-ಸಂತರ ಆಶ್ರಮದಂತಹ ಸನ್ನಿವೇಶದಲ್ಲಿರುವ ಪಾದ್ರಿಗಳ ಪ್ರಶಿಕ್ಷಣಾ ಕೇಂದ್ರಗಳಲ್ಲಿ ಹಾಗೂ ವಿಕಾಸ ಕೇಂದ್ರಗಳಲ್ಲಿ ನಾನು ನೀಡುವ ಚರ್ಚಾಸತ್ರಗಳು ಮತ್ತು ಕರ್ಮಶಾಲೆಗಳಲ್ಲಿ ನಾನು ಇದನ್ನು ಸ್ವತಃ ಅನುಭವಿಸುತ್ತಿರುತ್ತೇನೆ.

ವಿಚಾರ ಸಂಕಿರಣದ ದೃಷ್ಟಿಕೋನ :

ಇವೆಲ್ಲಾ ಒಬ್ಬ ಸೃಜನಶೀಲ ವ್ಯಕ್ತಿಯನ್ನು ತಿಳಿಯಲು ಬೇಕಾದ ಹೊಸ ಕ್ರಮ ಹಾಗೂ ಸಾಧನಗಳು. ಈ ಎಲ್ಲಾ ಸಾಧನಗಳನ್ನು, ಶ್ರೀ ಶುಭರಾಯರ ಜೀವನ ಹಾಗೂ ಅವರ ಅನುವಂಶಿಕದಾನಗಳನ್ನು ತಿಳಿದುಕೊಳ್ಳಲು ಯಾಕೆ ಉಪಯೋಗಿಸಿಕೊಳ್ಳಬಾರದು? ಪಾಶ್ಚಿಮಾತ್ಯರು ಕಳೆದ 25/30 ವರ್ಷಗಳಲ್ಲಿ ಶೋಧಿಸಿದ ಈ ಹೊಸ ವಿಧಾನಗಳು ಹಾಗೂ ದೃಷ್ಟಿಕೊನಗಳನ್ನು ತಿರಸ್ಕರಿಸಿದರೆ ಹಾಗೂ ಅವುಗಳ ಕಡೆ ನಾವು ಗಮನವೀಯದಿದ್ದರೆ ನಮ್ಮ ಉದ್ದೇಶಗಳು ಹಾಗೂ ಪ್ರಯತ್ನಗಳು ಪ್ರಾಮಾಣಿಕವಾಗಿದ್ದರೂ ಆರು ಜನರು ದೃಷ್ಟಿಹೀನರು (ಅಂಧರು) ಒಂದು ಆನೆಯನ್ನು ನೋಡಿ – ಪ್ರತಿಯೊಬ್ಬನೂ ತಾನು ನಿಜವಾಗಿಯೂ ಅನುಭವಿಸುದುದನ್ನು ಹೇಳಿದ ಕಥೆಯಂತೆ – ಪ್ರತಿಯೊಬ್ಬನ ಅನುಭವವೂ ಅಂಶಿಕವಾಗಿ ಸತ್ಯವಾಗಿದ್ದರೂ ಪೂರ್ಣತಃ ಅಸತ್ಯ.

ನಾವು ಚರ್ಚಾಕೂಟಗಳಿಗೆ ಪ್ರಾಮುಖ್ಯತಃ ಯಥಾರ್ಥ ಸಂವಾದಕ್ಕೋಸ್ಕರ ಬರುತ್ತೇವೆ. ಹೊಸ ಹೊಸ ದೃಷ್ಟಿಕೋನ ಹಾಗೂ ಹೊಸಬಾಷ್ಯಗಳಿಗೆ ನಾವು ತಯಾರಿರುತ್ತೇವೆ. ಅದಲ್ಲದೆ, ಈ ಚರ್ಚಾಕೂಟದ ಸಂದರ್ಭ – ಶ್ರೀ ಶುಭರಾಯರು ಒಬ್ಬ ಸಂತ ಹಾಗೂ ಕಲಾವಿದ – ಈ ವಿಷಯವು ಕೇವಲ ಭೌತಿಕ ಹಾಗೂ ವಿಚಾರಾತ್ಮಕವಾಗಿರದೆ, ಬಹಳ ಗಹನವಾದದ್ದು. ಆಧ್ಯಾತ್ಮಿಕ ಮಾರ್ಗದಲ್ಲಿ ಮುಂದುವರಿಯಲು ಪ್ರಯತ್ನಿಸುವ ಪ್ರತಿವ್ಯಕ್ತಿಯೂ ಎದುರಾಗುವ ತೊಂದರೆಗಳು, ಪ್ರತಿರೋಧಗಳು, ಅನ್ವೇಷಣಗಳು ಹಾಗೂ ಸಮಕಾಲೀನ ಜೀವನ ಪರಿಸ್ಥಿತಿಗಳು – ಇವುಗಳ ಬಗ್ಗೆ ಪ್ರಶಾಂತವಾಗಿ ಚರ್ಚೆ ಹಾಗೂ ಅನ್ವೇಷಣೆಗಳು ನಡೆಯಬೇಕೆಂದು ನಮಗೆ ಜ್ಞಾತವಾಗಿವೆ. ನಾವು ವಿಶೇಷಜ್ಞರು, ಬರಹಗಾರರು, ಕಲಾವಿದರು, ಕಲಾ ವಿವೇಚಕರು ಅಥವಾ ಚರಿತ್ರಕಾರರು ದೊಡ್ಡ ವಿವೇಚಕ ನ್ಯಾಯವಾದಿಗಳಿರಬಹುದು. ಆದರೆ ನಾವು ನೋಡುವ ದೃಷ್ಟಿಕೋನ ಅಥವಾ ವಿಧಾನ ಶ್ರೀ ಶುಭರಾಯರ ಸೃಜನಾತ್ಮಕತೆಯ ಬಹುಸ್ತರೀಯತೆಯನ್ನು ತಿಳಿಯುವ ಬಗೆಗೆ ಅಂಧರನ್ನಾಗಿ ಮಾಡಬಾರದು. ಇದರ ವಿಷಯ ನಾವು ಜಾಗರೂಕರಾಗಿರಬೇಕು. ಚರ್ಚಾಕೂಟಗಳಲ್ಲಿ, ಪ್ರತಿಯೊಬ್ಬ ಸಹಭಾಗಿಯೂ ಏನಾದರೊಂದು ಮೌಲಿಕ ವಿಚಾರಧನವನ್ನು ತರುತ್ತಾನೆ. ನಾವು ಪ್ರತಿಯೊಬ್ಬರ ವಿಚಾರಗಳಿಗೂ ಗ್ರಹಣಶೀಲರಾಗಬೇಕು. ದುರದೃಷ್ಟವಶವಾಗಿ, ಹಲವು ಚರ್ಚಾಕೂಟಗಳಲ್ಲಿ ವಿಶೇಷಜ್ಞರೆಂದು ಎಣಿಸಿಕೊಳ್ಳುವವರು ತಮ್ಮ ಪ್ರಭಾವ ಬೀರಿ, ನ್ಯಾಯವಾದಿಗಳು ತೀರ್ಪನ್ನು ಕೊಡುವ

ಭಂಗಿಯಲ್ಲಿ ಮಾತನಾಡುತ್ತಾರೆ. ಇದರಿಂದ ಚರ್ಚಾಕೂಟ ಎಂಬ ಹೂವಿನ ಮೊಗ್ಗೆಯು ಅರುಳುವುದಿಲ್ಲ. ದೀನತೆ ಹಾಗೂ ಮಾನಸಿಕ ಮುಕ್ತತೆ, ಇವು ಚರ್ಚಾಕೂಟದಲ್ಲಿ ಸಂವಾದ ಹಾಗೂ ಪರಿವರ್ತನೆಗಳುಂಟಾಗಬೇಕಾದರೆ ಅತ್ಯಗತ್ಯ.

ಪಂಡಿತ್ ನೆಹರೂರವರು, ಪ್ರಸಿದ್ಧ ವ್ಯಂಗ್ಯ ಚಿತ್ರಕಾರ ಶಂಕರಪಿಳ್ಳೆಯವರನ್ನು ಬಹಳವಾಗಿ ಆದರದಿಂದ ನೋಡುತ್ತಿದ್ದರು. ಹಾಗೇನೇ ಶಂಕರಪಿಳ್ಳೆಯವರಿಗೆ ಕೂಡಾ ನೆಹರೂರವರ ಬಗ್ಗೆ ತುಂಬಾ ಆದರ. ತಮ್ಮ ಚಿತ್ರವನ್ನು ಬರೆಯುವಾಗ ಅತೀ ನೈಜತೆ ಯಿಂದ ಬರೆಯಲು ನೆಹರೂರವರು ಇಚ್ಛೆ ಪಡುತ್ತಿದ್ದರು. ಆದುದರಿಂದ ಶ್ರೀ ಶಂಕರರವ ರಿಗೆ "ನಾನು ಯಾವ ರೀತಿ ಇದ್ದೇನೆಯೋ ಅದೇ ರೀತಿಯಲ್ಲಿ ಪೈಂಟ್ ಮಾಡಿರಿ" ಎಂದು ನೆಹರೂರವರು ಹೇಳಿದ್ದರು. ಶ್ರೀ ಶುಭರಾಯರ ವಿಷಯದಲ್ಲಿ ಅವರು ಯಾವ ರೀತಿಯಲ್ಲಿದ್ದರೋ, ಅದೇ ರೀತಿಯಲ್ಲಿ ನಾವು ಪೈಂಟ್ ಮಾಡೋಣ – ಅದರಲ್ಲಿ ಅವರ ಮೌಲ್ಯಗಳ ಉತ್ಪ್ರೇಕ್ಷೆ ಅಥವಾ ಅಪಮೂಲ್ಯನ ಇರಬಾರದು. ಶ್ರೀ ಕೃಷ್ಣನ ಬೋಧಕತೆ (legend)ಯ ಮೇಲೆ ಅನೇಕ ಕಲಾವಿದರು ಬಹಳ ಕಾಲ ಕೆಲಸ ಮಾಡಿದ್ದಾರೆ. ಉದಾಹರಣೆಗಾಗಿ ಶ್ರೀಲಂಕಾದ ಕಲಾವಿದ ಹಾಗೂ ಕವಿಗಳಾದ ಜಾರ್ಜ್ ಕೈಟ್ ಅವರನ್ನು ತೆಗೆದುಕೊಳ್ಳೋಣ. ಅವರನ್ನು ಅಥವಾ ಅದೇ ರೀತಿಯ ಕೃತಿಗಳನ್ನು ಮೂಲ್ಯಾಂಕನ ಮಾಡುವಾಗ್ಗೆ, ನಾವು ಕಲಾವಿದರ ಹಾಗೂ ಸಾಹಿತ್ಯ ಕ್ಷೇತ್ರದ ಮಾಧ್ಯಮ ದಿಂದ ದೃಢವಾಗಿ ಮೂಲ್ಯಾಂಕಣ ಮಾಡೋಣ. ಆದರೆ ವಿಲಿಯಂ ಬ್ಲೇಕ್, ಖಲೀಲ್ ಗಿಬ್ರಾನ್ ಹಾಗೂ ಶ್ರೀ ಶುಭರಾಯರು ಕವಿಗಳು ಹಾಗೂ ಚಿತ್ರಕಾರರಾಗಿದ್ದರು. ಅವರನ್ನು ಪ್ರಥಮತಃ ಆಧ್ಯಾತ್ಮಿಕ ದೂರದೃಷ್ಟಿ ಉಳ್ಳವರು ಎಂದು ಮೂಲ್ಯಾಂಕನ ಮಾಡೋಣ ಹಾಗೂ ಅವರ ಕಲಾಕೃತಿಗಳು ಮತ್ತು ಕವಿತೆಗಳು ಈ ಆಧ್ಯಾತ್ಮಿಕ ಅನ್ವೇಷಣೆಗೆ ಪೂರಕವಾಗಲಿ.

ಆನಂದ ಹಾಗೂ ಲಯಬದ್ಧತೆ :

ನಾನು ಶ್ರೀ ಶುಭರಾಯರನ್ನು ಅನ್ವೇಷಣೆ ಮಾಡಿದ್ದು 1960ರ ಇಸವಿಯ ಅಂದಾಜಿಗೆ. ಶ್ರೀ ಶುಭರಾಯರ ಆಧ್ಯಾತ್ಮಿಕ ನಿಧಿಯನ್ನು ನನಗೆ ಮುಕ್ತರಾಗಿ ಮಾಡಿಕೊಟ್ಟವರು ಶ್ರೀ ನೋಶಿರ್ ನಗರ್‌ವಾಲಾ ಹಾಗೂ ಡಾ. ಮಿಸೆಸ್ ಬೌರಿಸ್ ಲೆಬೋರ್ನ್ ವಾಯಿಟ್ ಎಂಬುವರು. ಅವರೊಡನೆ ಶ್ರೀ ಶುಭರಾಯರ ಕಲಾಕೃತಿಗಳನ್ನು ನೋಡುತ್ತಾ, ಆನಂದ ಪಡುತ್ತಾ ಒಂದು ದಿನವಿಡೀ ಕಳೆದದ್ದು ನನಗೆ ಇನ್ನೂ ಚೆನ್ನಾಗಿ ನೆನಪಿದೆ. ಶ್ರೀ ಪಿ.ಜಿ. ಬುವಾರವರು ಬಹಳ ವಿನಯದಿಂದ ಹಾಗೂ ಶಾಂತ ರೀತಿಯಿಂದ ನಾವು ಕೇಳಿದ ಸವಾಲುಗಳಿಗೆ ಉತ್ತರವಿತ್ತು, ಮಾಹಿತಿಗಳನ್ನು ಒದಗಿಸುತ್ತಿದ್ದರು. ಅವರು ನಮಗೆ ಮಾಡಿದ ಮಾರ್ಗದರ್ಶನವು ನೊಬೆಲ್ ಪಾರಿತೋಷಕ ಹರ್ಮನ್ ಹೆಸ್ಸರ ಪುಸ್ತಕ "ಪೌರಾತ್ಯದ ಕಡೆಗೆ ಪ್ರವಾಸ"ದಲ್ಲಿ ಬರೆದ ಪ್ರವಾಸದಂತೆ ನಮಗೊಂದು "ಮಾರ್ಗ

ದರ್ಶಿತ ಪರ್ಯಟನ'' ಆಗಿತ್ತು. ಶ್ರೀ ಶುಭರಾಯರ ಮಠ ಹಾಗೂ ಅವರ ಕಲಾಕೃತಿಗಳು ನಮ್ಮನ್ನು ಮಹಾನ್ ಚಿತ್‌ಶಕ್ತಿಯ ಲೋಕಕ್ಕೆ ಪರಿವರ್ತಿಸಿದಂತಿತ್ತು ಹಾಗೂ ಅವರ ಸೃಜನಶೀಲತೆಯ ಶ್ರೇಷ್ಠತೆಯನ್ನು ಅನಾವರಣ ಮಾಡಿತ್ತು. ಸಾಯಂಕಾಲದ ಸಮಯ ನಾವು ಶ್ರೀ ಶುಭರಾಯ ಮಹಾರಾಜರ ವಿಶ್ವದ ಕುರಿತಾಗಿ ಚಿಂತಿಸುತ್ತಿರುವಾಗ ನನ್ನ ಮಿತ್ರ ನೋಸಿರ್‌ರವರು ತಮ್ಮ ದೃಶ್ಯವಿಚಾರವನ್ನು ಒಂದೇ ಒಂದು ಶಬ್ದದಲ್ಲಿ ತಿಳಿಸಿದರು. ಈ ಎಲ್ಲಾ ಕಲಾಕೃತಿಗಳು ಒಂದು ''ಬೃಹತ್ ಆನಂದ''ದಿಂದಾಗಿ ಹೊರಸೂಸಿದುವು ಎಂದು ಅವರ ಅಭಿಪ್ರಾಯ.

ಡಾ. ಮಿಸೆಸ್ ವಾಯಿಟ್‌ರವರು ಇದು ಬರೇ ''ಆನಂದ'' ಮಾತ್ರವಲ್ಲ ಒಂದು ''ಬೃಹತ್ ಲಯ'' ಕೂಡಾ ಎಂದು ಉದ್ಗರಿಸಿದರು. ಈ ಚಿತ್ರಗಳಲ್ಲಿ ಇವು ಕಂಪಿಸುತ್ತವೆ ಎಂದರು. ಇದರ ನಂತರ ''ಆನಂದ ಹಾಗೂ ಲಯ'' ಶಬ್ದಗಳು ನನ್ನ ಮನಸ್ಸಿನಲ್ಲಿ ಅಳಿಯದೆ ಉಳಿದುಕೊಂಡಿವೆ ಹಾಗೂ ಈ ಎರಡು ಶಬ್ದಗಳ ಪೂರ್ಣಾರ್ಥವನ್ನೂ ವೈಶಿಷ್ಟ್ಯತೆ ಮತ್ತು ಅನ್ವೇಷಣೆಯನ್ನು ಮಾಡಲಿಕ್ಕೋಸ್ಕರ ನಾನು ಈ ಚರ್ಚಾಕೂಟದಲ್ಲಿ ಭಾಗವಹಿಸಲು ನಿಶ್ಚಯಿಸಿದೆ. ನನ್ನ ಈ ಇಬ್ಬರೂ ಸ್ನೇಹಿತರೂ ಶೋಲಾಪುರದಲ್ಲಿಲ್ಲ. ಆದರೂ ಅವರು ಈ ದಿನವೂ ಇಲ್ಲಿ ಹಾಜರದ್ದಾರೆಂದು ನನಗೆ ಆನಿಸುತ್ತದೆ. ಅವರ ಆನಂದ ಹಾಗೂ ಲಯ ಈ ಎರಡು ಶಬ್ದಗಳು ನನಗೆ ಅಂತರಿಕ ಜ್ಞಾನ ಹಾಗೂ ಮಾರ್ಗದರ್ಶಿಯಾಗಿವೆ. ಶ್ರೀ ನೊಶಿರರು ಒಬ್ಬ ಬ್ಯಾಂಕ್ ಮ್ಯಾನೇಜರರಾಗಿದ್ದರು. ಆದರೆ ಹೃದಯದಿಂದ ಅವರೊಬ್ಬ ಕವಿ. ಅವರ ಹೆಚ್ಚಿನ ಕವಿತೆಗಳು ''ವೇ ಸೈಡ್ ಜರ್ನಲ್'' ಎಂಬ ಅಮೆರಿಕಾದ ಪತ್ರಿಕೆಯಲ್ಲಿ ಪ್ರಕಟಣೆಗೊಂಡಿವೆ. ಡಾ. ಲೇಬೋರ್ನ್ ವಾಯಿಟ್‌ರವರು ಯೂಂಗ್ ಮನೋಶಾಸ್ತ್ರಜ್ಞರು, ಒಬ್ಬ ಆಧ್ಯಾತ್ಮ ಮಾರ್ಗಿಗಳು ಹಾಗೂ ಅತೀವ ಸಂವೇದನಾಶೀಲರಾದವರಾಗಿದ್ದರು. ಈ ಇಬ್ಬರು ಸ್ನೇಹಿತರಿಂದಾಗಿ ನಾನು ಶ್ರೀ ಶುಭರಾಯರ ಆಧ್ಯಾತ್ಮಿಕತೆ ಹಾಗೂ ಸೃಜನಶೀಲತೆಗಳ ಕುರಿತಾಗಿ ಅಧ್ಯಯನ, ಅನ್ವೇಷಣೆ ಹಾಗೂ ಪ್ರತ್ಯಾನ್ವೇಷಣೆಯನ್ನು ಮಾಡಬೇಕಾದ ಉತ್ತರದಾಯಿತ್ವ ಬಂದಿದೆ. ಬರೇ ವೈಯಕ್ತಿಕ ದೃಷ್ಟಿಕೋನದಿಂದ ಮಾತ್ರವಲ್ಲದೆ, ಶ್ರೀ ಶುಭರಾಯರ ಸೃಜನಶೀಲತೆಯನ್ನು ಅನುಭವಿಸುವುದಕ್ಕೋಸ್ಕರ, ಇನ್ನೂ ಹೆಚ್ಚಿನ ಆಗಾಧ ಹಾಗೂ ವಿಶಾಲದೃಷ್ಟಿಕೋನ, ಒಂದು ವಿಶ್ವವ್ಯಾಪಿ ಸಂದರ್ಭವನ್ನು ರಚಿಸಬೇಕೆಂದು ನಾನು ಇಚ್ಛೆ ಪಡುತ್ತೇನೆ.

'ಸಮಸ್ವರ' ಹಾಗೂ 'ಊರ್ಧ್ವ'ದ ಸ್ವಯಂ ಸಂತುಲಿತ ಜೀವನ

ಶ್ರೀ ಶುಭರಾಯ ಮಹಾರಾಜರು ಯಾರು? ನಾವೀಗ ಶಾಸನದ 'ರಾಜಪತ್ರಿಕೆ'ಯಲ್ಲಿ ನೋಂದು ಮಾಡಿದ ಮಾಹಿತಿಯ ಕಡೆಗೆ ವಸ್ತುನಿಷ್ಠತೆಯಿಂದ ಗಮನಿಸುವ. ಗ್ಯಾಜಿಟಿಯರ್‌ನಲ್ಲಿ ಹೀಗೆ ನೋಂದು ಮಾಡಿರುತ್ತಾರೆ. ಶ್ರೀ ಶುಭರಾಯ ಮಹಾರಾಜ (1750–1820)ರು ಹಿಂದಕ್ಕೆ ಟಿಪ್ಪು ಸುಲ್ತಾನನ ಹಿಂದೂ ಮಂತ್ರಿಯಾಗಿ

ದ್ದರು ಹಾಗೂ ಮುಂದಕ್ಕೆ ಲೌಕಿಕವನ್ನು ತ್ಯಜಿಸಿ ಧಾರ್ಮಿಕ ಸ್ತವನಗಳನ್ನು ರಚಿಸಿದರು. ಸೋಲಾಪುರಕ್ಕೆ ಸೇರಿದವರು.

"**ಶ್ರೀ ಶುಭರಾಯ ಮಠ :** ಶ್ರೀ ಶುಭರಾಯರು ಪೇಶ್ವೆಯರ ಅಂತ್ಯ ದಿವಸಗಳಲ್ಲಿ ಸಂತಕವಿಯಾಗಿ ಶೋಭಿಸಿದರು. ಅವರು ವೇದಪಾರಂಗತರಾಗಿದ್ದರು. ಮೈಸೂರು ರಾಜ್ಯದ ಮಾಲೂರು ಎಂಬ ಊರಲ್ಲಿ ಹುಟ್ಟಿ, ಬಹು ಬೇಗನೆ ಟಿಪ್ಪುಸುಲ್ತಾನರ ಆಸ್ಥಾನದಲ್ಲಿ ಉಪ ದಿವಾನರಾಗಿದ್ದರು. ಆದರೆ ನಂತರ ಇಸ್ಲಾಂಗೆ ಬಲಾತ್ಕಾರವಾಗಿ ಮತಾಂತರಗೊಳ್ಳುವುದನ್ನು ತಪ್ಪಿಸಿಕೊಳ್ಳಲು ಅವರು ಮೈಸೂರು ರಾಜ್ಯವನ್ನು ಬಿಟ್ಟು, ಸೋಲಾಪುರದ ಕಡೆ ನಡೆದರು. ಅವರಿಗೆ ತೆಲುಗು ಭಾಷೆಯು ಚೆನ್ನಾಗಿ ಬರುತ್ತಿತ್ತು. ಅದು ಅವರ ಮಾತೃಭಾಷೆಯಾಗಿತ್ತು. ಕನ್ನಡವು ಅವರು ಹುಟ್ಟಿಬೆಳೆದ ರಾಜ್ಯದ ಭಾಷೆಯಾಗಿತ್ತು. ಉರ್ದು ಹಾಗೂ ಮರಾಠಿ ಭಾಷೆಗಳು, ಟಿಪ್ಪುಸುಲ್ತಾನನ ಹಾಗೂ ಪೇಶ್ವೆಯರ ದರ್ಬಾರಿನ ಭಾಷೆಗಳಾಗಿದ್ದುವು. ಅವರು ರಚಿಸಿದ ಹಾಗೂ ಒಟ್ಟುಮಾಡಿದ ಅಭಂಗಗಳು ಅವರಿಗೆ ಮಹಾರಾಷ್ಟ್ರದ ಓರ್ವ ಸಂತಕವಿಯೆಂಬ ಸ್ಥಾನವನ್ನು ಕೊಟ್ಟಿದೆ. ಸಂತಕವಿ ಮಾತ್ರವಲ್ಲದೆ, ಅವರು ಸಂಗೀತ, ನೃತ್ಯ ಹಾಗೂ ಚಿತ್ರಕಲೆ ಮುಂತಾದ ಲಲಿತ ಕಲೆಗಳಲ್ಲಿಯೂ ನೈಪುಣ್ಯವನ್ನು ಪಡೆದಿದ್ದರು. ಅವರ "ಜುನ್ನಾರಿ ಪೇಪರ್" ಎಂಬ ಕಾಗದದ ಮೇಲಿನ ಸ್ಟೆನ್ಸಿಲ್ ಕಟ್ಟಿಂಗ್ ಅತ್ಯುತ್ತಮವಾದುದೆಂದು ತಿಳಿದುಬಂದಿದೆ.

ಸೋಲಾಪುರದಲ್ಲಿ ಬಂದು ನೆಲೆಸಿದ ನಂತರ ಅವರು ರಾಜಕೀಯದಲ್ಲಿ ಧುಮುಕಲಿಲ್ಲ. ಅವರಿಗೆ ಧಾರ್ಮಿಕ ಕ್ಷೇತ್ರದಲ್ಲಿ ರುಚಿ ಇತ್ತು ಹಾಗೂ ಲೌಕಿಕದಿಂದ ದೂರವಾಗಿದ್ದರು. ಅವರು ವಿಠೋಬನ ಒಂದು ವಿಗ್ರಹವನ್ನು ಸ್ಥಾಪಿಸಿದರು ಹಾಗೂ ಅದರ ಭಕ್ತರಾಗಿದ್ದರು. ಪ್ರತಿವರ್ಷ ಅಷಾಢ ಹಾಗೂ ಕಾರ್ತೀಕಮಾಸಗಳ ಶುದ್ಧ 11ರಂದು ರಥಯಾತ್ರೆಯನ್ನು ತೆಗೆಯುತ್ತಾರೆ. ಉತ್ಸವಕ್ಕೆ ಬಹಳ ಜನರು ಸೇರುತ್ತಾರೆ. ಶ್ರೀ ಶುಭರಾಯರು ಶಕ 1742ರ ಭಾದ್ರಪದ ವದ್ಯ (ಕೃಷ್ಣಪಕ್ಷ) 10ರಂದು ಸಮಾಧಿಗೈದರು."

ಇವಿಷ್ಟು ವಸ್ತುನಿಷ್ಠತೆಯಿಂದ ಶುಭರಾಯರ ಕುರಿತು ಬರೆಯಲ್ಪಟ್ಟ ಅಭಿಲೇಖಗಳು. ಇವನ್ನು ನಾನು "ಸಮಸ್ತರ" ಮಾಹಿತಿ (horizontal) ಎಂದು ಕರೆಯುತ್ತೇನೆ. ಆದರೆ ಈ ವ್ಯಕ್ತಿಯ ವಿಷಯ ಇನ್ನೂ ಹೆಚ್ಚು ಕೂಲಂಕಷವಾಗಿ ತಿಳಿಯಲು ಇಚ್ಛೆ ಪಡುತ್ತೇವೆ. ಅವರೊಬ್ಬ ಮಾನವರಾಗಿ ಹೇಗೆ ಬದುಕಿದರು? ಅವರು ಯಾವ ತೊಂದರೆಗಳಿಗೆ ಈಡಾದರು? ಹಾಗೂ ಅವರಿಗೆ ಇಷ್ಟಪಟ್ಟುದನ್ನು ಯಾವ ರೀತಿಯಿಂದ ಅವರು ಕಂಡುಕೊಂಡರು? ಇವುಗಳು ಊರ್ಧ್ವ ಮಾಹಿತಿಗಳು (vertical). ಹೆಚ್ಚಾಗಿ ಈ ಮಾಹಿತಿಗಳು ನಮಗೆ ಸಿಕ್ಕುವುದಿಲ್ಲ. ಎಲ್ಲಿಯೂ ಸರಿಯಾಗಿ ಬರೆದಿರುವುದಿಲ್ಲ ಹಾಗೂ ಹೇಳುವವರಿಲ್ಲ. ಆದರೆ ನಾವೇ ಈ ಆಳದ ವ್ಯಾಪ್ತಿ (depth dimenson)ಗಳ

ಅನ್ವೇಷಣೆ ನಡೆಸೋಣ. ಈ ಊರ್ಧ್ವ ಮಾಹಿತಿಗಳ ಕುರಿತಾಗಿ ಪದೇ ಪದೇ ಸವಾಲು ಹಾಕೋಣ. ಶ್ರೀ ಶುಭರಾಯ ಮಹಾರಾಜರು ಯಾರಾಗಿದ್ದರು? ಆಶ್ಚರ್ಯದ ಸಂಗತಿ ಎಂದರೆ ಅವರಲ್ಲಿ ನಾವು ಇಬ್ಬರು ವ್ಯಕ್ತಿಗಳನ್ನು – ಒಬ್ಬರು ಸುಬ್ಬಾರಾವು ಹಾಗೂ ಇನ್ನೊಬ್ಬರು ಶುಭರಾಯರು. ಸುಬ್ಬರಾಯರು ಮೈಸೂರಿನ ಮಾಲೂರಿನಲ್ಲಿ 1750ರಲ್ಲಿ ಹುಟ್ಟಿದರು. 1780ರವರೆಗೆ ಮೈಸೂರಿನಲ್ಲಿ ಬೆಳೆದು ವಾಸಿಸಿದರು ಹಾಗೂ ಶುಭರಾಯರು 1780ರಿಂದ 1820ರವರೆಗೆ ಸೋಲಾಪುರದಲ್ಲಿ ವಾಸಿಸಿದರು. ಸಾಧಾರಣ ಆದರೂ ಬುದ್ಧಿವಂತ ಹಾಗೂ ಯಶಸ್ಸು ಗಳಿಸಿದ ಒಬ್ಬ ವ್ಯಕ್ತಿ ಹೇಗೆ ಒಬ್ಬ ಸಂತ, ಒಬ್ಬ ಕವಿ, ಒಬ್ಬ ಕಲಾವಿದ ಆಗಿ ಪರಿವರ್ತನೆಗೊಂಡು, ಆಕಸ್ಮಾತ್ತಾಗಿ ಜಗತ್ತಿನ ಆಡಂಬರ ಹಾಗೂ ಯಶಸ್ಸನ್ನು ದೂರಗೈದು ತಮ್ಮ ಕ್ರಿಯಾತ್ಮಕ ಜೀವನವನ್ನು ಯಾಕೆ ತ್ಯಜಿಸಿದರು? ಇವರು ಯಾವ ರೀತಿಯ ರೂಪಾಂತರಣಗೊಂಡರು? ಇವರಲ್ಲಿ ಯಾವ ರೀತಿಯ ಬದಲಾವಣೆಯ ಕಾರ್ಯವು ನಡೆಯಿತು? ಸುಬ್ಬರಾಯರು ಸಂತ ಶುಭರಾಯರು ಹೇಗಾದರು? ಇವುಗಳು ನಮ್ಮ ಮುಂದಿರುವ ಮುಖ್ಯ ಪ್ರಶ್ನೆಗಳು.

ಮೂಸುವರಂಬುದಾಗಿ ಪೇದಸಗಳು

ಮೊದಲಿನ 30 ವರ್ಷಗಳಲ್ಲಿ ಸುಬ್ಬರಾಯರು, ಭೌತಿಕವಾಗಿ ಒಬ್ಬ ಅದ್ಭುತ ವ್ಯಕ್ತಿಯಾಗಿದ್ದರು. ಅವರೊಬ್ಬ ಬುದ್ಧಿವಂತ, ಪ್ರತಿಭಾಶಾಲಿ ಹಾಗೂ ಜ್ಞಾನಿಯಾಗಿ ಟಿಪ್ಪುಸುಲ್ತಾನನ ಗೌರವ ಹಾಗೂ ವಿಶ್ವಾಸ ಪಾತ್ರರಾಗಿ, ಉಪ ದಿವಾನ ಪದವಿಯನ್ನು ತಮ್ಮ 30ನೇ ವರುಷದ ಮೊದಲೇ ಪ್ರಾಪ್ತ ಗಳಿಸಿದ್ದರು. ಅವರು ಹಲವು ಭಾಷಾ ಪಾರಂಗತರಾಗಿದ್ದರು ಹಾಗೂ ಹಲವು ಪ್ರಾದೇಶಿಕ ಸಂಸ್ಕೃತಿಗಳಿಂದ ಪ್ರಭಾವಿತರಾಗಿ ದ್ದರು. ಅವರ ಜೀವನವು ಯಶಸ್ವಿಯಾಗಿಯೂ, ಧನ–ಸಂಪತ್ತುಗಳಿಂದ ತುಂಬಿಯೂ ಇದ್ದಿತು.

ಆದರೆ ಸನ್ನಿವೇಶಗಳು ಬದಲಾಗಲು ಶುರುವಾದುವು. ಹಟಾತ್ತಾಗಿ ಮೈಸೂರು ಪ್ರಾಂತ್ಯದಲ್ಲಿ ಅತ್ಯಂತ ಹೀನಾಯಮಾನದ ಪರಿಸ್ಥಿತಿಯ ಅರಿವು ಅವರಿಗುಂಟಾಯಿತು. ಚಂದ್ರನ ಹಿಂದಿನ ಬದಿ, ಕಪ್ಪಾದ ಬದಿ, ಅವರಿಗೆ ವಿವಿಧ ವಸ್ತು ಹಾಗೂ ಸನ್ನಿವೇಶಗಳಿಂದಾಗಿ ಕಾಣಿಸಲ್ಪಟ್ಟಿತು. ಹೊರಗೆ ತೋರುವ ಸ್ಥಿತಿಗಳು ನೈಜ ಸ್ಥಿತಿಗಳಲ್ಲ ವೆಂಬುದು ಅವರಿಗೆ ಭಾಸವಾಯಿತು. ಮೈಸೂರಿನ ಮಹಾರಾಜ ಹಾಗೂ ಬ್ರಿಟಿಷ್ ಮತ್ತು ಫ್ರೆಂಚ್‌ರು, ಟಿಪ್ಪುಸುಲ್ತಾನ, ಹೈದರ್ ಅಲಿ ಇವರುಗಳು ಚದುರಂಗದ ಆಟ ಗಾರರಾಗಿದ್ದರು. ಇವರೆಲ್ಲಾ ಬಹಳ ಕಪಟಿಗಳಾಗಿದ್ದು ಅದಕ್ಕನುಗುಣವಾಗಿ ಪಗಡೆಗಳ ಚಲನೆ, ಪ್ರತಿಚಲನೆಗಳನ್ನು ಯೋಜಿಸುತ್ತಿದ್ದರು. ಸಾಮಾನ್ಯ ಮನುಷ್ಯರು ಮಾತ್ರವಲ್ಲ, ಸುಬ್ಬರಾಯರ ಅದೃಷ್ಟವೂ ಪಗಡೆಯಾಟದ ಪ್ಯಾದೆಗಳಂತಿದ್ದು – ನಿರಾಶಾಜನಕ, ದುರದೃಷ್ಟಕರ ಹಾಗೂ ಸಹಾಯವಿಹೀನವಾಗಿತ್ತು. ಇವೆಲ್ಲಾ ಅವರನ್ನು ದುಃಖಿಯಾಗಿ

ಮಾಡಿದ್ದುವು. ಹೊರಗಿನ ವಾತಾವರಣದಲ್ಲಿ ನಡೆಯುವಂಥಾ ಎಲ್ಲಾ ಪರಿಸ್ಥಿತಿಗಳು, ಆಂತರಿಕವಾಗಿ ಕ್ಷಣಿಕವಾಗಿಯೂ ಅರ್ಥವಿಹೀನವಾಗಿಯೂ, ಸಂಕೇತರಹಿತವಾಗಿಯೂ ಇದ್ದುವು. ಬಾಹ್ಯ ಹಾಗೂ ಆಂತರಿಕವಾಗಿ ಅವರಿಗೆ ಆಧಾರ ಕೊಡುವ ಶಕ್ತಿ ಇರಲಿಲ್ಲ. ಅವರನ್ನು ತಮ್ಮ ಮನೆಗೆ ಹಾಗೂ ಮೈಸೂರಿನ ಹೊರ ವಾತಾವರಣಕ್ಕೆ ಬಂಧಿಸುವಂತಹ ಗಾಢವಾದ ಹಾಗೂ ವೈಯಕ್ತಿಕ ಸಂಬಂಧಗಳಿರಲಿಲ್ಲ. ಸುಬ್ಬರಾಯರು ಜೀವನದ ಅಸ್ತಿತ್ವದಲ್ಲಿ ಗಾಢವಾದ ಶೂನ್ಯತೆಯನ್ನು ಅನುಭವಿಸುತ್ತಿದ್ದರು. ಅದರಲ್ಲಿ ಟೊಳ್ಳು ತನವಿತ್ತು. ಅವರಿಗೆ ಮೌಲಿಕ ಪರಿವರ್ತನೆಯ ಅಗತ್ಯವಿತ್ತು. ಅವರು ಜೀವನದ ಅಂತಃಕ್ಷಣಕ್ಕೆ ಬಂದು ಮುಟ್ಟದಂತೆ ಇದ್ದರು. ಆದರೆ ಬಲಾತ್ಕಾರದಿಂದ ಇಸ್ಲಾಂಗೆ ಮತಾಂತರದ ಹೆದರಿಕೆ ಇದ್ದುದರಿಂದಲ್ಲ, ಅವರೊಳಗಿನ ಅಂತರಾತ್ಮವು ಅವರ ಜೀವನವು ಒಂದು ಹಂತಕ್ಕೆ ಬಂದ ಕಾರಣ, ಇನ್ನೊಂದಕ್ಕೆ ಮುಂದೂಡುತಿತ್ತು. ಆ ಊರನ್ನು ಬಿಟ್ಟು ಮೈಸೂರನ್ನೇ ಬಿಟ್ಟು, ತಮ್ಮೂರು, ತಮ್ಮ ಜನ ಇವುಗಳನ್ನೆಲ್ಲಾ ಬಿಟ್ಟು ಹೋಗಬೇಕೆಂದು ಅವರಿಗೆ ತೀವ್ರ ಇಚ್ಛೆಯಾಗಿತ್ತು. ಹಿಂದಿನದೆಲ್ಲವನ್ನೂ ಪೂರ್ಣ ತೊರೆದುಕೊಳ್ಳಬೇಕೆಂದೆನಿಸುತ್ತಿತ್ತು. ಯಾರೊಡನೆಯೂ ರಾಗ, ದ್ವೇಷಗಳಿದ್ದಿರಲಿಲ್ಲ. ಯಾರ ಕುರಿತೂ ದೂರುಗಳಿದ್ದಿಲ್ಲ. ಯಾವ ರೀತಿಯ ಪ್ರತಿಗಾಮಿ ವಿಚಾರವೂ ಇರಲಿಲ್ಲ. ಸುಬ್ಬರಾಯರ ಒಂದು ಜೀವನ ಮುಗಿಯಿತು, ಅಂತ್ಯವಾಯಿತು. ಅಂತೂ ಅದು ಯಶಸ್ಸಿನಲ್ಲಿ ಕೊನೆಗೊಂಡಿತು.

ಹುಳು (ಸುರವಂಟಿ) ಚಿಟ್ಟೆಯಾಗಿ ಪರಿವರ್ತನೆಗೊಂಡಿತು :

ಮೈಸೂರಿನಿಂದ ಸುಬ್ಬರಾಯರು ಹೊರಟುಹೋದದ್ದು ಒಂದು ಅಂತ್ಯ. ಅವರ ಒಂದು ಜೀವನದ ನೈಜ ಅಂತ್ಯ ಕಾಲ. ಇದೇ ಅಂತ್ಯವು ಇನ್ನೊಂದು ಹೊಸ ಜೀವನದ ಆರಂಭಕ್ಕೆ ನಾಂದಿ. ಈ ಹೊಸ ಜೀವನವು ಭೂತಕಾಲ ಜೀವನಕ್ಕಿಂತ ಪೂರ್ಣತಃ ಬೇರೆ ತರಹದ್ದು. ಮೈಸೂರಿನಲ್ಲಿ ಸುಬ್ಬರಾಯರಿಗೆ ಬೇಕಾದ್ದೆಲ್ಲಾ ಇದ್ದುವು. ಸೋಲಾಪುರದಲ್ಲಿ ಅವರೊಡನೆ ಏನೂ ಇರಲಿಲ್ಲ ಹಾಗೂ ಅವರಿಗೆ ಏನೂ ಬೇಕಾಗಿರಲಿಲ್ಲ. ಮೈಸೂರಿನಲ್ಲಿ ಸುಬ್ಬರಾಯರು ಪ್ರಸಿದ್ಧ ವ್ಯಕ್ತಿಯಾಗಿದ್ದರು. ಆದರೆ ಸೋಲಾಪುರದಲ್ಲಿ ಏನೂ ಆಗಿರಲಿಲ್ಲ, ಅವರೊಬ್ಬ ಅಜ್ಞಾತ ವ್ಯಕ್ತಿಯಾಗಿದ್ದರು. ಮೈಸೂರಲ್ಲಿ ಅವರ ಸುತ್ತಮುತ್ತ ಜನರು ಹಾಗೂ ಹಿತಚಿಂತಕರಿದ್ದರು. ಆದರೆ ಸೋಲಾಪುರದಲ್ಲಿ ಅವರೊಬ್ಬರೇ. ಅವರು ಸ್ವಚಿಂತನದಲ್ಲಿ ಮಗ್ನರಾಗಿದ್ದರು. ಮೈಸೂರಿನಲ್ಲಿದ್ದ ಅವರ ಕ್ರಿಯಾತ್ಮಕ ಜೀವನವು ಸಮಾಪ್ತವಾಯಿತು ಹಾಗೂ ಸೋಲಾಪುರದಲ್ಲಿ ಅವರ ಅಧ್ಯಾತ್ಮ ಜೀವನವು ಪ್ರಾರಂಭವಾಯ್ತು. ಈ ಜೀವನವು ಏಕಾತ್ಮಿಕ ಜೀವನ. ಅದರಲ್ಲಿ ಭಕ್ತಿ ಮತ್ತು ಸರಳತೆ ತುಂಬಿತ್ತು ಹಾಗೂ ಬಹಳ ಗಹನ ಮತ್ತು ಪ್ರಾಮುಖ್ಯವಾಗಿತ್ತು.

ಆದರೆ ಸೋಲಾಪುರದಲ್ಲಿಯೂ ಹೊರಗಣ ವಾತಾವರಣವು, ಸನ್ನಿವೇಶಗಳು,

ರಾಜಕೀಯವು ಮೈಸೂರಿನಂತೇ ಇದ್ದುವು. ಸೋಲಾಪುರದ ಮೇಲೆ ಬಿಜಾಪುರದ ಸುಲ್ತಾನರ ಅಥವಾ ಅಹ್ಮದ್‌ನಗರದ ರಾಜರ ಅಧಿಕಾರವಿದ್ದು, ಅದು ಯಾರಿಗೂ ಬೇಡದ ಊರಾಗಿತ್ತು. ನಿಜಾಮ, ಬೀದರ್ ಹಾಗೂ ಮರಾಠಾ ಅಧಿಪತಿಗಳು ಸೋಲಾ ಪುರವನ್ನು ತಮ್ಮ ಕಾಲಡಿಯ ಚಾಪೆಯ ತುಂಡಿನಂತೆ ಉಪಯೋಗಿಸುತ್ತಿದ್ದರು. ಇದಲ್ಲದೆ ಸೋಲಾಪುರವು ತೀವ್ರ ಕ್ಷಾಮ ಪ್ರದೇಶಕ್ಕೆ ಸೇರಿದ ಪ್ರದೇಶವಾಗಿತ್ತು. ಶುಭರಾಯರು 1780ರಿಂದ 1820ರವರೆಗೆ ಸೋಲಾಪುರದಲ್ಲಿ ಜೀವನ ನಡೆಸಿದರು. ಪೇಶ್ವೆಯವರ ಒಳ್ಳೆ ಚಾರಿತ್ರಿಕ ಹಾಗೂ ಅವರ ಶಕ್ತಿಯುತ ದಿವಸಗಳು ಮುಗಿದಿದ್ದುವು. ಬಾಜಿರಾವ್ ಎರಡನೆಯವನು ಪೇಶ್ವೆಗಳಲ್ಲಿ ಕಡೆಯ ಅಧಿಪತಿ. ಅವನೊಬ್ಬ ನಿರುಪಯುಕ್ತ, ಸ್ವಾರ್ಥಿ ಹಾಗೂ ಕಪಟ ಮನುಷ್ಯ. ಜನರು ಅವನ ಆಧಿಪತ್ಯದಲ್ಲಿ ಹೇಳಲು ಸಾಧ್ಯವಿಲ್ಲದಷ್ಟು ತೊಂದರೆ ಹಾಗೂ ಕಷ್ಟಪಟ್ಟರು. ಕೊನೆಯ ಮರಾಠಾ ಯುದ್ಧದಲ್ಲಿ ಸೋಲಾಪುರದ ಕೋಟೆ ಹಾಗೂ ನಗರವು ಜನರಲ್ ಮನ್ರೋ ಅವರ ಕೈಗೆ 14ನೇ ಮೇ 1818ಕ್ಕೆ ನಾಲ್ಕು ದಿನಗಳ ಜಪ್ತಿ ನಂತರ ಕೈವಶವಾಯಿತು. ಹೊರಮಟ್ಟಿಗೆ, ಶುಭರಾಯರು ಅವರ ಜೀವನದ ದೊಡ್ಡ ಅಕ್ರಮ, ಗೊಂದಲ ಹಾಗೂ ಅನಿಶ್ಚಿತತೆಯನ್ನು ಅನುಭವಿಸುತ್ತಿದ್ದರು. ಬಹಳ ಮಟ್ಟಿಗೆ ಅದನ್ನು ಅವರು ಅನುಭವಿಸುತ್ತಿದ್ದುದು ಸೋಲಾಪುರದಲ್ಲೇ. ಸೋಲಾಪುರದ ಪುರಜನರೂ ರೂಢಿವಂತರೂ ಹಾಗೂ ಪಾರಂಪರಿಕ ಬ್ರಾಹ್ಮಣರು ಅವರನ್ನು ಒಪ್ಪಿಕೊಳ್ಳಲಿಲ್ಲ. ಅವರಿಗೆ ಶುಭರಾಯರೊಬ್ಬ ಹೊರಗಿನ, ದಕ್ಷಿಣ ಭಾರತದ ತುಂಬಾ ಗಡುಸಿನ ಅಚೂಕ ಪ್ರಾಮಾಣಿಕ ವ್ಯಕ್ತಿ. ಕುರಿಗಳಂತೆ ಹೇಳಿದ್ದಕ್ಕೆಲ್ಲಾ ಒಪ್ಪುವ ಮನುಷ್ಯ ಅವರಾಗಿದ್ದಿರಲಿಲ್ಲ. ಸಂದರ್ಭ ಬಂದಾಗ ಬಿಚ್ಚು ಮನಸ್ಸಿನಿಂದ ಮಾತನಾಡುತ್ತಿದ್ದರು. ಇದರಿಂದ ಸುರಕ್ಷಾ ಮನೋವೃತ್ತಿಯವರಿಗೆ ಗಲಿಬಿಲಿಯಾಯಿತು. ಶುಭರಾಯರಿಗೆ ಯಾರಿಂದಲೂ ಏನೂ ಬೇಕಿದ್ದಿಲ್ಲ. ಆದ್ದರಿಂದ ಗಾಢ ಧ್ಯಾನದ ಹಾಗೂ ಭಕ್ತಿಯ ಪರಾಕಾಷ್ಠತೆಯಲ್ಲಿ ಏಕಾಂತವಾಗಿದ್ದುಕೊಂಡಿರುತ್ತಾ ಯಾರೂ ತೊಂದರೆ ಕೊಡುವವರು ಬೇಕಿದ್ದಿಲ್ಲ. ಬಾಹ್ಯ ಜೀವನವು ಅವರಿಗೆ ಅಂಧಮಯವಾಗಿದ್ದರೂ ಅವರ ಆಂತರಿಕ ಜೀವನವು ಶಾಂತಿ, ಸಂತೋಷ ಸುಖ ಮತ್ತು ಆನಂದದಿಂದ ತುಂಬಿತ್ತು ಹಾಗೂ ಸ್ಪಷ್ಟವಾಗಿತ್ತು. ಬಾಹ್ಯ ಕ್ಲೇಶಗಳನ್ನು ಆಂತರಿಕ ಕ್ರಮಬದ್ಧತೆಯಿಂದ ಅವರು ಸಮತೋಲಿಸುತ್ತಿದ್ದರು. ಬಾಹ್ಯ ಅರ್ಥಶೂನ್ಯ ಜೀವನವನ್ನು ಆಂತರಿಕ ಗಹನ ಶಕ್ತಿಯಿಂದ ಬಾಹ್ಯ ಮಾರಕ ಜೀವಿಗಳನ್ನು ಆಂತರಿಕ ಸೃಜನಶೀಲ ಶಕ್ತಿಯ ಅರಳಿಕೆಯಿಂದ. ಅವರೊಂದು ಅವಿನಾಶಿ ನಿಧಿಯನ್ನು ಹುಡುಕಿದ್ದರು ಹಾಗೂ ಕವಿತೆಗಳು, ಹಾಡುಗಳು, ಸಂಗೀತ, ನೃತ್ಯ, ಭಜನೆಗಳು, ಕೀರ್ತನೆಗಳು ಮತ್ತು ಅವರ ಚಿತ್ರಗಳ ಮೂಲಕ ಜನ ಸಾಮಾನ್ಯರಿಗೆ ಅದನ್ನು ಕೊಡಲು ಬಯಸಿದ್ದರು. ಶುಭರಾಯ ಮಠದಲ್ಲಿ, ಉಚ್ಚಕೋಟಿಯ ಹಾಡುಗಾರರು, ಸಂಗೀತಗಾರರು ಹಾಗೂ ನಟರು ಇವರಿಗೆ ಸನ್ಮಾನದ ಜಾಗವಿತ್ತೆಂದೂ ಅವರಿಗಲ್ಲಿ ಸ್ವಾಗತವಿತ್ತೆಂದೂ ತಿಳಿದುಬರುತ್ತದೆ. ಈ ರೀತಿಯ ಸತ್ಸಂಗಗಳು ಬಹಳ

ಜನರನ್ನು ಆಕರ್ಷಿಸುತ್ತಿದ್ದುವು. ಆ ಸಂಗೀತ ಹಾಗೂ ನೃತ್ಯಗಳನ್ನು ಆ ಕಾಲದಲ್ಲಿ ಮುದ್ರೀಕರಣ ಮಾಡುವ ಸಾಧನಗಳಿಲ್ಲದ ಕಾರಣ ಅವುಗಳಲ್ಲಿನ ಲಯಗಳು, ವಿಸ್ಪಂದನಗಳು, ಸ್ವರಮೇಳಗಳೂ ಹಾಗೂ ಅವು ಆ ಸಮಯದಲ್ಲಿ ಸೂಸಿದ ಆನಂದಗಳೂ, ಎಂದೆಂದಿಗೂ ಇಲ್ಲವಾಗಿ ನಾಶಗೊಂಡಿವೆ. ಏನು ಉಳಿದಿದೆಯೋ ಅದು ಅವರ ಹಲವು ಕಲಾಕೃತಿಗಳು ಹಾಗೂ ಪದಗಳು. ನಾವು ಈಗ ನೋಡುವ ಅವರ ಕಲಾಕೃತಿಗಳು ದರ್ಪಣದಲ್ಲಿ ಕಾಣುವ ಪ್ರತಿಬಿಂಬಗಳಂತೆ. ಅವುಗಳಲ್ಲಿ ಒಂದು ಕಿಡಿ ಇದೆ ಹಾಗೂ ಅವರ ಕೈಸ್ಪರ್ಶವಿದೆ. ಆದರೆ ಸಮಗ್ರ ಪೂರ್ಣ ಶುಭರಾಯರು ಈ ಎಲ್ಲಾ ಬಿಡಿ ಭಾಗಗಳಿಂದ ದೊಡ್ಡದಾಗಿದ್ದರು. ಅವರ ಸಮಗ್ರ ಸೃಜನಶೀಲ ಕೃತಿಗಳು ಹಾಗೂ ಅವರ ಹಾಡುಗಳಲ್ಲಿದ್ದ, ಅಭಿವ್ಯಕ್ತಿಗಳಿಂದ ಎಷ್ಟೋ ಮಿಗಿಲಾಗಿದ್ದರು. ಒಂದು ಪೂರ್ಣ ಭಾವದಿಂದ ನೋಡಿದರೆ ಶ್ರೀ ಶುಭರಾಯ ಮಹಾರಾಜರ ಜೀವನವು ಪೂರ್ಣ ಪ್ರೌಢ್ಯತೆ ಹಾಗೂ ಗಗನಚುಂಬಿ ಶಿಖರವನ್ನು ಸೋಲಾಪುರದಲ್ಲಿ ಸೃಜನಶೀಲತೆ ಹಾಗೂ ಆಧ್ಯಾತ್ಮಿಕತೆಯ ಮಾಧ್ಯಮದಿಂದ ಕಂಡಿತು. ಮೈಸೂರಿನಲ್ಲಿ ಭೌತಿಕ ವಿಷಯ (ಸ್ತರ)ದಲ್ಲಿ ಸಾರ್ಥಕತೆ, ಯಶಸ್ಸು ಹಾಗೂ ಪೂರ್ಣತೆಯನ್ನು ಪಡೆದಂತೆ, ಸೋಲಾಪುರ ದಲ್ಲಿ ಆಧ್ಯಾತ್ಮಿಕ ಹಾಗೂ ಸೃಜನ ಕ್ಷೇತ್ರದಲ್ಲಿ ಸಾರ್ಥಕತೆ, ಯಶಸ್ಸು ಹಾಗೂ ಪೂರ್ಣತೆಯನ್ನು ಪಡೆದಿತ್ತು. ಪ್ರಕೃತಿಯಲ್ಲಿ ಕತ್ತಲೆಯ ನಂತರ ದಿವಸವೂ, ದಿವಸದ ನಂತರ ಕತ್ತಲೆಯು ಬರುವುದು ಕಾಲಚಕ್ರದ ಒಂದು ವಿಧಿ. ಇದೊಂದು ಪ್ರಕೃತಿಯ ಪ್ರತಿ ರೂಪವೇ ಸರಿ. ಇದೇ ಪ್ರಕಾರ ಶ್ರೀ ಶುಭರಾಯರಂತಹ ಮಹಾನ್ ಆತ್ಮಗಳಿಗೆ ಮೈಸೂರಿನ ಭೌತಿಕ ಜೀವನ ಹಾಗೂ ಸೋಲಾಪುರದ ಅಂತರಿಕ ಜೀವನ – ಇವು ಒಂದಕ್ಕೊಂದು ವಿರೋಧಾಭಾಸವಲ್ಲ. ಒಂದಿನ್ನೊಂದು ಸಮತೋಲಿಸುತ್ತದೆ. ಚೀನೀಯರ ಟಾವುನಲ್ಲಿಯ ಇನ್ ಹಾಗೂ ಯಾಂಗ್ ಇದ್ದಂತೆ.

ಮಾನವ ಜೀವನದ ವೇದನೆ ಹಾಗೂ ಜೀವನಸ್ತೋತ್ರದಲ್ಲಿಯ ಆನಂದ ಪರಾ ಕಾಷ್ಠತೆಯು ಒಂದಿನ್ನೊಂದನ್ನು ಸಮತೋಲಿಸುತ್ತದೆ. ಇದರಿಂದಾಗಿ ಮಹತ್ತಾದ ಒಂದು ಆನಂದ, ಲಯ ಹಾಗೂ ಸೃಜನಶೀಲ ಶಕ್ತಿಯು ಹೊರಸೂಸುತ್ತದೆ.

ಶ್ರೀ ಶುಭರಾಯರ ಕಲಾಕೃತಿಗಳು

ಸ್ವರ್ಗಗಳ ಲಯ :

ಶ್ರೀ ಶುಭರಾಯರ ಕಲಾಕೃತಿಗಳ ಬಗೆಗೆ ನನ್ನ ರಸಗ್ರಹಣ (apprciation) ಹಾಗೂ ಟಿಪ್ಪಣಿ (comments)ಗಳು, ವಾಙ್ಮಯ ಆಗೂ ಸಂಸ್ಕೃತಿಯ ಮೇಲೆ ಮಹಾರಾಷ್ಟ್ರ ರಾಜ್ಯ ಸರಕಾರದವರು ಪ್ರಕಟಿಸಿದ "ಚಿತ್ರ ಚಿರಂತನ"ವೆಂಬ ಪ್ರಕಟಣೆಯ ಆಧಾರದ ಮೇಲೆ ಸೋಲಾಪುರದಲ್ಲಿರುವ ಶ್ರೀ ಶುಭರಾಯರ ಆರ್ಟ್ ಗ್ಯಾಲರಿಯಲ್ಲಿರುವ ಉಳಿದ ಚಿತ್ರಗಳನ್ನು ನೋಡಿ, ಅವುಗಳ ಅಧ್ಯಯನ ಮಾಡಬೇಕೆಂದು ನನಗೆ

ಅನಿಸುತ್ತದೆ. ಕೃತಿಗಳ ವಿಮರ್ಶಾತ್ಮಕ ಅಧ್ಯಯನವನ್ನು ಮಾಡಬೇಕಾದರೆ ಬಹಳ ಚಾರಿತ್ರಿಕ ಮಾಹಿತಿಗಳೂ, ಇತರರು ನಡೆಸಿದ ಸಮಕಾಲೀನ ಅಧ್ಯಯನಗಳು ಬೇಕಾಗುತ್ತವೆ. ಮೈಸೂರಿನ ಕಲಾಚರಿತ್ರಕಾರರೂ, ಕಲಾವಿಶೇಷಜ್ಞರೂ ಹಾಗೂ ವಿಮರ್ಶಕರೂ ಇಂತಹ ಒಂದು ಪ್ರಕಲ್ಪದ ಬಗೆಗೆ ಆಧಾರ ಕೊಡುವ ಮಾಹಿತಿಗಳನ್ನು ನೀಡಲು ಬಲು ಸಮರ್ಥರಿರುತ್ತಾರೆ. ನನ್ನ ಟಿಪ್ಪಣಿಗಳು, ನನ್ನ ವೈಯಕ್ತಿಕ ಸೌಂದರ್ಯಶಾಸ್ತ್ರದ ಮೇಲಣ ಗ್ರಹಿಕೆಗಳು ಹಾಗೂ ನನ್ನದೇ ಆದ ನಿರ್ಣಯಗಳ ಮೇಲೆ. ಈ ಚಿತ್ರಗಳು ಯಾರ ಮೇಲೆಯೇ ಆಗಲಿ, ನೇರವಾಗಿ ತಮ್ಮ ಪ್ರಭಾವವನ್ನು ಬೀರುತ್ತವೆ ಹಾಗೂ ಸಹಸ್ರಾರು ಜನರು ಈ ಕಲಾಕೃತಿಗಳಿಂದ ಅತ್ಯಾನಂದವನ್ನು ಪಡೆದಿದ್ದಾರೆಂದು ತಿಳಿದುಬಂದಿದೆ. ಒಬ್ಬ • ನಿಜವಾದ ಕಲೋಪಾಸಕನಿಗೆ ನಮ್ಮ ಪ್ರಾಚೀನ ಸೌಂದರ್ಯಶಾಸ್ತ್ರಗಳಲ್ಲಿ ಬರೆದಂತೆ ಒಬ್ಬ ಕಲಾವಿಮರ್ಶಕ ಅಥವಾ ಒಬ್ಬ ಚರಿತ್ರಕಾರನ ಮಾಧ್ಯಮವು, ಅವುಗಳಿಂದ ಸಂತೋಷ ಪಡೆಯಲು ಆಗತ್ಯವಿರುವುದಿಲ್ಲ. ವೈಯಕ್ತಿಕವಾಗಿ ಹಲವು ವಿಶಿಷ್ಟ ಕೃತಿಗಳು ನನ್ನ ಮನಸ್ಸಿನ ಮೇಲೆ, ಅತೀವ ಪ್ರಭಾವವನ್ನು ಬೀರಿವೆ ಹಾಗೂ ಅವುಗಳಲ್ಲಿ ಆಳದ ಮೂಲಬಂಧಸ್ತರದಲ್ಲಿ ಜಾಗೃತಗೊಳಿಸುವ (stir) ಶಕ್ತಿ ಇದೆ. ಉದಾಹರಣೆಗೆ ಶ್ರೀಕೃಷ್ಣನು ಕೊಳಲನ್ನು ಬಾರಿಸುವಾಗ ಗೋವುಗಳು ಮಂತ್ರಮುಗ್ಧವಾಗಿ ಕೇಳುವುದು; ಯಶೋಧೆ ಹಾಗೂ ಕೃಷ್ಣರು ಬೆಣ್ಣೆಯನ್ನು ರಮಿಸುವುದು; ಕೃಷ್ಣನು ರಕ್ಕಸಿ ಪೂತನಿಯನ್ನು ಕೊಲ್ಲುವುದು; ಕೃಷ್ಣನು ಕೊಳಲನ್ನು ಬಾರಿಸುವುದು ಹಾಗೂ ನಗ್ನ ಗೋಪಿಯರು ಕದಂಬ ವೃಕ್ಷವನ್ನೇರುವುದು; ಭಗವಾನ್ ವಿಷ್ಣುವು ಶೇಷಶಾಯಿಯಾಗಿ ಒರಗಿಕೊಂಡದ್ದು; ಗೋಪಿಯರು ನೃತ್ಯ ಮಾಡುವ ರಾಸ–ಲೀಲೆ ಚಿತ್ರಗಳು ಹಾಗೂ ರಾಧಾ–ಕೃಷ್ಣರ ಶೃಂಗಾರಮಯ ಚಿತ್ರಗಳ ಒಂದು ಮಾಲೆ. ಈ ಚಿತ್ರಗಳು ಬಹಳ ಸರಳವಾಗಿವೆ ಹಾಗೂ ಮುಕ್ತ ರೇಖಾಚಿತ್ರಗಳಿದ್ದು, ಅವುಗಳಲ್ಲಿ ಅತ್ಯಲ್ಪ ಪ್ರಮಾಣದಲ್ಲಿ ಪ್ರಾಥಮಿಕ ಬಣ್ಣಗಳನ್ನು ಬಳಸಿದ್ದು, ಅವುಗಳಲ್ಲಿ ಅತೀ ಪ್ರಭಾವಶಾಲಿ ಹಾಗೂ ಅತ್ಯುಚ್ಚ ಮನೋಭಾವನೆಗಳನ್ನು ಜಾಗೃತಗೊಳಿಸುವ ಉದಾತ್ತ ಮಾಂತ್ರಿಕ ಶಕ್ತಿ ಇದೆ. ಇದೊಂದು ಜಾನಪದ ಕಲೆ; ಸ್ವಚ್ಛ ಹಾಗೂ ನೇರವಾಗಿದ್ದು ಕಲಾಶಾಸ್ತ್ರದ ತಂತ್ರಗಳಿಂದ ಮತ್ತು ಅನಗತ್ಯವಾದ 'ದಾರ್ಶನಿಕ ಕಸ'ದಿಂದ ಮುಕ್ತವಾಗಿವೆ. ಜೆಮಿನಿರಾಯರವರ ಕೃತಿಗಳಂತೆ ಶ್ರೀ ಶುಭರಾಯರ ಕೃತಿಗಳೂ ಬಹುಸರಳ, ಪ್ರಗಾಢ ಹಾಗೂ ಉದಾತ್ತವಾಗಿವೆ. ಶುಭರಾಯರ ನಿವಡಿಸಲ್ಪಟ್ಟ ಹಲವು ಚಿತ್ರಗಳನ್ನು ಬೃಹತೀಕರಿಸಿದರೆ ಅವು ದರ್ಶಕರನ್ನು ಮುಗ್ಧ ಮಾಡಬಹುದೆಂದು ನನ್ನ ಭಾವನೆ. ಭಕ್ತಿ–ಭಾವ ಹಾಗೂ ರಸವನ್ನು ಹೊರಸೂಸುವ ಇದು ಒಂದು ಶ್ರೇಷ್ಠ ಸ್ತರದ ಧಾರ್ಮಿಕ ಹಾಗೂ ಆಧ್ಯಾತ್ಮಿಕ ಕಲೆ. ಇದರಲ್ಲಿ ನರ್ತಿಸುವ ಗೋಪಿಯರು, ಸ್ವರ್ಗದಲ್ಲಿಯ ಲಯಕ್ಕೆ ಬದ್ಧರಾಗಿದ್ದಾರೆ. ಅದೇ ರೀತಿ ಪರಮಾತ್ಮನಲ್ಲಿಯೂ ತಮ್ಮ ಪ್ರತ್ಯೇಕತೆಯನ್ನು ಮರೆತು ಐಕ್ಯಗೊಂಡಿದ್ದಾರೆ. ಇದೊಂದು ಕಾಲಾತೀತ ಕ್ಷಣ. ಈ ಕ್ಷಣದಲ್ಲಿ ಭಗವತ್ ಶಕ್ತಿಯು, ಆತ್ಮಚೈತನ್ಯದಲ್ಲಿ

ನೃತ್ಯ ಮಾಡುತ್ತದೆ. ಇದು ಒಂದು ನದಿಯು ಸಾಗರವನ್ನು ಸೇರುವ ಹಾಗೂ "ಪರಮಾನಂದದ ರಾಜ್ಯ''ದಲ್ಲಿರುವ ಸ್ಥಿತಿಯನ್ನು ನಮಗೆ ಸೂಚಿಸುತ್ತದೆ. ಇಂತಹ ಸಾಮರ್ಥ್ಯವು ಶ್ರೀ ಶುಭರಾಯರ ಕೃತಿಗಳಲ್ಲಿ ಅಡಗಿದೆ.

ಚಿತ್ರ ಚಿರಂತನ ಸಂಗ್ರಹಿಕಾ

ಮಹಾರಾಷ್ಟ್ರ ಸರಕಾರವು ಈ ಸಂಗ್ರಹಿಕೆಯನ್ನು ಪ್ರಕಟಿಸಿ, ಪ್ರಜೆಗಳಿಗೆ ನೈಜ ಸೇವೆಯನ್ನು ಮಾಡಿದೆ. ಒಬ್ಬ ಸಾಧಾರಣ ವ್ಯಕ್ತಿಯೂ ಕೂಡಾ ಇದನ್ನು ಖರೀದಿಸಿ ಮೂಲ ಕೃತಿಗಳ ರಸವನ್ನು ಹೀರಬಹುದಾಗಿದೆ. ಈ ಕೆಳಗೆ ನಮೂದಿಸಿರುವ ಸಂಗ್ರಹಿಕೆಯ ವಿಷಯ ಹಲವು ವಾಸ್ತವಿಕ ವಿಶ್ಲೇಷಣೆಗಳು, ಶ್ರೀ ಶುಭರಾಯರ ಚಿತ್ರಗಳನ್ನು ತಿಳಿದು ಕೊಳ್ಳಲು ಸಹಾಯ ಮಾಡುತ್ತವೆ.

1. ಇಲ್ಲಿ ಶ್ರೀ ಶುಭರಾಯರ 75 ಕಲಾಕೃತಿಗಳನ್ನು ಆಯ್ಕೆ ಮಾಡಲಾಗಿದೆ.
2. 75 ಕಲಾಕೃತಿಗಳಲ್ಲಿ 60 ಕೃಷ್ಣನ ಪೌರಾಣಿಕ ಕಥೆಯ ಮೇಲೆ, 7 ದಶಾವತಾರದ ಮೇಲೆ, 6 ರಾಮಾಯಣ ಹಾಗೂ 2 ಭಗವಾನ್ ವಿಷ್ಣುವಿನ ಮೇಲೆ ಇವೆ.
3. ಕೃಷ್ಣನ ಪೌರಾಣಿಕ ಕಥೆಗಳು ಬೃಹತ್ತಾಗಿವೆ. ಇವುಗಳಲ್ಲಿ ಬಹಳಷ್ಟು ಸನ್ನಿವೇಶಗಳೂ, ವ್ಯಕ್ತಿಗಳೂ ತುಂಬಿದ್ದಾರೆ. ಶ್ರೀಕೃಷ್ಣನು ತನ್ನ ಜೀವನದಲ್ಲಿ ಬಹಳಷ್ಟು ಭೂಮಿಕೆಗಳನ್ನು ವಹಿಸಿದ್ದನು ಹಾಗೂ ಅವನ ಜೀವನದ ಪ್ರತಿಹಂತವೂ ಒಂದು ವಿಶೇಷ ಕಾರ್ಯ ಹಾಗೂ ಧ್ಯೇಯಕ್ಕೋಸ್ಕರ ಮಾಗಿಸಲ್ಪಟ್ಟಿದೆ. ಶ್ರೀ ಶುಭರಾಯರು ಭಗವಾನ್ ಶ್ರೀಕೃಷ್ಣನ ಜೀವನದ ಎರಡು ಹಂತಗಳನ್ನು ಮಾತ್ರ ಇಲ್ಲಿ ನಿರೂಪಿಸಿದ್ದಾರೆ. ಅವೆಂದರೆ – ಕೃಷ್ಣಲೀಲೆಯಲ್ಲಿ ತೋರುವ ಕೃಷ್ಣನ ಬಾಲ್ಯಾವಸ್ಥೆ ಹಾಗೂ ಶ್ರೀಕೃಷ್ಣ–ರಾಧಾ–ಗೋಪಿಯರ ದೈವೀ ಪ್ರೇಮಬಂಧನ ಮತ್ತು ರಾಸಲೀಲಾ ನೃತ್ಯಗಳು. ಸಂಗ್ರಹಿಕಾದಲ್ಲಿ 40 ಚಿತ್ರಗಳು ರಾಧಾ–ಗೋಪಿ, ರಾಸ ಲೀಲಾ – ಇವುಗಳ ಮೇಲೆ ಹಾಗೂ 20 ಚಿತ್ರಗಳು ಕೃಷ್ಣಲೀಲೆಯ ಮೇಲೂ ಇವೆ. ರಾಧಾ–ಕೃಷ್ಣರ ವಿಷಯದಲ್ಲಿ ಶ್ರೀ ಶುಭರಾಯರ ಶ್ರೇಷ್ಠತೆ ಕಂಡುಬರುತ್ತದೆ.
4. ಮನುಷ್ಯನ ಆಕೃತಿ ಹಾಗೂ ಮುಖಗಳನ್ನು ಚಿತ್ರೀಕರಿಸುವಾಗ, ಕಲಾವಿದ ಶುಭರಾಯರು, ಪಾರ್ಶ್ವ ಚಿತ್ರ (profile)ಗಳ ಮೂಲಕ ಬರೆದಿದ್ದಾರೆ. ಮುಖವನ್ನು ಪಾರ್ಶ್ವದಿಂದ ಕಾಣುವಂತೆ ವಿಶ್ಲೇಷಣೆ ಮಾಡಿ ನೋಡುವಾಗ ಒಟ್ಟು ಬರೆದ 257 ಚಿತ್ರಗಳಲ್ಲಿ 6ರಲ್ಲಿ ಮಾತ್ರ ಮುಖದ ಭಂಗಿಯು ಮುಂದಿನಿಂದ ಇವೆ. ಉಳಿದ 251 ಚಿತ್ರಗಳು ಪಾರ್ಶ್ವ ಚಿತ್ರಗಳು.

5. 40 ಚಿತ್ರಗಳು ಸಮಸ್ತರ ವಿನ್ಯಾಸ (horizontal) ಹಾಗೂ 34 ಚಿತ್ರಗಳು ಊರ್ಧ್ವ (vertical) ವಿನ್ಯಾಸದಲ್ಲಿವೆ.
6. 74 ಕಲಾಕೃತಿಗಳಲ್ಲಿ 22ರಲ್ಲಿ ಹಿನ್ನೆಲೆಯನ್ನು ಕೂಡಾ ಶ್ರೇಷ್ಠ ಬಣ್ಣ ಹಾಗೂ ಆಕೃತಿಗಳಿಂದ ಚಿತ್ರಣ ಮಾಡಲಾಗಿದೆ.
7. ಕಲಾವಿದ ಶುಭರಾಯರು ಗೋವುಗಳನ್ನು ಚಿತ್ರಿಸುವುದರಲ್ಲಿ ನಿಪುಣರು. ಕೃಷ್ಣನ ಕೊಳಲಿನ ಶಬ್ದದಿಂದ ಮುಗ್ಧರಾದ ಗೋವುಗಳು 8 ಚಿತ್ರಗಳಲ್ಲಿವೆ.
8. ಹೆಚ್ಚಿನ ಚಿತ್ರಗಳಲ್ಲಿ ಹಿನ್ನೆಲೆಯು ಖಾಲಿಯಾಗಿಲ್ಲ. ಅದರಲ್ಲಿ ಹೂಗಳ ಆಕೃತಿಗಳು ಹಾಗೂ ವಾಸ್ತುಕಲಾ ಪ್ರತಿರೂಪಗಳು ಇವುಗಳಿಂದ ತುಂಬಿಸಲಾಗಿದೆ.
9. ರಾಧೆ ಹಾಗೂ ಗೋಪಿಯರು ಪ್ರತಿಕ್ಷಣವೂ ನೃತ್ಯದ ಭಂಗಿಯಲ್ಲೇ ಇದ್ದಾರೆ. ಅವರು ಸ್ವರ್ಗದ ಲಯಕ್ಕೆ ಬದ್ಧರಾಗಿ ನೃತ್ಯ ಮಾಡುವ ಹಾಗೆ ನಮಗೆ ಭಾಸವಾಗುತ್ತದೆ.
10. ಕಲಮಕಾರಿ ಕಲಾವಿದರಂತೆ ಹಾಗೂ ಜಾನಪದ ಚಿತ್ರ ಕಲಾವಿದರಂತೆ ಕಲಾವಿದ ಶುಭರಾಯರು ರೇಖೆಗಳನ್ನು ಎಳೆಯುವುದರಲ್ಲಿ ನಿಪುಣರು. ಅವರ ರೇಖೆಗಳು ಭಾವಕವಿತೆಗಳನ್ನು ಹಾಡುವಂತೆಯೂ, ನೃತ್ಯವನ್ನು ಮಾಡುವಂತೆಯೂ ತೋರುತ್ತವೆ.

ಶ್ರೀ ಶುಭರಾಯರು ಯಾವ ತರಹ ಹಾಗೂ ಯಾತಕ್ಕೋಸ್ಕರ ಕಲಾಕೃತಿಗಳ ತಯಾರಿಯನ್ನು ಆರಂಭಿಸಿದರು?

ಈ ಸಂದರ್ಭದಲ್ಲಿ ವಿಶೇಷವಾಗಿ ಧ್ಯಾನವಿಡಬೇಕಾದ ವಿಷಯವೆಂದರೆ ಶ್ರೀ ಶುಭರಾಯರು ಯಾವ ಕಲೆಯಲ್ಲಿಯೂ ಪ್ರಶಿಕ್ಷಣವನ್ನು ಪಡೆದಿರಲಿಲ್ಲ. ಅವರೊಬ್ಬ ವಿದ್ವಾಂಸರಾಗಿ ಸಂಸ್ಕಾರ ಪಡೆದಿದ್ದರು. ಅವರ ತಂದೆಯವರಿಂದ ಅವರು ವೇದಗಳನ್ನೂ, ಕರ್ಮಕಾಂಡದ ವಿಷಯಗಳನ್ನೂ ಕಲಿತಿದ್ದರು. ಸೋಲಾಪುರದಲ್ಲವರು ತಮ್ಮ ಉದ್ದೇಶಾತ್ಮಕ ತೃಷ್ಣಿಯ (purposeful quest) ಜೀವನವನ್ನು ಪ್ರಾರಂಭಿಸಬೇಕಾಗಿತ್ತು. ಆದುದರಿಂದ ಜೀವನದ ಪೂರ್ಣಶಕ್ತಿಯನ್ನು ಅವರು ಆಧ್ಯಾತ್ಮಸಾಧನೆ ಹಾಗೂ ಭಕ್ತಿಗೆ ನೀಡಿದ್ದರು. ಒಟ್ಟಿಗೇನೇ ಮಠದ ದಿನನಿತ್ಯದ ಕಾರ್ಯಗಳು ಹಾಗೂ ಪುನರಾವರ್ತಿಸುವ ಕಾರ್ಯ-ಕಲಾಪಗಳ ಮೇಲೆ ತಮ್ಮ ಧ್ಯಾನವನ್ನು ಹರಿಸಬೇಕಾಗಿತ್ತು. ವೀಕ್ಷಕರು ಹಾಗೂ ಜನಸಾಮಾನ್ಯರು, ಅವರಿಂದ ಆಧ್ಯಾತ್ಮಿಕ ಮಾರ್ಗದರ್ಶನಗೊಳ್ಳಲು ಬರುತ್ತಿದ್ದರು. ಅವರ ಸುತ್ತಮುತ್ತ ಭಕ್ತಗಣ ಹಾಗೂ ಆಶ್ರಮದ ಸೇವಕ ಜನರು ಇರುತ್ತಿದ್ದರು. ಆದರೆ ಹಗಲಿನ ವೇಳೆ ಅವರೊಬ್ಬರೇ ಏಕಾಂತವಾಗಿರುತ್ತಿದ್ದ ಸಮಯವೂ ಇದ್ದಿತು. ಅಂತಹ ಅಲ್ಪಕಾಲವನ್ನು ಅವರು ಗಹನವಾದ ಧ್ಯಾನ ಕಾರ್ಯಗಳಿಗೋಸ್ಕರ ಉಪಯೋಗಿಸುತ್ತಿದ್ದರು.

ಗಾಢ ಅಂತರ್ಗಮನ – ಅಂತರಾಳದ ಹಾಗೂ ಚೇತನದ ವಿವಿಧ ಸ್ತರಗಳಲ್ಲಿ ಶೋಧನೆ. ಅವರಿಗೆ ಬಾಹ್ಯಲೋಕದ ಸುಖ–ಭೋಗಗಳಲ್ಲಿ ಅಭಿರುಚಿ ಇರಲಿಲ್ಲ. ಹಾಗಾದರೆ ಚಿತ್ರಕಲೆಯಂತಹ ಕಾರ್ಯದಲ್ಲಿ ಅವರು ಹೇಗೆ ಪ್ರವೃತ್ತರಾದರು? ಇದು ಒಂದು ಕೌತುಕದ ಪ್ರಶ್ನೆ – ಅದು ಯಾವ ರೀತಿಯಲ್ಲಿ ಪ್ರಾರಂಭವಾಯಿತು? ಕೊನೆಗೆ ಕಲೆ ಹಾಗೂ ಚಿತ್ರಗಳಲ್ಲಿ ರುಚಿ ಬರುವಂತೆ ಯಾವ ತರಹದ ಶಕ್ತಿಯು ಅವರನ್ನ ಪ್ರೇರೇಪಿಸಿತು?

ಶ್ರೀ ಪಿ.ಜೆ. ಬುವಾ ಹಾಗೂ ಅವರ ಹಿರಿಯಣ್ಣನವರು ನನಗೆ ತಿಳಿಸಿದ ಮೇರೆಗೆ ಶುಭರಾಯರಿಗೆ ಮಧ್ಯಾಹ್ನದ ನಂತರ ಆರಾಮಗೈಯಲು ಸ್ವಲ್ಪ ಅವಕಾಶದ ಅಗತ್ಯವಿದ್ದಿತು. ಆ ವೇಳೆಯಲ್ಲಿ ಏಕಾಂತದಲ್ಲಿ ವಿಶ್ರಾಮಗೈಯುತ್ತಿರುವಾಗ ಅವರ ಅಂತರ್‌ಮನವು ನವ್ಯವಿಷಯ ಹಾಗೂ ಕೃತಿಗಳಿಗೆ ತೆರೆದಿತ್ತು. ಒಮ್ಮೆ ಮಠದ ವಾಸ್ತು ಸಂಸ್ಕರಣ (facelift) ಅದರ ಅಲಂಕಾರ ಹಾಗೂ ಸತ್ಸಂಗ ಹಾಗೂ ಭಜನಾಕೂಟಗಳಿಗೆ ತಕ್ಕುದಾದ ಏರ್ಪಾಡು ಮಾಡಬೇಕೆಂದು ಅವರಿಗೆ ಕಂಡಿತು. ಪೂಜೆ ಹಾಗೂ ಆರಾಧನಾ ಕಾರ್ಯಗಳಿಗೆ ಉಪಯೋಗಿಸಲ್ಪಡುವ ಜಾಗಗಳಿಗೆ ಸೌಂದರ್ಯ ಹಾಗೂ ಅಲಂಕಾರದ ಅಗತ್ಯ ವಿದ್ದಿತು. ಕಂಬಗಳು ಹಾಗೂ ಗೋಡೆಗಳು ಶೂನ್ಯ ಹಾಗೂ ಅಲಂಕಾರರಹಿತವಾಗಿ ದ್ದುವು. ಇಂತಹ ನಿಸ್ತೇಜದ ಸ್ಥಳಗಳನ್ನು ಬಣ್ಣ, ಚಿತ್ರ ಹಾಗೂ ಆಕೃತಿಗಳಿಂದ ಸುಶೋಭಿತಗೊಳಿಸಬೇಕೆಂಬ ವಿಚಾರವು ಅವರ ಮನದಲ್ಲಿ ಮೂಡಿತು. ಹಲವು ಪುಷ್ಪಗಳ ಆಕೃತಿಬಂಧ ಹಾಗೂ ಪ್ರತಿಕಲ್ಪ (patterns and designs)ಗಳನ್ನು ಅವರು ರೇಖಿಸಲು ಅನುವಾದರು. ನಿಸರ್ಗದ ಪ್ರತಿರೂಪದ ಸಾಧನೆಗಳು ಅವರಲ್ಲಿ ಅತ್ಯಂತ ಆನಂದ ಹಾಗೂ ಸತ್ಸಂಗವನ್ನು ಉಂಟುಮಾಡಿದುವು. ಬಹುಬೇಗನೆ ಅಲಂಕಾರಿಕ ಉಪಮಾನಕ (decorative motifs) ಮತ್ತು ಅವುಗಳ ರಚನೆಯಲ್ಲಿ ಪರಿಪಾಠ ಹಾಗೂ ಕ್ರೀಡೆಯಾಯಿತು. ಗೆಜೆಟಿಯರ್‌ನಲ್ಲಿ ನಮೂದಿಸಿದಂತೆ, "ಜುನ್ನಾರಿ ಪೇಪರಿ"ನ ಮೇಲೆ ಶುಭರಾಯರು ರಚಿಸಿದ "ಸ್ಟೆನ್ಸಿಲ್ ಕಟ್ಟಿಂಗ್" ಆ ಕಾಲದ ಶ್ರೇಷ್ಠ ಕೃತಿಗಳಲ್ಲೊಂದು. ಅವರ ಅಂತರಿಕ ಅಲಂಕಾರ ಹಾಗೂ ಚಿತ್ರನಿರ್ಮಾಣದ ಸಹಜ ಪ್ರೇರಣೆಯಿಂದ ದೃಶ್ಯಾತ್ಮಕ ಸೃಷ್ಟಿಯ ಕಾರ್ಯವು ಪ್ರಾರಂಭವಾಗಿ, ಅದು ಪೈಂಟಿಂಗ್ ಹಾಗೂ ಚಿತ್ರಕಲೆಗಳಲ್ಲಿ ಪರಿಪೂರ್ಣತೆಯನ್ನು ಪಡೆಯಲು ಸ್ವಲ್ಪ ಕಾಲವು ಬೇಕಾಯಿತು. ಈ ಪ್ರಥಮ ಪ್ರೇರಣೆಯ ನಂತರ ವಿಷಯ ನಿಷ್ಠ ಹಾಗೂ ಅಂತರಾತ್ಮಕ್ಕೆ ಅಭಿರುಚಿಯುಳ್ಳ ವಿಷಯಗಳ ಮೇಲಣ ಕಲಾಕೃತಿಗಳ ತಯಾರಿಕೆಗೆ ಅವರಿಗೆ ಬಹಳ ಕಾಲವು ಬೇಕಾಯಿತು. ಕೃಷ್ಣನ ಮೇಲಣ ಕಥೆಗಳು, ಅವರಿಗೆ ತುಂಬಾ ಹಿಡಿಸಿ, ಅವನ ಮೇಲಣ ಮಿಥ್ಯ ಕಥೆಗಳನ್ನು ಸಾದಾ ಹಾಗೂ ಸೋಲಾಪುರದಲ್ಲಿ ಸಿಗುವ "ಲೆಜರ್" ಕಾಗದದ ಮೇಲೆ ಚಿತ್ರಿಸುತ್ತಿದ್ದರು. ಅವರಿಗೆ ಚಿತ್ರರಚನೆಗೆ ಬೇಕಾದ ಸಾಮಗ್ರಿಗಳು ಸರ್ವಸಾಮಾನ್ಯ ಹಾಗೂ ಕನಿಷ್ಠ ಬೆಲೆಯುಳ್ಳವಾಗಿದ್ದುವು. ಮುಕ್ತ ಮನದಿಂದ, ಸ್ವತಂತ್ರತೆ ಹಾಗೂ

ಸ್ವೈರತೆಯಿಂದ ಕಾರ್ಯನಿರತರಾಗಿರುವುದು, ಚಿತ್ರೀಕರಿಸುವುದು, ಅವರಿಗೆ ಆಗತ್ಯವಿತ್ತು. ತನ್ನ ಆನಂದಕ್ಕೋಸ್ಕರ ಅವರು ಏನಾದರೊಂದು ಕಾರ್ಯವನ್ನು ಮಾಡುತ್ತಿದ್ದು, ಅದು ಆವರಿಗೆ ವಿನೋದಮಯ ಹಾಗೂ ಕ್ರೀಡಾಪ್ರಾಯವಾಗಿತ್ತು. ಅವರು ಮಾಡುತ್ತಿದ್ದ ಚಿತ್ರಗಳು ಸ್ವಯಂಪ್ರೇರಿತವಾಗಿದ್ದು, ಆದರಲ್ಲಿ ಸ್ವತಂತ್ರತೆ ಇದ್ದಿತ್ತು. ಅವರ ಸ್ವಯಂಪ್ರೇರಣೆಯ ಆವೇಗವು ಎಷ್ಟು ಪ್ರಬಲವಾಗಿತ್ತೆಂದರೆ ಅವರು ಬಾಹ್ಯ ಪ್ರಪಂಚಕ್ಕೆ ಪ್ರವೇಶಿಸಿ ಇತರರಿಂದ ಕಲೆ ಮತ್ತು ಪ್ರತಿಮಾ ನಿರ್ಮಾಣದಲ್ಲಿ ಕುಶಲತೆಯನ್ನು ಕಲಿಯುವ ಆಗತ್ಯವಿರಲಿಲ್ಲ. ನಿಯಮಿತ ಪ್ರಶಿಕ್ಷಣವು ಅವರಿಗೆ ಬೇಕಾಗಿದ್ದಿರಲಿಲ್ಲ. ಯಾಕೆಂದರೆ ಅವರೊಳಗೆ ಚಿತ್ರೀಕರಣದ ಮೇಲಣ ಪ್ರೇಮ ಹಾಗೂ ಆಕಾರದಲ್ಲಿ ಕ್ರೀಡಿಸುವ ಶಕ್ತಿ ಅವರನ್ನು ಮುಂದೆ ಮುಂದೆ ದೂಡುತ್ತಿತ್ತು.

ಆಂತರಿಕವಾಗಿ ಶಕ್ತಿಯೊಂದು ಅವರಿಗೆ ಮಾರ್ಗದರ್ಶನ ಮಾಡುತ್ತಿದ್ದು, ಅವರನ್ನು ಮುಂದೂಡಿದರೆ ಬಾಹ್ಯದಲ್ಲಿ ಅವರ ಶರೀರ, ಕರಗಳು ಹಾಗೂ ಅವರ ಮನಸ್ಸು ಇವು ಅವರನ್ನು ಹಿಂಬಾಲಿಸುತ್ತಿದ್ದುವು. ಇದು ಎಷ್ಟೋ ದಿನ ನಡೆಯಿತು. ಈ ರೀತಿ ಶುಭರಾಯರು ಸ್ವಯಂಪಾಠಿಯಾದರು. ಆಂತರಿಕ ಗುರು–ಶಿಷ್ಯರು ಒಬ್ಬರನ್ನೊಬ್ಬರು ಅರಿತರು. ಅವರ ಸಂವಾದ, ಅವರ ಸ್ವಯಂಪಾಠವು, ಒಂದು ತರಹದಲ್ಲಿ ಅವರ ನೃತ್ಯ, ಸಂಗೀತ, ಹಾಡುವಿಕೆ, ಪದ್ಯರಚನೆ, ಪ್ರತಿಕಲ್ಪ (ಡಿಸೈನ್) ರಚನೆ, ಮಠದ ಹಾಗೂ ಸುತ್ತಮುತ್ತಲಿನ ಪ್ರದೇಶದ ಅಲಂಕರಣೆ – ಇವು ಅವರ ಕಾರ್ಯಪದ್ಧತಿಯಾಗಿದಿತ್ತು. ಆಂತರಿಕವಾಗಿ, ಅವರು ಪ್ರೇರಿತರಾದ ಕಾರಣ, ಅವರಿಗೆ ಕಲೆ ಹಾಗೂ ಪ್ರತಿಕಲ್ಪದ ಕೃತಿಗೆ ಬಾಹ್ಯ ಪ್ರಪಂಚದ ಉತ್ತೇಜನವು ಹಾಗೂ ಮಾರ್ಗದರ್ಶನವು ಬೇಕಾಗಿದ್ದಿರಲಿಲ್ಲ. ಸ್ವಯಂ–ಆಧರಿತ ಸಂಪೂರ್ಣ ಸ್ವಾಯತ್ತವಾಗಿ ಕಾರ್ಯರತರಾಗಿರುವುದು, ಚಿತ್ರೀಕರಿಸುವುದು ಹಾಗೂ ಸ್ವೈರ ರೇಖಾ ರಚನೆ ಇವು ಅವರ ಗಹನವಾದ ಸ್ವಯಂಚಾಲಿತ ಉಚ್ಚ ಪ್ರೇರಣಾ ಶಕ್ತಿಯನ್ನು ಜಾಗೃತಿಗೊಳಿಸುತ್ತಿತ್ತು. ಅವರ ವ್ಯಕ್ತಿತ್ವದ ಬಾಹ್ಯ ಸ್ಥಿತಿಯನ್ನು ಆಂತರಿಕ ದಿವ್ಯದೃಷ್ಟಿ ಹಾಗೂ ಇಂದ್ರಿಯ ಗೋಚರ ದೃಶ್ಯಗಳು ಸಮಾನವಾಗಿ ಪುಷ್ಟೀಕರಿಸುತ್ತಿದ್ದುವು.

ಶ್ರೀ ಶುಭರಾಯರಿಗೆ ದೈನಿಕ ಧ್ಯಾನಗಳು ಬಹುಪ್ರಾಮುಖ್ಯವಾಗಿದ್ದುವಲ್ಲದೆ, ಸೃಜನಶೀಲ ಕಾರ್ಯದಲ್ಲಿ ಅವು ಆಧಾರಭೂತವಾಗಿದ್ದುವು. ಅವರ ಧ್ಯಾನಗಳು ಬರೇ ಯಾಂತ್ರಿಕ ಹಾಗೂ ಕರ್ಮಕಾಂಡಯುಕ್ತವಾಗಿದ್ದಿರಲಿಲ್ಲ. ಧ್ಯಾನ ಪ್ರಕ್ರಿಯೆಗಳು ಬರೇ ಪುನರಾವೃತ್ತಿಯಾಗಿರದೆ ಅವಿರತವಾಗಿ, ನವ್ಯ ದೃಶ್ಯ ಹಾಗೂ ಹೊಸ ದೃಷ್ಟಿಗಳನ್ನು ಅನಾವರಣ ಮಾಡಿ, ಗೋಚರಗೊಳಿಸುತ್ತಿದ್ದುವು. ಧ್ಯಾನ ಪ್ರಕ್ರಿಯೆಯ ನಿಶ್ಯಬ್ದತೆಯ ಮೂಲಕ (meditative silence) ಚೇತನದ ಸಂಧಿ ಪ್ರಕಾಶ ಕ್ಷೇತ್ರದೊಳಗೆ (turlight zone of consciousness) ಇಚ್ಛಾನುಸಾರ ಪ್ರವೇಶಿಸುವುದನ್ನು ಅವರು ಅರಿತುಗೊಂಡಿದ್ದರು. ನಮಗೆ ತಿಳಿದಂತೆ ಸಂಧಿಪ್ರಕಾಶ ಕ್ಷೇತ್ರವು, ಅತೀವ ಫಲವತ್ತಾದುದು. ಈ ಆಳದ

ಬಾವಿಯ ತಾಜಾ ಜಲವು ಯಾವುದೇ ರೀತಿಯ ಸೃಜನಶೀಲ ಕಾರ್ಯಕ್ಕೆ ಅಗತ್ಯವಿರುತ್ತದೆ. ಬರೀ ಚಿತ್ರರಚನೆ ಮಾತ್ರವಲ್ಲ, ಯಾವುದೇ ಕ್ಷೇತ್ರದಲ್ಲಿ, ನಿಜವಾದ ನೈಪುಣ್ಯತೆ ಪ್ರಾಪ್ತಿಯಾಗಬೇಕಾದರೆ ಈ ಸಂಧಿ ಪ್ರಕಾಶ ಕ್ಷೇತ್ರದ ಅಗತ್ಯವಿದೆ. ಈ ಸಂಧಿ ಪ್ರಕಾಶ ಕ್ಷೇತ್ರದಲ್ಲೇ ಪ್ರತಿಮಾ ನಿರ್ಮಾಣದ ಪ್ರಕ್ರಿಯೆಯು ನಡೆಯುವುದು. ಇಲ್ಲೇ ದೃಕ್‌ಶಕ್ತಿ ಹಾಗೂ ಸೃಜನಶೀಲತೆಯ ಕಲ್ಪನಾಶಕ್ತಿಯು ಉಗಮವಾಗುವುದು. ಇದು ರೂಪಕ ಮನವು ಜಾಗ್ರತಗೊಳ್ಳಲು ಬಲ–ಮೆದುಳಿನ ಕ್ಷೇತ್ರ (right brain region of the awakening of the metaphoric mind) ಇಲ್ಲೇ ಪ್ರತಿಬಿಂಬ ಹಾಗೂ ಚಿಹ್ನೆಗಳ ಕಲಿಯುವಿಕೆ ಹಾಗೂ ಪ್ರಾವೀಣ್ಯತೆಯು ನಡೆಯಲ್ಪಡುತ್ತದೆ. ಭಾಗವತ, ಇತರ ಪುರಾಣಗಳು, ಭಾರತದ ಜಾನಪದ ಕಥೆಗಳು ಹಾಗೂ ಪರಿಕಥೆಗಳು (fairy tales) ಈ ಮೊದಲೇ ಶುಭರಾಯರಲ್ಲಿ, ಪ್ರತಿಮೆಗಳು ಹಾಗೂ ಆಕೃತಿಗಳ ಬೀಜಗಳನ್ನೂ ಮತ್ತು ಸಂಧಿಕಾಲ ಅವಸ್ಥೆಯ ಆತ್ಮ ಪ್ರೇರಿತ ಪ್ರತಿಬಿಂಬಗಳನ್ನೂ (planted seeds of forms and images, creative symbols and hypnogogic imaging) ಬಿತ್ತಿದ್ದುವು. ಈಗ ಆಂತರಿಕ ಸೃಜನಶೀಲ ಮಿಥ್ಯ ಕಥೆಗಳು ಪರಿಪಕ್ವವಾದುವು ಹಾಗೂ ಬಾಹ್ಯದಲ್ಲಿ ಅವರ ಕರಗಳು ಮತ್ತು ಮನವು ಪುಷ್ಪಗಳ ಪ್ರತಿಕಲ್ಪ ಹಾಗೂ ಆಕೃತಿ ಬಂಧಗಳೊಡನೆ ಸರಸವಾಡುತ್ತಿದ್ದುವು. ಇದರಿಂದಾಗಿ ಒಂದು ಬೃಹತ್ತಾದ ಪಥದ (break through) ಉಗಮವಾಗಿ, ಆಂತರಿಕ ಪ್ರಕ್ರಿಯೆಗಳು ಹಾಗೂ ಬಾಹ್ಯ ಚಿತ್ರೀಕರಣ ಪ್ರಕ್ರಿಯೆಗಳು – ಇವೆರಡೂ ಸಂಲಗ್ನಗೊಂಡವು – 'ಜೋಡನೆಯ ಆಕೃತಿ ಬಂಧ'ದಲ್ಲಿ ಜೋಡಿಸಲ್ಪಟ್ಟುವು. ಸಮುದ್ರದ ಭರತ ಇಳಿತದಂತೆ. ಈ ಭರತ ಇಳಿತಗಳ ಹಿನ್ನುಗ್ಗಿ, ಸೃಜನಶೀಲತೆಯ ರೂಪದಲ್ಲಿ ಮುಂಬರುವಂತೆ ನವ್ಯದೃಶ್ಯದ ಸೃಜನಶೀಲಾ ಪ್ರಕ್ರಿಯೆಯು – ಬಾಹ್ಯದ ಆಂತರಿಕ ಹಾಗೂ ಆಂತರಿಕದ ಬಾಹ್ಯ ಇವೆರಡರ ವಿಲೀನೀಕರಣ ಉಂಟಾಯಿತು. ಬಾಹ್ಯ ವಸ್ತುನಿಷ್ಠ ನೈಸರ್ಗಿಕ ರೂಪಗಳು ಹಾಗೂ ಆಂತರಿಕ ಆತ್ಮನಿಷ್ಠ ಸುಧಾರಣೆಗಳು – ಧ್ಯಾನದ ಪ್ರಕ್ರಿಯೆಯಿಂದ ಜೋಡನೆಯ ಮೂಲಾಕೃತಿಯ ಮೂಲಕ ಒಟ್ಟಾದುವು. ಶ್ರೀ ಶುಭರಾಯರಿಗೆ ಇನ್ನೊಬ್ಬರ ಶೈಲಿಯನ್ನು ಅನುಕರಿಸಬೇಕಾದ ಅಗತ್ಯವಿರಲಿಲ್ಲ ಅಥವಾ ಇನ್ನೊಬ್ಬರ ಚಿತ್ರ ಶೈಲಿಯನ್ನು ಅನುಕರಿಸಬೇಕಾಗಿರಲಿಲ್ಲ. ಈಗ ಆಕೃತಿರಚನೆಯ ಪ್ರಕ್ರಿಯೆಗಳು ಹಾಗೂ ತನ್ನದೇ ಆದ ಅದ್ವಿತೀಯ ದೃಶ್ಯ ರೂಪಗಳ ರಚನೆಗಳು ಮತ್ತು ಹೃದಯದ ಅಂತರಾಳದಲ್ಲಿ ಕಾಣಲ್ಪಟ್ಟ ರಾಧಾ, ಕೃಷ್ಣ ಹಾಗೂ ಗೋಪಿಯರ ಮೂಲ ಆಕೃತಿಗಳು – ಇವು ಅವರದೇ ಆದ ಸೃಜನಶೀಲತೆಯ ಪರಿಣಾಮವಾಗಿದ್ದುವು. ಅವು ಈಗ ಸೃಜನಶೀಲತೆಯ ಮೂಲ ಸ್ತೋತ್ರದಲ್ಲಿದ್ದರು. ಅವರ ಸೃಜನಶೀಲ ರೂಪಗಳು ನಿಸರ್ಗವನ್ನು ಅನುಕರಿಸದೆ, ಅವರು ನಿಜವಾಗಿಯೂ ರೂಪಾಂತರಣದ ಕುರುಹುಗಳಾಗಿದ್ದುವು. ಶುಭರಾಯರು ಸೃಜನಶೀಲತೆಯ ಸರ್ವಪ್ರಥಮ ಹಾಗೂ ಮಹತ್ವದ ಘಟ್ಟವನ್ನು ಮುಟ್ಟಿದ್ದರು. ಚೇತನದ ಸೃಜನಶೀಲತೆಯ ಘಟ್ಟವನ್ನು ತಿಳಿದವರಿಗೆ ಶುಭರಾಯರು



(ಎ)



(ಬಿ)

(ಎ) ದರಿಯಾದೌಲತ್‌ನಲ್ಲಿ ಬುಕನನ್ 1804ರಲ್ಲಿ ನೋಡಿದ ಚಿತ್ರ
(ಬಿ) ದರಿಯಾದೌಲತ್‌ನಲ್ಲಿ ಈಗ ಇರುವ ಒಂದು ಚಿತ್ರ



ಮೈಸೂರು ಸಾಂಪ್ರದಾಯಿಕ ಶೈಲಿಯ ಒಂದು ಚಿತ್ರ



ಶುಭರಾಯರು ರಚಿಸಿದ ಒಂದು ಚಿತ್ರ



(ಎ)

(ಬಿ)



(ಎ) ಮೈಸೂರು ಶೈಲಿಯಲ್ಲಿ ನೃತ್ಯಗಾತಿ (ಬಿ) ದಖ್ಖನಿ ಚಿತ್ರ ಶೈಲಿಯಲ್ಲಿ ನೃತ್ಯಗಾತಿ



ಶುಭರಾಯರ ನೃತ್ಯಗಾತಿ



(ಎ) (ಬಿ) (ಸಿ) (ಡಿ)

ಮಹಾರಾಷ್ಟ್ರ ಶೈಲಿಯ ಉಡುಗೆಗಳು : (ಎ) ತಂಜಾವೂರು ಗಾಜಿನ ಚಿತ್ರ
(ಬಿ) ರಾಯಚೂರು ವಾಡೆಯಲ್ಲಿಯ ಭಿತ್ತಿ ಚಿತ್ರ (ಸಿ) ನಿಪ್ಪಾಣಿ ವಾಡೆಯಲ್ಲಿಯ ಭಿತ್ತಿ ಚಿತ್ರ
(ಡಿ) ವಿ.ಜೆ. ಅಂದಾನಿ

(ಎ) (ಬಿ)



(ಸಿ) (ಡಿ)

ಮೈಸೂರು ಶೈಲಿಯ ಉಡುಗೆ : (ಎ) ಶ್ರವಣಬೆಳಗೊಳದ ಭಿತ್ತಿ ಚಿತ್ರ (ಬಿ) ಕಲಂಕಾರಿ ಚಿತ್ರ
(ಸಿ) ಕೆ.ಟಿ. ಪಾಂಡುರಂಗಿ ಅವರ ಸಂಗ್ರಹದ ಚಿತ್ರ (ಡಿ) ಶುಭರಾಯರ ಚಿತ್ರ



(ಎ)





(ಸಿ)

ಪ್ರಣಯಿಗಳು : (ಎ) ಮುಘಲ್ ಶೈಲಿಯ ಚಿತ್ರ (ಬಿ) ಕಾಂಗ್ರ ಶೈಲಿಯ ಚಿತ್ರ
(ಸಿ) ಶುಭರಾಯರ ಚಿತ್ರ



(ಎ)



(ಬಿ)



(ಸಿ)



(ಡಿ)

ಪ್ರಣಯಿಗಳು : (ಎ) ತಂಜಾವೂರು ಶೈಲಿಯ ಚಿತ್ರ (ಬಿ) ಜೈನ ಚಿಕಣಿ ಚಿತ್ರ
(ಸಿ) ರಾಜಸ್ಥಾನಿ ಶೈಲಿಯ ಚಿತ್ರ (ಡಿ) ಶುಭರಾಯರ ಚಿತ್ರ

(ಎ)



(ಬಿ)



(ಸಿ)



ಪ್ರಕೃತಿ ಚಿತ್ರಣ : (ಎ) ಶ್ರವಣಬೆಳಗೊಳದ ಭಿತ್ತಿ ಚಿತ್ರ
(ಬಿ) ಆಲಮೇಲಕರ್ ಅವರ ಒಂದು ಚಿತ್ರ (ಸಿ) ಶುಭರಾಯರ ಚಿತ್ರ



(ಎ)

(ಬಿ)





(ಸಿ)

(ಎ) ರಾಜಸ್ಥಾನಿ ಶೈಲಿಯ ಚಿತ್ರ (ಬಿ) ರಾಗಮಾಲ ಚಿತ್ರ (ಸಿ) ಶುಭರಾಯರ ಚಿತ್ರ

(ಎ)



(ಬಿ)



(ಸಿ)



(ಡಿ)



ಆಂಜನೇಯ : (ಎ) ಜನಪದ ಚಿತ್ರ (ಬಿ) ಪಟ ಚಿತ್ರ (ಸಿ) ಗಾಜಿನ ಚಿತ್ರ
(ಡಿ) ಶುಭರಾಯರ ಚಿತ್ರ



ಶಿರೋಭೂಷಣ : (ಎ) ಲೇಪಾಕ್ಷಿಯ ಭಿತ್ತಿ ಚಿತ್ರ (ಬಿ) ಹಿರಿಯೂರಿನ ಭಿತ್ತಿ ಚಿತ್ರ
(ಸಿ) ಮೈಸೂರು ಶೈಲಿಯ ಚಿತ್ರ (ಡಿ) ಶುಭರಾಯರ ಚಿತ್ರ





ವಸ್ತ್ರಾಪಹರಣ : (ಎ) ಪಟ ಚಿತ್ರ (ಬಿ) ರಾಯಚೂರು ವಾಡೆಯಲ್ಲಿಯ ಭಿತ್ತಿಚಿತ್ರ



(ಸಿ)



(ಬಿ)



(ಎ) ಕಾಳೀಘಾಟ್ ಚಿತ್ರ (ಬಿ) ಪಟುವ ಚಿತ್ರ (ಸಿ) ಶುಭರಾಯರ ಚಿತ್ರ



(ಎ)



(ಬ

ಮತ್ಸ್ಯ ಕನ್ಯೆಯರು : (ಎ) ತಂಜಾವೂರು ಗಾಜಿನ ಚಿತ್ರ (ಬಿ) ಶುಭರಾಯರ ಚಿತ್ರ

ಹೇಗೆ ಚಿತ್ರ, ಸಂಗೀತ, ನೃತ್ಯ, ಪ್ರತಿಕಲ್ಪ ರಚನೆ, ಇವೆಲ್ಲಾ ಕಲೆಗಳನ್ನು ಉಪಯೋಗಿಸಿ ಬಹುಸ್ತರೀಯ ಸೃಜನಶೀಲ ವ್ಯಕ್ತಿಯಾದರೆಂದು ಆಶ್ಚರ್ಯವಾಗದು. ಶುಭರಾಯರ ಗಹನದ ಧ್ಯಾನಗಳು ಇನ್ನು ಸಂಧಿಪ್ರಕಾಶ ಕ್ಷೇತ್ರದ ಪ್ರವೇಶ ಹಾಗೂ ದೈವಭಕ್ತಿಯ ಮಿಥ್ಯ ಕಥೆಗಳು, ತಳಹದಿಯನ್ನು ತಯಾರು ಮಾಡಿದರೂ ಅವು ಹೊರಸೂಸಲು, ಕ್ರೀಡಾತರಹದ ಸ್ವೈರ ರೇಖಾರಚನೆ ಚಿತ್ರೀಕರಣ ಹಾಗೂ ಚಿತ್ರಗಳ ಮಾಧ್ಯಮದ ಅಗತ್ಯವಿದ್ದಿತು. ರಬೀಂದ್ರನಾಥ ಠಾಗೋರ್ ಹಾಗೂ ಪೌಲ್ ಕ್ಲೀಯವರು ಆಂತರಿಕ ಸ್ಮರಣೆಗಳನ್ನು ಅಮೂರ್ತಗೊಳಿಸುವ ಪ್ರಕ್ರಿಯೆಗಳಂತೆ – ಅದೇ ರೀತಿ ವಿಲಿಯಂ ಬ್ಲೇಕರರ ದಿವ್ಯ ದೃಷ್ಟಿಯು, ಇಂದ್ರಿಯ ಗೋಚರವಾಗಿ ಅವುಗಳನ್ನು ಪೈಂಟ್ ಮಾಡಿದಂತೆ. ಶ್ರೀ ಶುಭರಾಯರು ಕೂಡಾ ಪೌಲ್ ಕ್ಲೀ ವಿಲಿಯಂ ಬ್ಲೇಕ್, ಗಿಬ್ರಾನ್, ಕಬೀರ್ ಹಾಗೂ ತುಕಾರಾಮರಂತೆ ಅಂತರ್ಗಮನ ಮಾಡಿ, ಆತ್ಮದೊಂದಿಗೆ ಗಹನ ಸಂವಾದ ಹಾಗೂ ಸೃಜನಶೀಲತೆಗೆ ಸ್ಥೈರ್ಯ ಹಾಗೂ ಅಸ್ತಿತ್ವದ ತಳಹದಿಗೆ (ground of being) ಕಾರಣವಾದ, ಸೃಜನಶೀಲ ಸುಪ್ತಮನ (creative unconseious)ದೊಂದಿಗೆ ಸಂವಾದ ಮಾಡುವುದನ್ನು ತಿಳಿದಿದ್ದರು. ಈ ಎಲ್ಲಾ ಮಹಾಪುರುಷರು, ಪೂರ್ಣತಃ ಸ್ವಯಂಪಾಠಿಗಳು ಹಾಗೂ ನವನಿರ್ಮಿತಗಾರರಾಗಿದ್ದರು. ಠಾಗೋರರ ಚಿತ್ರಗಳಲ್ಲಿರುವ ರೂಪಗಳು, ಸುಪ್ತಮನದಿಂದ ಉಗಮಗೊಂಡುವು. ಅವುಗಳು ತನ್ನ ಸುಪ್ತಮನದ ರಮಣೀಯ ಪ್ರದೇಶದ ಪೈಂಟಿಂಗ್ ಮಾಡಿದಂತೆ. ವಿಲಿಯಂ ಆರ್ಚರ್ ಎಂಬ ಕಲಾ ವಿಮರ್ಶಕರು ಅವುಗಳನ್ನು ಸುಪ್ತಮನದ ಜೀವಿಗಳ ಚಿತ್ರಗಳೆಂದಿದ್ದಾರೆ. ಶ್ರೀ ಶುಭರಾಯರಲ್ಲಿ ಗಹನವಾದ ಮೂಲಾಕೃತಿಯ ಮಿಥ್ಯ ಕಥೆಗಳು ಕೃಷ್ಣನ ಮೇಲಣ ಭಾರತೀಯ ಮಿಥ್ಯ ಕಥೆಗಳು ರಾಧೆ–ಕೃಷ್ಣ ಜ್ಞಾಪಕಗಳು (motifs) ವ್ಯಕ್ತಗೊಂಡವು. ಚಿತ್ರಗಳ ನಂತರ ಚಿತ್ರಗಳನ್ನು ಮಾಡುತ್ತಾ ಶುಭರಾಯರು ಸುಪ್ತಮನದ ಧಾರ್ಮಿಕ ಮಿಥ್ಯ ಕಥೆಗಳನ್ನು ವ್ಯಕ್ತಪಡಿಸುತ್ತಿದ್ದರು. ರಾಧಾ–ಕೃಷ್ಣರ ಜೋಡಿಯ ಆಕೃತಿಬಂಧಗಳು, ಅವರ ಅಂತರಾತ್ಮಕ್ಕೆ ಬಹಳ ಹಿಡಿಸಿತ್ತು. ಅದು ದೃಶ್ಯ ಹಾಗೂ ಮನೋಶಾಸ್ತ್ರೀಯ ಆಕೃತಿ ಬಂಧಗಳನ್ನು ಪೈಂಟಿಂಗ್‌ಗಳ ಮೂಲಕ ಜೋಡಿಸುತ್ತಿದ್ದುವು. ಯಾಂಗ್‌ರವರ ಮನೋಶಾಸ್ತ್ರದಲ್ಲಿ ರಾಧೆ–ಕೃಷ್ಣರ ಜೋಡಿಯು, ಮೂಲಾಕೃತಿಯ ನರ ಹಾಗೂ ನಾರೀ ಪ್ರತಿಮೆಗಳ ಸಂಬಂಧ (Archetypal arima-animus relationship) ಹಾಗೂ ಗಾಢ ಸ್ತ್ರೀ–ಪುರುಷ ಸಂಬಂಧ ಮತ್ತು ವ್ಯಕ್ತಿತ್ವದ ಪೂರ್ಣತೆಯ ಏಕೀಕರಣತೆ (integration for total wholeness of personality)ಯನ್ನು ತೋರಿಸುತ್ತದೆ. ಶುಭರಾಯರು ಈ ಏಕೀಕರಣವನ್ನು ಮನೋಶಾಸ್ತ್ರದ ಮೂಲಕವಲ್ಲ, ಅದನ್ನು ಮಿಥ್ಯ ಕಥೆಗಳ ಪ್ರಕ್ರಿಯೆಯ ಮೂಲಕ ಹೊಂದಿದ್ದರು. ಈ ನರ–ನಾರೀ ಸಂಬಂಧದ ಸ್ವರಮೇಳವು ಎಲ್ಲಾ ವಿವಾಹ ಸಂಬಂಧಗಳಿಗೆ ತಳಹದಿಯಾಗಿದೆ. ನರ–ನಾರೀ ಸ್ವರಮೇಳವು ಪುರುಷ–ಪ್ರಕೃತಿಗಳ ಒಂದು ಬೃಹತ್ ಸ್ವರಮೇಳ. ಇದು ಜಡ–ಚೇತನಗಳ ಆಧ್ಯಾತ್ಮಿಕ ವಿವಾಹ ಸಂಬಂಧ.

ಶ್ರೀ ಶುಭರಾಯರು ಈ ಆಧ್ಯಾತ್ಮಿಕತೆಯನ್ನು ತೀವ್ರವಾಗಿ ಅನುಭವಿಸುತ್ತಿದ್ದುದರಿಂದ ಹಾಗೂ ರಾಧೆ–ಕೃಷ್ಣ ಈ ಎರಡು ಧ್ರುವಗಳ ಸ್ವರಮೇಳದಿಂದ ಎಡೆಬಿಡದೆ ಆನಂದದಿಂದ ಚಿತ್ರರಚನೆ ಮಾಡುತ್ತಿದ್ದರು ಹಾಗೂ ಸ್ವರ್ಗದ ಲಯವನ್ನು ಅಲ್ಲಿ ಶಾಶ್ವತವಾಗಿ ನರ್ತಿಸುವ ರಾಧೆ–ಕೃಷ್ಣರ ಜೋಡಿಯ ಮೂಲಕ ಪ್ರಕಟಿಸುತ್ತಿದ್ದರು. ರಾಧೆಯ ಆಂತರಿಕ ಕರೆಯು, ನಮ್ಮೆಲ್ಲರ ಅಂತರಿಕ ಪ್ರೇಮಿಯ ಕರೆ. ಅದು ನಮ್ಮ ಆತ್ಮದ (psycho) ಕರೆ. ಆಧ್ಯಾತ್ಮದ ಕರೆಯನ್ನು ಕೇಳುವುದೆಂದರೆ ಕೃಷ್ಣನ ಕೊಳಲನ್ನು ಕೇಳುವುದು. ಆ ಭಗವಂತನು ನಮ್ಮನ್ನೆಲ್ಲಾ ಎಚ್ಚರಿಸುವ, ಜಾಗ್ರತೀಕರಿಸುವ ಹಾಗೂ ಸೃಜನಶೀಲರಾಗಲು ಕೊಡುವ ಕರೆ.

ಸಂಧಿಪ್ರಕಾಶ ಪ್ರತಿಬಿಂಬ ಹಾಗೂ ಮೂಲಾಕೃತಿಯ ಏಕೀಕರಣದ ಮೂಲಕ ಸೃಜನಶೀಲತೆಯ ಪ್ರಕ್ರಿಯೆ

ಶ್ರೀ ಶುಭರಾಯರು ಕಲಾಕೃತಿಗಳನ್ನು ಹೇಗೆ ಮತ್ತು ಯಾಕೆ ಮಾಡಿದರೆಂಬ ಪ್ರಶ್ನೆಯನ್ನು ನಾವು ಗಹನವಾಗಿ ವಿಚಾರ ಮಾಡುವಾಗ್ಗೆ, ನಮಗೆ ಚೇತನದ ಸಂಧಿಪ್ರಕಾಶ ಕ್ಷೇತ್ರದ ಪ್ರಮುಖ ಪಾತ್ರ ಹಾಗೂ ಇಂದ್ರಿಯ ಗೋಚರ ದೃಶ್ಯಗಳು, ಸ್ವಪ್ನಗಳು ಮತ್ತು ಕಲ್ಪನಾಶಕ್ತಿಯನ್ನು ಉಂಟುಮಾಡುವ ಪ್ರತಿಬಿಂಬ ಪ್ರಕ್ರಿಯೆಗಳು, ಗಾಢ ಮಿಥ್ಯ ಕಥೆಗಳು, ಧ್ಯಾನ ಪ್ರಕ್ರಿಯೆಗಳ ಪಾತ್ರಗಳು ಕಂಡುಬರುವವು. 'ಹಿಂದೂ ವ್ಯೂ ಆಫ್ ಆರ್ಟ್'ನಲ್ಲಿ ಮುಲ್ಕರಾಜ್ ಆನಂದರ 'ಪ್ರಿನ್ಸಿಪಲ್ಸ್ ಆಫ್ ಆರ್ಟಿಸ್ಟಿಕ್ ಪ್ರಾಕ್ಟಿಸಸ್' ಎಂಬ ಅಧ್ಯಾಯದಲ್ಲಿ ಡಾ. ಕುಮಾರಸ್ವಾಮಿಯವರ ವಿಷಯ ಉಲ್ಲೇಖಿಸಿದ್ದಾರೆ. ಅವರು ಏನನ್ನು ಬರೆದಿದ್ದಾರೆಂದರೆ "ಭಾರತೀಯ ಕಲಾಕಾರನು, ತನ್ನ ಕಲಾಕೃತಿಯ ಸೃಜನಶೀಲತೆ ಗೋಸ್ಕರ ಒಂದು ನಿರ್ಜನ ಸ್ಥಳಕ್ಕೆ ತೆರಳಿ, ಸ್ನಾನಾದಿಗಳನ್ನು ಮಾಡಿ, ಸ್ವಚ್ಛಗೊಂಡು, ತನ್ನ ಇಷ್ಟದೇವತೆಯನ್ನು ಪ್ರೇಮ, ಅನುಕಂಪ, ದಯೆ ಹಾಗೂ ಸಮದೃಷ್ಟಿ ಈ ನಾಲ್ಕು ಗುಣಗಳ ಮೇಲೆ ಧ್ಯಾನಿಸುತ್ತಾ, ಒಂದು ವಸ್ತುವಿನ ಮೂಲ ಸ್ವಚ್ಛತೆಯ ತತ್ವದ ವಿಷಯ ಮನನ ಮಾಡುತ್ತಾನೆ. ಆಮೇಲೆ ಅವನು ಏನನ್ನೂ ಪ್ರಾಪ್ತಗೊಳ್ಳುವಷ್ಟು ಶೂನ್ಯವಾಗಿರುತ್ತಾನೆ.'' ತನ್ನ ವ್ಯಕ್ತಿತ್ವವನ್ನು ಬದಿಗೊತ್ತಿಟ್ಟಾಗ ಮಾತ್ರ ಕಲಾಕಾರನಿಗೆ, ಇಷ್ಟ ದೈವವನ್ನು ಯಾಚಿಸಿ, ಆರಾಧಿಸಿ, ಇಂದ್ರಿಯಗೋಚರ ದೃಶ್ಯಗಳನ್ನು ನೋಡಿ, ಸೃಷ್ಟಿಸಲು ಹಾಗೂ ಕೃತೀಕರಿಸಲು ಸಾಧ್ಯ. ಭಾರತೀಯ ಕಲಾಕಾರನು, ಸೃಜನಶೀಲ ಕಾರ್ಯದ ಸ್ತೋತ್ರಕ್ಕೆ (source) ಮುಟ್ಟಬೇಕಾದರೆ ಅವನು ಧ್ಯಾನಕ್ರಿಯೆಯ ದ್ವಾರವನ್ನು ತಲುಪಬೇಕು. ಈ ಬಿ. ಹೇವಲ್ ಎಂಬವರೂ ಕೂಡಾ ತಮ್ಮ 'ದ ಐಡಿಯಲ್ಸ್ ಆಫ್ ಇಂಡಿಯನ್ ಆರ್ಟ್' ನಲ್ಲಿ 'ಭಾರತೀಯ ಕಲೆಯಲ್ಲಿ ನನ್ನ ಅಭಿರುಚಿಯು ಕೇವಲ ಪುಸ್ತಕೀಯವಲ್ಲ ಅಥವಾ ಪುರಾತತ್ವ ಶಾಸ್ತ್ರದ (archeological) ವಿಧಾನವೂ ಅಲ್ಲ. ಭಾರತದ ಕಲೆಯು ಇನ್ನೂ ಜೀವಂತವಾಗಿದೆ. ಅದರಲ್ಲಿ ಭಾರತಕ್ಕೆ ಮಾತ್ರವಲ್ಲ, ಇಡೀ ವಿಶ್ವಕ್ಕೆ ಬೇಕಾದ ಅದ್ವಿತೀಯ

ಹಾಗೂ ಮಹತ್ವದ ಅಪಾರ ಶಕ್ತಿಗಳಿವೆ. ವೇದಗಳ ವಿಚಾರದಿಂದ ಉಂಟಾಗುವ ಸ್ಫೂರ್ತಿಯು, ಭಾರತೀಯ ಜೀವನ ಹಾಗೂ ಕಲೆಯನ್ನು ವ್ಯಾಪಿಸಿದೆ.''

ಡಾ. ಯಾಂಗ್‌ರವರು ತಮ್ಮ "ಸೈಕೊಲಜಿ ಆಫ್ ಅನ್‌ಕಾನ್ಸಿಯಸ್''ನಲ್ಲಿ ಹೀಗೆ ವರ್ಣಿಸಿದ್ದಾರೆ. "ಕಲೆಯ ಕಾರ್ಯವನ್ನು ತಿಳಿಯಬೇಕಾದರೆ ಪ್ರಾಥಮಿಕವಾಗಿ ಮನಸ್ಸಿನ ಏಕಮುಖ ಧ್ಯಾನವು ಅತ್ಯಗತ್ಯ. ಸೃಜನಶೀಲ ಮನವು, ಕಾರ್ಯಗಳನ್ನು ಮುಗಿಸುವ ಮೊದಲು ಹಿಂದಕ್ಕೆ ಹೋಗಿ ಮತ್ತು ಅಂತರಾಳಕ್ಕೆ ಇಳಿದು, ಅಲ್ಲಿ ಶಕ್ತಿಯನ್ನೆ ಒಟ್ಟು ಸೇರಿಸಿ ಒಂದು ಕ್ಷಣ ಜೀವನದ ಸ್ತೋತ್ರಕ್ಕೆ ಧುಮುಕಿ, ತನ್ನ ಮಾತೃವಿನಿಂದ ಇನ್ನೂ ಜಾಸ್ತಿ ಶಕ್ತಿಯನ್ನು ಪಡೆಯುತ್ತದೆ.''

ಡಾ. ಕುಮಾರಸ್ವಾಮಿಯವರು ಏನು ಹೇಳುತ್ತಾರೆಂದರೆ "ಹಿಂದೂಗಳು, ಪತಂಜಲಿ ಸೂತ್ರ ಹಾಗೂ ತಂತ್ರಗಳಲ್ಲಿರುವ ಯೋಗ ತತ್ವಗಳನ್ನು ಸರಳವಾಗಿ, ಉಚ್ಚಸ್ತರೀಯ ಮಾನಸಿಕ ಹಾಗೂ ಸೃಜನಶೀಲ ಸ್ಥಿತಿಗಳನ್ನು ಮುಟ್ಟುವಂತಾಗಲು, ಅವುಗಳನ್ನು ಅತೀ ಸಾದಾ ಹಾಗೂ ಕ್ರಮಬದ್ಧವಾಗಿ ಮಾಡಿದ್ದಾರೆ'' ಎಂದು.

ಶುಭರಾಯರ ಜೀವನ ಹಾಗೂ ಕಲೆ ಮತ್ತು ಅವರ ಚಿತ್ರಕಲೆಗಳಲ್ಲಿ ಬೃಹತ್ ವೇದಗಳ ಸ್ಫೂರ್ತಿಯು ಪಸರಿಸಿದ್ದನ್ನು ನಾವು ಕಾಣಬಹುದು. ಶುಭರಾಯರು ಯಾವ ರೀತಿಯ ಪ್ರಕ್ರಿಯೆಗಳಿಗೊಳಗಾದರೆಂಬುದನ್ನು ನಾವು ಅಭ್ಯಸಿಸಿದರೆ ನಾವೂ ಕೂಡಾ ಸೃಜನಶೀಲತೆಯ ಆನಂದವನ್ನು ಸವಿಯಲು ಸಾಧ್ಯ ಹಾಗೂ ಮನವನ್ನು ಪುನರುಜ್ಜೀವಿಸಿ ಅದನ್ನು ಸಂತ ಮಟ್ಟಕ್ಕೆ ಏರಿಸಬಹುದು.

ಕೃಷ್ಣ ಆಖ್ಯಾಯಿಕೆ

ನಾವು ಹಿಂದೆ ಓದಿದಂತೆ ಕೃಷ್ಣನ ಕುರಿತಾದ ಕಥೆಗಳು, ಶುಭರಾಯರ ಚಿತ್ರಗಳಲ್ಲಿ ಪ್ರಮುಖವಾದ ಹಾಗೂ ನಿಶ್ಚಯಾತ್ಮಕ ಭೂಮಿಕೆಯನ್ನು ಪಡೆದಿವೆ. ಶುಭರಾಯರು ಸೃಜನಶೀಲತೆ ಹಾಗೂ ಆಧ್ಯಾತ್ಮಿಕತೆಯ ಮೇಲೆ ಕೇಂದ್ರೀಕೃತವಾದ ಈ ಲೇಖನಿಯ ಮೂಲಕ ಈ ಆಖ್ಯಾಯಿಕೆಯನ್ನು ತಿಳಿಯುವುದು ಉತ್ತಮ.

ಶ್ರೀಕೃಷ್ಣನು ಭಾರತದ ದೇವರುಗಳಲ್ಲಿ ಬಹಳ ಪ್ರಸಿದ್ಧಿ ಪಡೆದ, ವಿಶ್ವಮಾನ್ಯ ಹಾಗೂ ಭಗವಾನ್ ವಿಷ್ಣುವಿನ ಎಂಟನೇ ಅವತಾರವೆಂದು ವಂದಿಸಲ್ಪಟ್ಟಿದ್ದಾನೆ. ತನ್ನದೇ ವೈಶಿಷ್ಟ್ಯವನ್ನು ಪಡೆದ ಭಗವಾನ್ ಕೃಷ್ಣನು ಏಕ ಭಕ್ತಿಪಂಥಗಳಿಗೆ ಕೇಂದ್ರಬಿಂದುವಾಗಿದ್ದಾನೆ. ಈ ಪಂಥಗಳು ಕಳೆದ ಹಲವಾರು ಶತಮಾನಗಳಲ್ಲಿ ಧಾರ್ಮಿಕ ಕವಿತೆಗಳು, ಸಂಗೀತ ಮತ್ತು ಚಿತ್ರಗಳ ಧನರಾಶಿಯನ್ನು ತಯಾರು ಮಾಡಿದ್ದಾರೆ. ಕೃಷ್ಣನ ಮಿಥ್ಯಕಥೆಗಳ ಮೂಲಸ್ತೋತ್ರವೆಂದರೆ ಮಹಾಭಾರತ, ಹರಿವಂಶ, ಭಾಗವತ ಪುರಾಣದ 10 ಹಾಗೂ 11ನೇ ಪುಸ್ತಕಗಳು ಮತ್ತು 12ನೇ ಶತಮಾನದ ಜಯದೇವರ ಗೀತ–ಗೋವಿಂದ ಕೃತಿಗಳು.

ಕೃಷ್ಣನ ಜೀವನವನ್ನು ನಾವು ನಾಲ್ಕು ಮುಖ್ಯ ಭಾಗಗಳಾಗಿ ವಿಭಜಿಸ ಬಹುದು :–

(1) ಬಾಲ್ಯಾವಸ್ಥೆ – ಈ ಅವಸ್ಥೆಯಲ್ಲಿ ಅವನ ಶಕ್ತಿಯ ಅದ್ಭುತ ಕೌಶಲ್ಯಗಳನ್ನು ತೋರಿಸಿದ್ದು.

(2) ತರುಣಾವಸ್ಥೆ – ಇದರಲ್ಲಿ ಅವನು ಗೋಪಿಯರೊಡನೆ ಬಹಳವಾಗಿ ಶೋಭಿಸಿದನು.

(3) ಪ್ರಬುದ್ಧನಾಗಿ – ಅವನು ಯಾವ ಕಾರ್ಯಕ್ಕೋಸ್ಕರ ಅವತರಿಸಿದನೋ ಆ ಕಾರ್ಯಗಳನ್ನು ನೆರವೇರಿಸಿದ್ದ.

(4) ಮಧ್ಯ ವಯಸ್ಕನಾಗಿ – ಮಹಾಭಾರತ ಯುದ್ಧದಲ್ಲಿ ಅರ್ಜುನನ ಸಾರಥಿಯಾಗಿ ಧರ್ಮ ಹಾಗೂ ಭಕ್ತಿಯ ಮೇಲೆ ಭಗವದ್ಗೀತೆಯನ್ನು ಉಪದೇಶಿಸಿ, ಯುದ್ಧದಲ್ಲಿ ಪಾಲ್ಗೊಂಡದ್ದು.

ಶ್ರೀ ಶುಭರಾಯರ ಚಿತ್ರಗಳು, ಅವನ ಬಾಲ್ಯಾವಸ್ಥೆ ಹಾಗೂ ಪ್ರೌಢಾವಸ್ಥೆಯನ್ನು ಕೇಂದ್ರೀಕೃತವಾಗಿ ಮಾಡಲ್ಪಟ್ಟಿವೆ. ಬಾಲಕ ಕೃಷ್ಣನು ಕೈ, ಮೊಣಕಾಲುಗಳ ಮೇಲೆ ಚಲಿಸುತ್ತಾ ಅಥವಾ ಆನಂದದಿಂದ ಬೆಣ್ಣೆಯ ಚೆಂಡನ್ನು ಕೈಯಲ್ಲಿಟ್ಟುಕೊಂಡು ಕುಣಿಯುತ್ತಾ ಇರುವ ದೃಶ್ಯವನ್ನು ಚಿತ್ರಗಳ ಮೂಲಕ ರೇಖಿಸಿದ್ದಾರೆ. ತರುಣ ಕೃಷ್ಣನು ಆಕರ್ಷಕ ದೈವ ಪ್ರೇಮಿ (ಹೆಚ್ಚಿನ ಚಿತ್ರಗಳು ಈ ಅವಸ್ಥೆಯವು). ಅವನು ಗೋಪಿಕಾ ಕನ್ಯೆಯರಿಂದ ಹಾಗೂ ಗೋವುಗಳಿಂದ ಸುತ್ತು ಹಾಕಲ್ಪಟ್ಟು ಕೊಳಲನೂದುವ ದೃಶ್ಯ. ಶ್ರೀ ಶುಭರಾಯರ ಹೆಚ್ಚಿನ ಚಿತ್ರಗಳು ಕೃಷ್ಣ–ಗೋಪಿಯರ ಆತ್ಯಾನಂದದ ಸ್ಥಿತಿಯ ಮೇಲೆ ಆಧಾರಿತವಾಗಿವೆ. ಈ ಪ್ರೇಮವು ಐಚ್ಛಿಕವಾಗಿದ್ದು, ತಮ್ಮನ್ನು ತಾವು ಮರೆತ ಸ್ಥಿತಿಯಲ್ಲಿವೆ. ಕೃಷ್ಣನು ಪ್ರೇಮಿಸುತ್ತಾನೆ ಹಾಗೂ ಪ್ರೇಮಿಸಲ್ಪಡುತ್ತಾನೆ. ಅವರ ಧ್ಯಾನದಲ್ಲಿ, ಆನಂದವಲ್ಲದೆ, ಇನ್ನೇನೂ ಇರಲಿಲ್ಲ. ಇದೇ ಕೃಷ್ಣ ಪಂಥೀಯರ ಹಾಗೂ ಮಿಥ್ಯ ಕಥೆಗಳ ತಳಹದಿ. ಯಾವನು ಈ ಮಧುರ ಭಕ್ತಿಯ ಭಾವವನ್ನು ಅನುಭವಿಸುತ್ತಾನೋ, ಅವನಿಗೆ ಶುಭರಾಯರ ರಾಧೆ–ಕೃಷ್ಣ–ಗೋಪಿಯರು–ರಾಸಲೀಲೆಗಳ ಮೇಲಣ ಚಿತ್ರಗಳ ದ್ವಾರವು ಸದಾ ತೆರೆದಿವೆ. ಶುಭರಾಯರು 1780ರಿಂದ 1820ರವರೆಗೆ ಸೋಲಾಪುರದಲ್ಲಿ ಈ ಚಿತ್ರಗಳನ್ನು ರಚಿಸುವ ಕಾಲದಲ್ಲಿ ಕಾಂಗ್ರಾವೇಲಿ, ಬಾಸೋಲಿ, ಕಲಾಮು ಹಾಗೂ ರಾಜಸ್ತಾನಿ ಕಲಾವಿದರು ಕೂಡಾ ಇದೇ 'ಕೃಷ್ಣ–ಆಖ್ಯಾಯಿಕೆ'ಗಳನ್ನು ಚಿತ್ರಿಸಿ ಅನೇಕ ಅತೀ ಉತ್ಕೃಷ್ಟ ಕಿರುಚಿತ್ರಗಳನ್ನು ತಯಾರಿಸಿದ್ದಾರೆ.

ಭಾರತದ ಚಿಕಣಿ ಚಿತ್ರಗಳು ಅಮೂಲ್ಯವಾದವುಗಳು. ಏಕೆಂದರೆ ಅವುಗಳಲ್ಲಿ ಸಂವೇದಕ ಹಾಗೂ ಆಧ್ಯಾತ್ಮಿಕ (aesthetic and spiritual) ಮೋಹಕ ಶಕ್ತಿ ಇದೆ. ಅವುಗಳ ಮಹತ್ವ ಹಾಗೂ ಮೂಲ ಬೆಲೆಯನ್ನು ಭಾರತದಲ್ಲಿ ಮಾತ್ರವಲ್ಲ, ಇಡೀ ವಿಶ್ವದ ಕಲಾಪ್ರಪಂಚದಲ್ಲೇ ಗುಣಗ್ರಹಣ ಮಾಡಿದ್ದಾರೆ ಹಾಗೂ ತಿಳಿದಿದ್ದಾರೆ. ಪ್ರಸಿದ್ಧ

ವಿದ್ವಾಂಸರು, ಕಲಾವಂತರು, ಕಲಾವಿಮರ್ಶಕರು, ಚರಿತ್ರಕಾರರು ಶುಭರಾಯರನ್ನು ಪ್ರೇರೇಪಿಸಿರುವ ''ಕೃಷ್ಣ ಆಖ್ಯಾಯಿಕೆ''ಯ ಆಧಾರದಲ್ಲಿ ಪಹಾಡಿ, ಕಾಂಗಾರ, ಬಾಸೋಲಿ ಹಾಗೂ ಕಿಶನ್‌ಗರ್ ಚಿಕಣಿ ಚಿತ್ರಗಳನ್ನು ಅಧ್ಯಯಿಸಿ ಬರೆದಿದ್ದಾರೆ.

ಶುಭರಾಯರ ಹಲವು ಚಿತ್ರಗಳು ಉನ್ಮಾದಯುಕ್ತವೋ ಹೇಗೆ?

ದೇಹ ಹಾಗೂ ಆತ್ಮದ–ಅನಾದಿಕಾಲದಿಂದ ಇವುಗಳ ವಿರೋಧಾಭಾಸ (paradox)

ಕೃಷ್ಣನು ಪ್ರಾಯಕ್ಕೆ ಬಂದಂತೆ ಅವನ ಸೌಂದರ್ಯವು ಯೌವನದ ಮೋಹಕ ಶಕ್ತಿಯನ್ನು ಹೊಂದಿದ್ದರಿಂದ ಗ್ರಾಮೀಣ ಕನ್ಯೆಯರಿಗೆ ಅದನ್ನು ತಡೆಯಲು ಅಸಾಧ್ಯವಾಗಿತ್ತು. ಮೇಲಿಂದ ಮೇಲೆ ಕೇಳಿಬರುವ ಅವನ ಕೊಳಲಿನ ಮಧುರ ಧ್ವನಿಗಳು, ಅವರಲ್ಲಿ ತುಂಬಿದ್ದುವು. ಅವರಲ್ಲಿ ನಿರಾಶಾಯುಕ್ತ ತೀವ್ರ ಇಚ್ಛೆಯುಂಟಾಗಿತ್ತು. ಕೃಷ್ಣನು ಅದರ ತೀವ್ರ ವಾಸನೆಗಳಿಗೆ (passions) ಹೇತುವಾದನು. ಚಳಿಗಾಲವು ಪ್ರಾರಂಭವಾದಾಗ, ಯಮುನಾ ನದಿಯಲ್ಲಿ ಗೋಪಿಯರು ಸ್ನಾನ ಮಾಡುವ ಸಂದರ್ಭದಲ್ಲಿ ಹುಲ್ಲಿನ ಮೇಲೆ ಬಟ್ಟೆಗಳನ್ನು ಕಳಚಿ ಇಟ್ಟು, ಗೋಪಿಯರು ನದೀ ನೀರಿನೊಳಗೆ ಹೊಕ್ಕರು. ಅವರು ನೀರೊಳಗಿನಿಂದ ಹೊರಕ್ಕೆ ಬಂದಾಗ ಅವರ ಬಟ್ಟೆಗಳು ಕಾಣೆಯಾಗಿದ್ದು ಕೃಷ್ಣನು ತನ್ನ ಸುವರ್ಣಮಯ ಬಟ್ಟೆ ಹಾಗೂ ನವಿಲುಗರಿಯುಕ್ತನಾಗಿ ಕದಂಬದ ವೃಕ್ಷದ ಮೇಲೆ ಶೋಭಿಸುತ್ತಿದ್ದನು. ಗೋಪಿಯರು, ವಿನಂತಿ ಹಾಗೂ ವಿರೋಧವನ್ನು ಪ್ರಕಟಿಸಿದಾಗ್ಯೂ ಕೃಷ್ಣನು ವಿಚಲಿತನಾಗಲಿಲ್ಲ. ತದನಂತರ ಗೋಪಿಯರು, ಲಾವಣ್ಯಪೂರ್ಣರಾಗಿ, ವಿವಸ್ತ್ರದಶೆಯಲ್ಲೇ ನೀರಿನಿಂದ ಮೇಲಕ್ಕೆ ಬಂದರು. ಈ ದೃಶ್ಯವನ್ನು ಕಲಾಕಾರರು, ಪುರಾತನ ಕಾಲದಿಂದಲೂ, ಅಮರವಾಗಿ ಚಿತ್ರಿಸಿದ್ದಾರೆ. ಶ್ರೀ ಶುಭರಾಯರೂ ಕೂಡಾ ಇದನ್ನು ಅತೀ ಸುಂದರವಾಗಿ ಸಾಹಸದಿಂದ ಚಿತ್ರಿಸಿದ್ದಾರೆ. ಇನ್ನೊಂದು ಘಟನೆಯೆಂದರೆ – ಶರದ್‌ಋತುವು ಬರುವಾಗದ್ದು. ರಾತ್ರಿಯ ಸೌಂದರ್ಯವು ಪುರಾತನ ವಾಸನೆಗಳನ್ನು ಕದಡಿಸಿದುವು ಹಾಗೂ ಕೃಷ್ಣನು ಗ್ರಾಮೀಣ ಕನ್ಯೆಯರಿಗಿತ್ತ ವಚನವನ್ನು ಪಾಲಿಸಲು ನಿಶ್ಚಯ ಮಾಡಿದನು. ಅವನು ಕೊಳಲನ್ನು ನುಡಿಸಲು ಆರಂಭಿಸಿದ್ದೇ ಸರಿ ಕನ್ಯೆಯರು ಈ ಪ್ರೇಮದ ಕರೆಯನ್ನು ಕೇಳಿ ಪುಲಕಿತರಾದರು. ಅವರು ವನಕ್ಕೆ ಬಂದಾಗ ಕೃಷ್ಣನು ಭವ್ಯವಾಗಿ ಅವರ ಮುಂದೆ ನಿಂತಿದ್ದನು. ಆನಂದ ಹಾಗೂ ಪ್ರೇಮವಶರಾಗಿ ಅವರು ತಮ್ಮ ಲಜ್ಜೆಯನ್ನು ಬದಿಗೊತ್ತಿ ಒಬ್ಬ ಪ್ರೇಮಿಯನ್ನು ಇನ್ನೊಬ್ಬ ಪ್ರೇಮಿಯು ಒಂದುಗೂಡುವಂತೆ ಅವನನ್ನು ಸೇರಿದರು. ಎಲ್ಲಾ ಕನ್ಯೆಯರು ತಮ್ಮ ಕೈಗಳನ್ನು ಹಿಡಿದುಕೊಂಡು ವೃತ್ತಾಕಾರವಾಗಿ ಮೈಮರೆಯುವ ಆನಂದದ ಪರಾಕಾಷ್ಠೆಯಲ್ಲಿ ನಲಿದರು. ಚಂದ್ರನ ಬೆಳಕು ಎಂದಿಗಿಂತ ಹೆಚ್ಚು ಹೆಚ್ಚಾಗಿ ವನವನ್ನೂ, ರಾತ್ರಿಯ

ತಂಗಾಳಿಯನ್ನೂ ತುಂಬಿ ತುಳುಕಾಡಿತು. ಶ್ರೀ ಶುಭರಾಯರು ಈ ವಿಷಯವನ್ನು ಬಹಳ ಆಕರ್ಷಕವಾಗಿಯೂ, ಉನ್ಮಾದಯುಕ್ತವಾಗಿಯೂ ಚಿತ್ರೀಕರಣ ಮಾಡಿದ್ದಾರೆ.

ನಾವು ಈ ಎರಡು ಘಟನೆಗಳನ್ನು ಹೇಗೆ ನೋಡುತ್ತೇವೆ?

ನಾವು ಕೃಷ್ಣ ಹಾಗೂ ಗೋಪಿಯರ ನರ್ತನವನ್ನು ಅವರ ಪ್ರೇಮ ಕ್ರೀಡೆಯನ್ನೂ, ವಾಸನಾಯುಕ್ತವೆಂದೂ, ವಿಷಯ ಸಂಬಂಧಿತವೆಂದೂ ದೈಹಿಕವೆಂದೂ ನೋಡುವೆವಾ ಅಥವಾ ಭವ್ಯ, ಉದಾತ್ತ ಹಾಗೂ ದೈವೀ ಭಾವದಿಂದ ನೋಡುತ್ತೇವಾ? ವೈಷ್ಣವರ ಅನುಭವದಲ್ಲಿ ಕೃಷ್ಣನ ಕೊಳಲ ಗಾನವೆಂದರೆ ಮಾನವರ ಹಾಗೂ ಗ್ರಾಮೀಣ ಕನ್ಯೆಯರ ಆತ್ಮಗಳು, ಪ್ರಪಂಚದ ಎಲ್ಲಾ ಬಂಧನಗಳನ್ನು ಬಿಟ್ಟು ಬಿಟ್ಟು ಭಗವಂತನ ಕರೆಗೆ 'ಓ' ಗೊಟ್ಟು, ಅವನನ್ನು ಅತಿಶಯ ವಂದಿಸುವುದು. ಜೀವನದ ನಾಟಕಗಳು ಹಾಗೂ ಅತ್ಯಂತ ವಾಸನಾಯುಕ್ತ ಅಂತರಿಕ ಕ್ಷಣಗಳು (passion) ಆಧ್ಯಾತ್ಮಿಕ ಅನುಭವವೆಂದು ಪರಿಗಣಿಸಲ್ಪಡುತ್ತವೆ. ಇದು ಇಬ್ಬರು ಪ್ರೇಮಿಗಳ ಅತೀ ನಿಕಟ ಸಂಬಂಧದ ಮೂಲಕ ಪ್ರತಿಬಿಂಬಿಸುತ್ತದೆ. ಇಲ್ಲಿ ರಾಧೆಯು ಕೃಷ್ಣನ ಸೌಂದರ್ಯದಿಂದ ಆಕರ್ಷಿಸಲ್ಪಟ್ಟು ಅವನೂ ಅವಳಿಂದ ಆಕರ್ಷಿಸಲ್ಪಡುತ್ತಾನೆ. ಅವರ ವಿಯೋಗದಲ್ಲಿ ವಿರಹವಿದೆ ಹಾಗೂ ಮಿಲನವೂ ಇದೆ. ಅವರ ಪ್ರೇಮದ ವಿವಿಧ ಸ್ವರೂಪಗಳು ಅಗಣಿತ ಕವಿತೆಗಳಿಗೆ ಹಾಗೂ ಕವಿಗಳಿಗೆ ಅಮರಕೀರ್ತಿಯ ವಿಷಯವಾಗಿವೆ. ವಿದ್ಯಾಪತಿ, ಚಾಂದಿದಾಸ್, ಮೀರಾಬಾಯಿ, ವಲ್ಲಭಾಚಾರ್ಯ, ಸೂರ್‌ದಾಸ್ ಮತ್ತು ಕೃಷ್ಣದಾಸ್ ಹಾಗೂ ಇತರ ಕವಿಗಳು ರಾಧೆ–ಕೃಷ್ಣರ ನಡುವಣ ಪ್ರೇಮದ ಗೀತೆಯನ್ನು ಹಾಡಿದ್ದಾರೆ. ವೈಷ್ಣವ ವಾಙ್ಮಯದ ಪ್ರಕಾರ, ನಿಸರ್ಗದ ವೃಕ್ಷಗಳಲ್ಲಿ ಹೂ ಬಿಡುವುದು, ಹಕ್ಕಿಗಳು ಹಾಡುವುದರಲ್ಲಿ ಒಂದು ಉನ್ಮಾದಯುಕ್ತ ಆನಂದವಿದೆ. ಈ ವಾಙ್ಮಯಗಳಲ್ಲಿ ಋತುಗಳು, ಸರೋವರಗಳು, ನದಿಗಳು ಮಳೆಗಾಲ ಹಾಗೂ ಶರದ್‌ಋತುವಿನ ಚಂದ್ರಾದಿಗಳ ಸ್ಪಷ್ಟ ವರ್ಣನೆಗಳಿವೆ. ವೈಷ್ಣವ ಕಲಾಕಾರರು, ಕವಿಗಳು, ಸಂತರು ಈ ಉನ್ಮಾದಯುಕ್ತ ಆನಂದವನ್ನು ಮನಗಂಡಿದ್ದಾರೆ ಹಾಗೂ ಇವುಗಳಿಗೆ ಪ್ರೇರಕವಾದ ದೈವೀ ಶಕ್ತಿಗಳನ್ನು ಅರಿತಿದ್ದಾರೆ.

ಕಿಶನ್‌ಘರ್ ಚಿತ್ರಗಳಲ್ಲಿ ಪ್ರೇಮಿಯರಾದ ರಾಧೆ–ಕೃಷ್ಣರ ಮಿಲನವು ಒಂದುಗೂಡಿ ಐಕ್ಯತೆಯನ್ನು ಪಡೆಯುತ್ತದೆ. ಇದು ವೈಷ್ಣವರ ಮನೋಭಾವ. ರಾಧೆ–ಕೃಷ್ಣರನ್ನು ಅವರು ರಮಣೀಯ ಭೂಪ್ರದೇಶ ಹಾಗೂ ವಾಸ್ತುಶಿಲ್ಪದ ಹಿನ್ನೆಲೆಯಲ್ಲಿ ಚಿತ್ರಿಸಿದ್ದಾರೆ. ಇವುಗಳಲ್ಲಿ ಸಂಪೂರ್ಣ ಶರಣು ಹೊಂದುವುದರಿಂದ ಭಗವಂತನ ಪರವಾದ ವೈಯಕ್ತಿಕ ಭಕ್ತಿಯ ಭಾವವು ಹೊರಸೂಸುವುದನ್ನು ನಾವು ಕಾಣಬಹುದು. ಇಲ್ಲಿ ಸೌಂದರ್ಯದಿಂದ ಕೂಡಿದ ಉನ್ಮಾದಯುಕ್ತ ರಾಧೆಯ ರೂಪವೂ, ಭಾವಗಳನ್ನು ಜಾಗ್ರತೀಕರಿಸುವ (evocative) ಭೂಪ್ರದೇಶಗಳೂ, ಉನ್ಮಾದತೆ ಹಾಗೂ ದೈವಿಕ

ಭಾವನೆಗಳನ್ನು ಸಮನ್ವಯಿಸಿ, ಭಕ್ತಿಯ ಭಾವವನ್ನು ಉಂಟು ಮಾಡಲೋಸ್ಕರ ಉಪಯೋಗಿಸಲ್ಪಟ್ಟಿವೆ. ರಾಧೆ ಹಾಗೂ ಕೃಷ್ಣರು – ಇಲ್ಲಿ ಶೃಂಗಾರದ ಪ್ರತೀಕರಲ್ಲ, ಅವರು ಶುದ್ಧ ಭಕ್ತಿಯ ಪ್ರತೀಕ. ಒಬ್ಬ ನಿಜವಾದ ಭಕ್ತನು ರಾಧೆಯೊಡನೆ ಪೂರ್ಣವಾಗಿ ಒಂದಾಗುವುದು ಯಾಕೆಂದರೆ ಗರ್ವ, ಅಹಂಕಾರ ಹಾಗೂ ಸ್ವೈರಾಚಾರ, ಒಂದೂ ಭಗವಂತನ ಪ್ರೇಮವನ್ನು ಪಡೆಯಲು ಉಪಯುಕ್ತವಲ್ಲ ಎಂಬ ಅನುಭವವನ್ನು ಪಡೆಯಲು. ಅಖಂಡ ಭಕ್ತಿಯು ಮಾತ್ರ ಭಗವಂತನ ಕೃಪೆಯ ಪಥವನ್ನು ತೋರಿಸಬಲ್ಲದು. ಈ ಚಿತ್ರಗಳಲ್ಲಿ ಸ್ತ್ರೀಯರ ಭೂಮಿಕೆಯು ಪ್ರಾಮುಖ್ಯವಾಗಿವೆಯೆಂಬುದು ನಿಜ. ಆದರೆ ಇದೊಂದು ಸೌಂದರ್ಯ ಹಾಗೂ ಆತ್ಮಕ್ಕೆ ಅರ್ಪಿಸಲ್ಪಟ್ಟ ಕಲೆ. ವಲ್ಲಭಾಚಾರ್ಯರ ಅನುಯಾಯಿಗಳಾದ ವೈಷ್ಣವರು 'ಭಗವಂತನ ಕೃಪೆಯ ಪಥ' ಎಂದು ಕರೆಯಬಹುದಾದ ದಾರಿಯನ್ನು ಅನುಸರಿಸಿದ್ದಾರೆ.

ಪುಷ್ಟಿ ಮಾರ್ಗ

ಪುಷ್ಟಿ ಮಾರ್ಗದಲ್ಲಿ ಉನ್ಮಾದಕತೆ ಹಾಗೂ ದೈವಿಕತೆ ಇವೆರಡೂ ಒಟ್ಟು ಸೇರಿ ಒಂದನ್ನೊಂದು ಸಮತೋಲಿಸುತ್ತದೆ ಹಾಗೂ ದೇಹ ಮತ್ತು ಆತ್ಮಗಳ ನಡುವಣ – ಅನಾದಿಕಾಲದಿಂದ ಬಂದ ವಿರೋಧಾಬಾಸ (eternal paradox)ಯುತ ವಿವಾದದಿಂದ ಮೇಲೇರುತ್ತದೆ. ಉನ್ಮಾದಯುಕ್ತವೋ ಅಥವಾ ದೈವಿಕವೋ ಎಂಬ ವಿಚಾರ ಸರಣಿಯು ದ್ವೈತ ಮನೋವೃತ್ತಿಯಿಂದ ಉಂಟಾಗುವಂಥಾದ್ದು. ಇದರಿಂದಾಗಿ ಅದೋ–ಇದೋ ಎಂಬ ಭೇದ–ಭಾವ ಬರುತ್ತದೆ. ಏಕಾತ್ಮಕ ಚೇತನದಲ್ಲಿ (integral consciousness) ಭೇದ–ಭಾವಗಳು, ಧ್ರುವೀಕರಣ, ವಿಭಾಗೀಕರಣಗಳು, ಮಿಲನದ ಪ್ರಕ್ರಿಯೆಯ ಮೂಲಕ ಉದಾತ್ತೀಕರಣವನ್ನು (transcended) ಹೊಂದುತ್ತವೆ. ಈ ಸ್ಥಿತಿಯು ಉನ್ಮಾದಕತೆ ಹಾಗೂ ಭವ್ಯತೆಗಿಂತ ಮೇಲಿನ ಸ್ಥಿತಿ. ಈ ಉದಾತ್ತೀಕರಣದ ಸ್ಥಿತಿಯಲ್ಲಿ ಹಲವಾರು ವಿರೋಧಾಭಾಸಯುಕ್ತ ಸಮಸ್ಯೆಗಳು ಬಗೆಹರಿಯಲ್ಪಡುತ್ತವೆ.

ಭಕ್ತಿ–ರಸ–ಭಾವದ ಸಿದ್ಧಾಂತ

1985–86ರಲ್ಲಿ ಸೇನ್ ಫ್ರಾನ್ಸಿಸ್ಕೋದಲ್ಲಿ ನಡೆದ 'ಫೆಸ್ಟಿವಲ್ ಆಫ್ ಇಂಡಿಯಾ'ದ ಪ್ರದರ್ಶನದಲ್ಲಿ ಭಾರತೀಯ ಕಲೆಯನ್ನು ಸಾದರಪಡಿಸಿದ್ದರು. ಪಂಜಾಬ್ ಯುನಿವರ್ಸಿಟಿಯ ಡಾ. ಬಿ.ಎನ್. ಗೋಸ್ವಾಮಿಯವರು ಭಾರತೀಯ ಕಲೆಯ ಬಗೆಗೆ ಹೊಸ ತರಹದ ಮಾರ್ಗವನ್ನು ಸೂಚಿಸಿದ್ದರು. ಹಿಂದಕ್ಕೆ ನಾಟ್ಯ ಕಲೆಗಳಲ್ಲಿ ಉಪಯೋಗಿಸಲ್ಪಡುತ್ತಿದ್ದ ಒಂಬತ್ತು ವಿಧದ ರಸ ಅಥವಾ ಭಾವಗಳನ್ನು ಮಂಡಿಸಿದ್ದರು. ಈ ಪ್ರದರ್ಶಿನಿಯೆಲ್ಲ ರಸ ಸಿದ್ಧಾಂತವನ್ನು ಅನುಕರಿಸಿ ಶಿಲ್ಪಕಲೆ ಹಾಗೂ ಚಿತ್ರಗಳನ್ನು ಪ್ರತ್ಯೇಕಿಸಿ ವಿವಿಧ ಘಟಕಗಳನ್ನು ತಯಾರು ಮಾಡಿದ್ದು ಒಂದು ವಿಶಿಷ್ಟ ರೀತಿ. ಇದರಿಂದಾಗಿ ವೀಕ್ಷಕರಿಗೆ

"ರಸ"ದ ಉಪಯೋಗವು ಭಾರತೀಯ ಕಲೆಯನ್ನು ಅರಿಯಲು ಹೆಚ್ಚಿಗೆ ಸಹಾಯ ವಾಗಬಹುದೆಂಬ ಅಭಿಪ್ರಾಯವಿತ್ತು. ವೀಕ್ಷಕರಿಂದ ಒಂದು ವಿಶಿಷ್ಟ ಪ್ರತಿಕ್ರಿಯೆಯು ಬರುವಂತೆ ಭಾರತೀಯ ಕಲಾವಿದರು ಪ್ರಯೋಗಿಸಿದ "ರಸವು" ಅವರು ಪ್ರಯೋಗಿ ಸಿದ ವಿಧಾನಗಳನ್ನು ತಿಳಿಯಲು ಸಹಾಯ ಮಾಡುವುದು. ಈ ಪ್ರದರ್ಶನಕ್ಕೆ "ಭಾರತೀಯ ಕಲೆಯಸಾರ"ವೆಂದು ಶೀರ್ಷಿಕೆಯನ್ನು ಕೊಡಲಾಗಿತ್ತು. ತರುವಾಯ ಕಮಿಟಿಯು ಅದೇ ಶೀರ್ಷಿಕೆಯ ಮೇಲೆ ಪ್ರದರ್ಶಿಲ್ಪಟ್ಟ ವಸ್ತುಗಳ ಮೇಲೆ ಒಂದು ಪುಸ್ತಕವನ್ನು ಪ್ರಕಟಿಸಿತು. ನನಗೆ ವೈಯಕ್ತಿಕವಾಗಿ, ಈ ಪುಸ್ತಕವು ಬಹಳ ಸ್ಪಷ್ಟೀಕರಣ ವನ್ನು ನೀಡಿದೆ ಹಾಗೂ ಭಾರತೀಯ ಕಲೆಯ ಪ್ರಸ್ತಾವನೆಗೆ ವಿಧಾನವನ್ನೂ ಕೊಟ್ಟಿದೆ.

"ರಸ"ವೆಂದರೇನು?

ರಸವೆಂದರೆ ಒಂದು ಜಡವಸ್ತುವಿನಲ್ಲಿರುವ ಚೈತನ್ಯವೆಂಬ ಸಾರ. ಅದು ತಿನ್ನುವಂಥಾ ಕ್ರಿಯೆಯ ರುಚಿ, ಗಂಧ, ಸ್ವಾದಕ್ಕೆ ಸಂಬಂಧಪಟ್ಟಿದೆ. ಸೂಕ್ಷ್ಮದಲ್ಲಿ ಹೇಳುವುದಾದರೆ ರಸವು ಆನಂದ ಉತ್ಕ್ರಾಟಾವಸ್ಥೆಯನ್ನು ತೋರಿಸುತ್ತದೆ. ಇಂತಹ ಆನಂದವನ್ನು ಚೈತನ್ಯವು ಮಾತ್ರ ಅನುಭವಿಸಲು ಸಾಧ್ಯ.

"ಸಾಹಿತ್ಯ ದರ್ಪಣ"ವನ್ನು ಬರೆದ ವಿಶ್ವನಾಥರ ಪ್ರಕಾರ ಕವಿತೆಯ ವ್ಯಾಖ್ಯೆಯನ್ನು ಮಾಡುವ ಪ್ರಕ್ರಿಯೆಯಲ್ಲಿ ರಸವನ್ನು ಪ್ರಯೋಗಿಸಲಾಗುತ್ತದೆ. ಯಾವುದೇ ಸೌಂದರ್ಯವನ್ನು ಅನುಭವಿಸುವುದೆಂದರೆ ರಸದ ಆಸ್ವಾದನೆ ಮಾಡುವುದು. ಅವು ಒಂದು ಕಲಾವಸ್ತುವನ್ನು ವೀಕ್ಷಿಸುವಾಗ ನಮ್ಮ ಮೇಲೆ ಒಂದು ಪೂರ್ಣ ಆಘಾತವಾಗುತ್ತದೆ (total impact), ಹೃದಯದಲ್ಲಿ ಒಂದು ಮಂಥನವಾಗುತ್ತದೆ ಹಾಗೂ ಕೊನೆಯಲ್ಲಿ "ಭಾವ"ವಂಬ ಪ್ರಮುಖ ಭಾವನಾಸ್ಥಿತಿಯು ಉದ್ಭವಿಸುತ್ತದ. ಒಂಬತ್ತು "ಭಾವ"ಗಳಲ್ಲಿ ಯಾವುದೇ ಒಂದು "ಭಾವ"ವು, ಮನದ ಮೇಲ್ಭಾಗಕ್ಕೆ ತೇಲಿಕೊಂಡು ಬರಬಹುದು. ಈ ಒಂಬತ್ತು ಭಾವಗಳು ಯಾವುವೆಂದರೆ – ಯತಿ (ಪ್ರೇಮ), ಹಸ (ಆನಂದ), ಶೋಕ, ಕ್ರೋಧ, ಉತ್ಸಾಹ, ಭಯ, ಜಿಗುಪ್ಸಾ, ವಿಸ್ಮಯ ಹಾಗೂ ಶ್ರಮ (ಸ್ಥಿತ ಪ್ರಜ್ಞತೆ) ಈ ಒಂಬತ್ತು ಭಾವಗಳು – ಮನಸ್ಥಿತಿಗಳು, ಆಯಾ "ಭಾವ" ಗಳನ್ನು ಸೃಷ್ಟಿಸಬಹುದು. ಈ ರಸಗಳಾವುವೆಂದರೆ – ಶೃಂಗಾರ, ಹಾಸ್ಯ, ಕರುಣ, ರೌದ್ರ, ವೀರ, ಭಯಾನಕ, ಭೀಬತ್ಸ, ಅದ್ಭುತ ಹಾಗೂ ಶಾಂತ. ಸ್ಥಾಯೀ ಮನೋಭಾವವು ಒಂದು ಪುಷ್ಪವಾದರೆ, ರಸವು ಅದರಲ್ಲಿ ಹುಟ್ಟಿ ಬರುವ ಫಲ.

ಈ ವರ್ಗೀಕರಣವು ಕಲೆಯನ್ನು ಹಾಗೂ ಮನುಷ್ಯನ ಸ್ವಾಭಾವಿಕ ಭಾವನೆ ಗಳನ್ನು ತಿಳಿಯಲು ಸಹಕಾರಿಯಾಗಿವೆ ಆದರೆ ಆಧ್ಯಾತ್ಮದ ರಾಜ್ಯದಲ್ಲಿ ನಮ್ಮ ಭಾವನೆಗಳು ಹಾಗೂ ಮಾನಸಿಕ ಅವಸ್ಥೆಗಳು ಬೇರೆ ಬೇರೆಯಾಗಿವೆ. ಭಕ್ತಿಯೋಗ

ದಲ್ಲಿ ಸಾಧಾರಣವಾಗಿ ಐದು ತರಹದ 'ರಸ'ಗಳದ್ದಾಗಿವೆ – ಶಾಂತ, ಪ್ರೀತಿ, ಸಖ್ಯ, ವಾತ್ಸಲ್ಯ ಹಾಗೂ ಪ್ರಿಯತಾ ಇಲ್ಲವೇ ಮಧುರ ರಸ. ಈ ರಸಗಳಿಂದ ಭಕ್ತಿಯ ಸಾಧನೆಯ ವಿವಿಧ ಪ್ರಕಾರಗಳು ಸಂತ–ಭಾವ, ದಾಸ್ಯ–ಭಾವ, ಸಖ್ಯ–ಭಾವ, ವಾತ್ಸಲ್ಯ–ಭಾವ ಹಾಗೂ ಮಾಧುರ್ಯ–ಭಾವ ಇವು ಬೆಳೆಯುತ್ತವೆ. ಭಕ್ತಿ–ಯೋಗವು ಬರೇ ಭಾವನೆಗಳಲ್ಲಿ ಕ್ರೀಡೆಯಲ್ಲ, ಅದು ಒಂದು ಆತ್ಮ–ಸಾಕ್ಷಾತ್ಕಾರದ ಮಾರ್ಗವಾಗಿದೆ.

ಶಾಂತ–ಭಾವ

ಶಾಂತಭಾವದಲ್ಲಿ ಭಕ್ತನ ಮನಸ್ಸು ಜ್ಞಾನದಿಂದ ತುಂಬಿ, ಭಾವನಾರಹಿತವಾಗಿರುತ್ತದೆ. ಅದನ್ನು ಪರಮಹಂಸ ಸನ್ಯಾಸಿಗಳು ಹಾಗೂ ಉಚ್ಚಸ್ತರೀಯ ಜ್ಞಾನಿಗಳು ಮಾತ್ರ ಅನುಭವಿಸುತ್ತಾರೆ ಹಾಗೂ ಅವರ ಭಾವನೆಗಳು ನಿಶ್ಚಲವಾಗಿರುತ್ತವೆ. ಭೀಷ್ಮನಲ್ಲಿ ಶಾಂತ ಭಾವವಿತ್ತು. ಶಾಂತಭಾವದ ಭಕ್ತನು, ಲೌಕಿಕದಲ್ಲಿ ಉದಾಸೀನನಾಗುತ್ತಾನೆ ಹಾಗೂ ಪೂರ್ಣತಃ ವಾಸನಾರಹಿತನಾಗಿರುತ್ತಾನೆ.

ದಾಸ್ಯಭಾವ

ಇದು ಪ್ರೀತಿರಸ ಇಲ್ಲವೇ ಪ್ರೇಮಭಕ್ತಿಯ ಪರಿಣಾಮ. ಇದು ಸಖ್ಯ, ವಾತ್ಸಲ್ಯ ಹಾಗೂ ಮಧುರ ರಸಗಳ ಅಂತಸ್ತಿನಲ್ಲಿ ಹರಿಯುವ ಸಾಮಾನ್ಯ ಘಟಕ. ದಾಸ್ಯ–ಭಕ್ತನು, ತಾನು ಭಗವಂತನಿಂದ ಕೀಳು ಎಂಬುದಾಗಿ ತಿಳಿಯುತ್ತಾನೆ. ಪರಮಾತ್ಮನು ಅವನ ಯಜಮಾನ ಹಾಗೂ ತಾನು ಎಲ್ಲರ ದಾಸ. ಭಗವಂತನಿಂದ ತಾನು ರಕ್ಷಿಸಲ್ಪಡಬೇಕೆಂದು ಅವನು ಇಚ್ಛಿಸುತ್ತಾನೆ ಅವನು ಕಿಂಕರನಾಗಿರುತ್ತಾನ. ದಾಸ ಭಕ್ತನು ತನ್ನ ರಕ್ಷಣೆಗೋಸ್ಕರ ಸದಾ ತನ್ನ ಯಜಮಾನನ್ನು ಪ್ರಾರ್ಥಿಸುತ್ತಾನೆ. ಹನುಮಂತನಲ್ಲಿ ರಾಮನ ಪರವಾಗಿ ದಾಸ್ಯ ಭಾವವಿತ್ತು.

ಸಖ್ಯ–ಭಾವ

ಅರ್ಜುನನಲ್ಲಿ ಸಖ್ಯಭಾವವಿತ್ತು. ಗೋಪಿಯರಲ್ಲಿ ರಾಧೆಯ ಪರವಾಗಿ ಸಖ್ಯ–ಭಾವವಿತ್ತು. ಅವು ರಾಧೆಯ ಮೂಲಕ ಕೃಷ್ಣನಲ್ಲಿ ವಿಲೀನಗೊಂಡಿದ್ದುವು. ಭಗವಂತನು ಸಖನು, ಮಿತ್ರನು, ನಾಟಕೀಯ ಭೂಮಿಕೆಯ ಮಿತ್ರನಾಗಿದ್ದನು. ಅವನು ಪ್ರೇಮಿಯಾಗಿದ್ದು, ರಕ್ಷಕ ಹಾಗೂ ಮಾರ್ಗದರ್ಶಕ. ಭಕ್ತನು ಭಗವಂತನ ವಿಯೋಗದಿಂದ ತೀವ್ರ ಹಾಗೂ ತೀಕ್ಷ್ಣವಾಗಿ ವೇದನೆಯನ್ನು ಹೊಂದುತ್ತಾನೆ. ಒಬ್ಬ ಮಿತ್ರನು ಇನ್ನೊಬ್ಬ ಮಿತ್ರನ ಸಂಗವಿಲ್ಲದೆ ಬದುಕಲಾರನು. ಮಿತ್ರರು ಒಟ್ಟಿಗೇ ತಿನ್ನುತ್ತಾರೆ, ಒಟ್ಟಿಗೇ ವಾಸ ಮಾಡುತ್ತಾರೆ.

ವಾತ್ಸಲ್ಯ ಭಾವ

ಯಶೋಧೆಗೆ ಕೃಷ್ಣನ ಪರವಾಗಿ ವಾತ್ಸಲ್ಯ ಭಾವವಿತ್ತು. ಇಲ್ಲಿ ಭಕ್ತನು ಭಗವಂತನನ್ನು ತನ್ನ ಮಗುವೆಂದು ಭಾವಿಸುವನು. ವಾತ್ಸಲ್ಯ–ಭಾವವೆಂದರೆ ಪುತ್ರ–ಪಿತಾ ಸಂಬಂಧ. ಮೇರಿಗೆ–ಜೀಸಸ್‌ನ ಪರವಾಗಿ ಈ ಭಾವವಿದ್ದಿತು.

ಮಾಧುರ್ಯ ಭಾವ

ರಸದ ಅತ್ಯುಚ್ಛ ಬೆಳವಣಿಗೆಯೆಂದರೆ ಮಾಧುರ್ಯ ಭಾವ. ಇದು ಇಬ್ಬರು ಪ್ರೇಮಿಗಳು ಪ್ರೇಮ ಮಾಡುವವರು ಹಾಗೂ ಪ್ರೇಮಿಸಲ್ಪಡುವವರ ನಡುವಿನ ಭೂಮಿಕೆ. ಮಧುರ–ರಸವೆಂದರೆ ಶುದ್ಧ ಆನಂದವು ಪ್ರಕಟವಾಗುವುದು – ಇಲ್ಲಿ ಪ್ರೇಮವು ಶಿಖರ ಬಿಂದುವನ್ನು ಮುಟ್ಟುತ್ತದೆ. ಇತರ ಪ್ರೇಮಗಳು ಅಂಶಿಕವಾಗಿವೆ. ಭಗವಂತನು ಪ್ರೇಮಮೂರ್ತಿಯಾಗಿದ್ದಾನೆ. ಅವನು ಅತ್ಯಂತ ಸುಂದರನೂ, ಪ್ರೇಮ ರೂಪಿಯೂ ಆಗಿದ್ದಾನೆ. ಭಗವಂತನ ಕಡೆಗೆ ಪ್ರೇಮವೆಂದರೆ ಭಾವನಾಪೂರ್ಣತೆ. ಮಧುರ ರಸವೆಂದರೆ – ಶೃಂಗಾರ ರಸದಲ್ಲಿರುವ ಇಂದ್ರಿಯದ ಉದಾತ್ತೀಕರಣ ಮಾಡಲ್ಪಟ್ಟ ಆದಿರೂಪ. ಅದು ದೈಹಿಕ ಕಾಮವಲ್ಲ, ಅದು ಶುದ್ಧ ಪ್ರೇಮ – ಇದರಲ್ಲಿ ಭೌತಿಕತೆ ಇಲ್ಲ. ಈ ರೀತಿಯ ಭಾವ ಅಥವಾ ಪ್ರೇಮವನ್ನು ಬೆಳೆಸುವುದು ಅತೀ ಕಠಿಣ. ಮಧುರ ರಸವು ಉಚ್ಛ ಮಟ್ಟದ ರಸ– ಏಕೆಂದರೆ ಇಲ್ಲಿ ಪರಂಪರಾಗತ ರೀತಿ–ರಿವಾಜುಗಳು, ಅನಿಶ್ಚಿತತೆ ರಕ್ಷಣೆ ಹಾಗೂ ವೈಯಕ್ತಿಕ ವಿಚಾರಗಳನ್ನೆಲ್ಲಾ ತೆಗೆದು ಹಾಕಲಾಗಿರುತ್ತದೆ ಹಾಗೂ ಕಳಂಕವಿಲ್ಲದ ಪ್ರೇಮವನ್ನು ಬೆಳೆಸಲಾಗುತ್ತದೆ. ಆನಂದದ ಉಚ್ಚ ಮಟ್ಟವನ್ನು ಈ ಮಾಧುರ್ಯ ಭಾವದಲ್ಲಿ ಏರಲಾಗುತ್ತದೆ. ಇದು ಕಾಮಯುಕ್ತ, ವಿಷಯ ವಾಸನಯುಳ್ಳ ಪ್ರೇಮದ ಆತುರತೆಯಲ್ಲ. ಇದು ಶುದ್ಧ ಪ್ರೇಮ. ಇದನ್ನು ಕಾಮಾಸಕ್ತ ಮನುಷ್ಯರು ತಿಳಿಯಲಾರರು. ಯಾಕಂದರೆ ಹೆಚ್ಚಿನ ಜನರಲ್ಲಿ ಶುದ್ಧ ಹೃದಯವಿಲ್ಲ. ಪ್ರೇಮ ತೃಷೆಯ ಕಾರೋಬಾರವನ್ನು ತಿಳಿಯಲು ಅಸಾಧ್ಯ. ಆದರೆ ಅದನ್ನು ಅನುಭವಿಸಲು ಸಾಧ್ಯವಿದೆ. ಬುದ್ಧಿಯಿಂದ ತಿಳಿಯಲು ಅಸಾಧ್ಯ. ಅದು ಕಾರಣಾತ್ಮಕ ಹಾಗೂ ವಾದ–ವಿವಾದದ ಸ್ತರದಿಂದ ದೂರವಾಗಿದೆ. ತತ್ವಜ್ಞಾನಿಗಳು ಹಾಗೂ ಸತ್ಯಾನ್ವೇಷಿಗಳು ಇದನ್ನು ಅರಿಯರು. ಇದು ಹೃದಯದ ಒಂದು ಸ್ಥಿತಿ. ಇದರಲ್ಲಿ ಬುದ್ಧಿಯು ಏನು ಮಾಡಬಲ್ಲದು? ಪತಿ–ಪತ್ನಿಯರಲ್ಲಿ ಆನಂದವು ಎಲ್ಲಿಂದ ಬರುವುದು? ಎಂಬುದನ್ನು ತಿಳಿಯರು. ಅವರು ಸಂತೋಷ ಸಾಗರದಲ್ಲಿ ಮುಳುಗಿರುತ್ತಾರೆ. ಅಲ್ಲಿ ವಸ್ತು ಹಾಗೂ ಅನುಭವ ಕರ್ತಾ ಇವರೆಡರ ಭೇದವಿಲ್ಲ. ಗಾಢನಿದ್ರೆಯಲ್ಲಿ ಆನಂದವಿದೆ. ಆದರೆ ಅದು ಯಾವ ವಸ್ತುವಿನಿಂದಲೂ ಬರುವುದಿಲ್ಲ. ವೈವಾಹಿಕ ಮಿಲನದಲ್ಲಿ ಆನಂದವಿದೆ. ಆದರೆ ಅದು ಪತಿ ಅಥವಾ ಪತ್ನಿಯರಿಂದ ಬರುವುದಲ್ಲ. ಭಗವಂತನ ಸಾಕ್ಷಾತ್ಕಾರದಲ್ಲಿರುವ ಆನಂದವು ವಸ್ತು ಅಥವಾ ಅನುಭವಕಾರದಿಂದ ಬರುವುದಿಲ್ಲ. ಆನಂದವು ಅಸ್ತಿತ್ವದ ಶಾಶ್ವತರೂಪ.

ಮಧುರ ರಸವು ಭೌತಿಕ ವೈವಾಹಿಕ ಅನುಭವದಿಂದ ತೀರಾ ಭಿನ್ನವಾಗಿದೆ. ಭೌತಿಕ ವೈವಾಹಿಕ ಅನುಭವವು ಅಹಂಕಾರಯುಕ್ತ. ಸ್ವಯಂ ಮಹತ್ವದ ಭಾವನೆಯಿಂದ ಉತ್ಪನ್ನವಾಗುತ್ತದೆ. ದೈವಿಕ ಮಿಲನವು "ಅಹಂ" ರಹಿತ ಇನ್ನೊಬ್ಬರ ಸಲುವಾದ ಭಾವನೆಯ ಫಲ. ಗಂಭೀರ ಸ್ವಾರ್ಥತೆಯು ಲೌಕಿಕ ವಾಸನೆಯ ಮೂಲ. ದೈವೀ ಪ್ರೇಮವು "ಅಹಂಕಾರ"ದ ನಿರ್ಮೂಲನದ ಪರಿಣಾಮ. ಇದು ತೀವ್ರ ತೃಷ್ಣೆ ಹಾಗೂ ದೈವೀ ಪ್ರೇಮದ ನಡುವಣ ಪ್ರಾಮುಖ್ಯ ವ್ಯತ್ಯಾಸ. ಒಂದು ಕಾಮವಾದರೆ ಇನ್ನೊಂದು ಪ್ರೇಮ. ದೈವೀ ಪ್ರೇಮದ ಗೂಢವನ್ನು ತಿಳಿಯಲು ಅಸಾಧ್ಯ ಹಾಗೂ ಗಂಡು ಗಂಡೆಂದು, ಹೆಣ್ಣು–ಹೆಣ್ಣೆಂದು ತಿಳಿಯುವ ತನಕ ದೈವೀ ಪ್ರೇಮವನ್ನು ಅರಿಯುವ ಪ್ರಯತ್ನ ಪಡಬಾರದು. ಮಾನವನು ದೈವಿಕವಾಗಿ ಪರಿವರ್ತನೆಗೊಂಡಾಗ ನಿಜವಾದ ಭಗವಂತನ ಪ್ರೇಮದ ಆರಂಭವಾಗುತ್ತದೆ.

ಈ ಮಧುರ ರಸ ಹಾಗೂ ಭಾವದ ಬಗೆಗೆ ಸವಿಸ್ತಾರ ಸ್ಪಷ್ಟೀಕರಣೆಯನ್ನು ಹಿಂದಿನ ಭಾಗದಲ್ಲಿ ಬರೆದ ಇಂದ್ರಿಯಾತ್ಮಕ ಹಾಗೂ ಉದಾತ್ತೀಕರಿಸಲ್ಪಟ್ಟ ಪ್ರೇಮದ ಮಹತ್ವದ ಬಗೆಗೆ ಬಹಳ ಪ್ರಕಾಶವನ್ನು ನೀಡುತ್ತದೆ. "ಪುಷ್ಠಿ ಮಾರ್ಗ"ವು ಕೇವಲ ಪೂರ್ಣ ಭಕ್ತಿಯು ಮಾತ್ರ ಭಕ್ತನಿಗೆ, ಭಗವಂತನ ಅನುಗ್ರಹವನ್ನು ಪಡೆಯುವ ದಾರಿ ಎಂಬುದಾಗಿ ಸಾರುತ್ತದೆ. ರಾಧೆ ಹಾಗೂ ಕೃಷ್ಣನ ಪರಸ್ಪರ ಆತ್ಮೀಯ ಒಂದುಗೂಡುವಿಕೆ ಯೆಂದರೆ ಅವರು ಒಂದೇ ಆತ್ಮ ಎಂದು ಅರ್ಥ. ಪುಷ್ಠಿಮಾರ್ಗವು ಉನ್ಮಾದಕತೆ ಹಾಗೂ ಉದಾತ್ತೀಕರಣ – ಈ ಎರಡೂ ಧ್ರುವಗಳನ್ನು ದೃಢೀಕರಿಸುತ್ತದೆ ಹಾಗೂ "ಹೋ" (ಹೂಂ)ಕರಿಸುತ್ತದೆ. ಮಧುರ ಭಕ್ತಿಯಿಂದಾಗಿ ಇವೆರಡೂ ಅಸ್ತಿತ್ವದ ಏಕತೆಯ ಕಡೆಗೆ ಉದಾತ್ತೀಕರಿಸಲ್ಪಡುತ್ತವೆ. (unity of being) ಭಕ್ತನು, ಭಗವಂತನಲ್ಲಿ ಮಿಲನಗೊಳ್ಳುತ್ತಾನೆ ಹಾಗೂ ಅಲ್ಲಿ ಯೋಚನೆ ಹಾಗೂ ಯೋಚನಗಾರ ಇವೆರಡೂ ಏಕೀಕೃತವಾಗುತ್ತದೆ. ಭಕ್ತಿರಸ ಸಿದ್ಧಾಂತವು "ಎಸ್ಸೆನ್ಸ್ ಆಫ್ ಇಂಡಿಯನ್ ಆರ್ಟ್"ನಲ್ಲಿ ಮಂಡಿಸಿದ "ನವ–ರಸ" ಮಾರ್ಗಕ್ಕಿಂತ ಹೆಚ್ಚಾಗಿ ಕಲಾಕೃತಿಗಳನ್ನು ಅನುಭವಿಸಲು ಹಾಗೂ ಅವುಗಳಲ್ಲಿ ತುಂಬಿದ ರಸವನ್ನು ಹೀರಲು ಉಪಯುಕ್ತವಾಗಿದೆ. ಯಾವುದೇ ಸೌಂದರ್ಯ ತತ್ವದ ಹಿನ್ನೆಲೆಯ ಅನುಭವವೆಂದರೆ ಆ ವಸ್ತುವಿನ ರಸವನ್ನು ವಸ್ತುನಿಷ್ಠೆಯಿಂದ ಹೀರುವುದು.

ಶುಭರಾಯರ ಭಕ್ತಿರಸ ಹೊರಸೂಸುವ ಕಲಾಕೃತಿಗಳ ಸೂಚಿಯು ಹೀಗಿದೆ:–

1. ಶಾಂತ–ಭಾವ

ಭಗವಾನ್ ವಿಷ್ಣುವು ಶೇಷನ ಮೇಲೆ ಪವಡಿಸಿದ್ದು; ವಿಷ್ಣುವನ್ನು ಶ್ರೀ ಶುಭರಾಯರು ನೋಡಿದ ರೀತಿ; ವಿಜಯಗೊಂಡ ರಾಮನನ್ನು ಋಷಿಗಳು ಆಶೀರ್ವದಿಸುವುದು; ಗೋಪುಗಳು ಕೃಷ್ಣನ ಕೊಳಲಿನಿಂದ ಮೋಹಿತರಾಗುವುದು.

2. ದಾಸ್ಯ–ಭಾವ

ನಾರದ, ಹನುಮಂತ ಹಾಗೂ ಗರುಡರ ಚಿತ್ರ; ಗರುಡ ಹಾಗೂ ಪುಷ್ಪಕ ವಿಮಾನ; ಕೋತಿಗಳ ಸೈನ್ಯ; ರಾಮನ ಸೈನಿಕರು ಋಷಿಗಳಿಗೆ ಸಹಾಯ ಮಾಡುವುದು; ಕಾಳಿಯನ ಹೆಂಡತಿಯರು ಕೃಷ್ಣನನ್ನು ಪ್ರಾರ್ಥಿಸುವುದು.

3. ಸಖ್ಯ–ಭಾವ

ಕೃಷ್ಣನ ಬಾಲ್ಯದ ಗೋಪಾಲ ಗೆಳೆಯರು ನರ್ತಿಸುತ್ತಿರುವ ಗೋಪಿಯರು; ಗೋಪಿಯರ ಕೋಲಾಟ; ಗೋವಳರು ಮಥುರೆಗೆ ಹೋಗುವ ದೃಶ್ಯ.

4. ವಾತ್ಸಲ್ಯ–ಭಾವ

ಯಶೋಧೆಯು ಕೃಷ್ಣ ಹಾಗೂ ಬಲರಾಮನೊಡನೆ ಆಡುವುದು; ಯಶೋಧೆಯು ಕೃಷ್ಣನಿಗೆ ಬೆಣ್ಣೆಯನ್ನು ಹಂಚುವುದು; ಯಶೋಧೆಯು ಕೃಷ್ಣನನ್ನು ತೊಡೆಗಳ ಮೇಲೇರಿಸುವುದು; ಯಶೋಧೆಯು ಕೃಷ್ಣನನ್ನು, ಅವನ ಚೇಷ್ಟೆಗೋಸ್ಕರ ದಂಡಿಸುವುದು.

5. ಮಾಧುರ್ಯ–ಭಾವ

ಶ್ರೀ ಶುಭರಾಯರ ಹೆಚ್ಚಿನ ಪೈಂಟಿಂಗ್‌ಗಳು ಮಾಧುರ್ಯ ಭಾವದವು. ರಾಧೆ ಹಾಗೂ ಕೃಷ್ಣರು ಕಾಲಾತೀತವಾಗಿ ಆಲಿಂಗನಗೈಯುವುದು; ಮಿಲನಗೈಯುವ ಮರದ ಕೆಳಗಣ ದೃಶ್ಯ, ಯಮುನಾ ನದಿಯ ಉಸುಬಿನ ಮೇಲೆ ಕೃಷ್ಣನು ಗೋಪಿಯರೊಡನೆ ನಲಿಯುವುದು; ಕದಂಬ ವೃಕ್ಷದ ಮೇಲೆ ಕೊಳಲನೂದುವ ಕೃಷ್ಣನ ಕಡೆ ನಗ್ನ ಗೋಪಿಯರು ಹೋಗುವುದು. ರಾಧಾಕೃಷ್ಣರ ದೈವೀ ನೃತ್ಯ.

ಆಕೃತಿಬಂಧ (pattern) ಮೂಲ ಅಭಿಕಲ್ಪ (basic design) ಹಾಗೂ ಶುಭರಾಯರ ಚಿತ್ರಗಳು:–

ಜರ್ಮನಿಯಲ್ಲಿ ಬೌಹೌಸ್ ಎಂಬುದು 1919ರಿಂದ 1933ರವರೆಗೆ ಕಲೆಯಲ್ಲಿ ಹಾಗೂ ಅಭಿಕಲ್ಪದಲ್ಲಿ ಈ ಶತಮಾನದಲ್ಲಿ ನಡೆದ ಶೈಕ್ಷಣಿಕ ಪ್ರಯೋಗ. ಇದರಿಂದ ವಿಕಾಸಗೊಂಡ ಧ್ಯೇಯಗಳು, ಪ್ರವೃತ್ತಿಗಳು ಹಾಗೂ ಶೈಕ್ಷಣಿಕ ಪದ್ಧತಿಗಳು ವರ್ತಮಾನದಲ್ಲಿ ಕೂಡ ಪ್ರಾಸಂಗಿಕವಾಗಿವೆ. ಪೌಲ್ ಕ್ಲೀ, ಕೆಂಡೆಂಸ್ಕಿ, ಮೊಹೊಲಿ–ನಾಗಿ ಹರ್ಬರ್ಟ್ ಬೇಯರ್ ಇವರು ಒಂದು ನವೀನ ದೃಶ್ಯ ವಿಷಯದ ಮೇಲೆ ವ್ಯಾಕರಣವನ್ನು ತಯಾರು ಮಾಡಿದ್ದಾರೆ ಹಾಗೂ ದೃಶ್ಯ ವಿಷಯ ಸಾಕ್ಷರತೆಯನ್ನು ಪ್ರತಿಪಾದಿಸಿದ್ದಾರೆ.

ದೃಶ್ಯ ವಿಷಯಕ ವಿಚಾರ ವಿನಿಮಯ (visual communication) ಹಾಗೂ ಕಲಾತ್ಮಕ ಆವಿರ್ಭಾವಗಳ (artistic expressions) ಮೂಲ ಘಟಕ (basic elements) – ಬಿಂದು (the dot) ರೇಖೆ – (the line) ರೂಪ (shape) ಆಕೃತಿಬಂಧ (pattern) ಛಾಯಾಪ್ರಕಾಶ (tone) ಬಣ್ಣ (colour) ಹೆಣೆತ (texture) ಹಾಗೂ ಚಿಹ್ನೆ (symbol) – ಇವುಗಳನ್ನು ಚೆನ್ನಾಗಿ ಅಧ್ಯಯಿಸಿ, ಸಂಪೂರ್ಣ ವ್ಯವಹಾರಿಕ ಕಲಾಶಿಕ್ಷಣ ಕ್ರಮವನ್ನು ತಯಾರಿಸಿದ್ದಾರೆ. ಕಲೆಯು ದೃಶ್ಯದ ಭಾಷೆ. ಕಲಾವಿದರು ಹಾಗೂ ಮಕ್ಕಳು ದೃಶ್ಯದ ಮೂಲ ಘಟಕಗಳನ್ನು ಕಲಿತ ನಂತರ ಅವರು ಸುತ್ತಮುತ್ತಲಿನ ಹಾಗೂ ದೃಶ್ಯ ಲೋಕದ ಈ ಘಟಕಗಳನ್ನು ಶೋಧಿಸಲು ಹಾಗೂ ಅವರ ಆಂತರಿಕ ವೈಯಕ್ತಿಕ ಅಭಿವ್ಯಕ್ತಗಳಲ್ಲಿ ಉಪಯೋಗ ಮಾಡಲು ಪ್ರೋತ್ಸಾಹಿಸಲ್ಪಟ್ಟರು. ರುಡಾಲ್ಫ್ ಆರ್ನಹೇಮರ ಕಲೆ ಹಾಗೂ ದೃಶ್ಯಾತ್ಮಕ ಇಂದ್ರಿಯ ಗೋಚರ (visual perception) ಮೇಲಣ ಮನಶಾಸ್ತ್ರ ಹಾಗೂ ಲೇಖನಗಳು ಸೃಜನಶೀಲ ದೃಶ್ಯಾತ್ಮಕ ಪ್ರಕ್ರಿಯೆಗಳ ವಿಷಯ ಸ್ಪಷ್ಟೀಕರಣವನ್ನು ನೀಡಿತು. ಈ "ಹೊಸ ದೃಷ್ಟಿ"ಯಿಂದ ಶುಭರಾಯರ ಚಿತ್ರಗಳನ್ನು ನಾವು ಕಲಾಮಾಧ್ಯಮ ಅಥವಾ ರಸ ಸಿದ್ಧಾಂತ ಮಾತ್ರವಲ್ಲ 'ಮೂಲ ಅಭಿಕಲ್ಪ'ಗಳ ಮೂಲಕ ಕೂಡಾ ತಿಳಿದುಕೊಳ್ಳಬಹುದು.

ವೀಕ್ಷಿಸುವುದು ಹಾಗೂ ನೋಡುವುದು ಎಂದರೆ ಆಕೃತಿ ಮತ್ತು ಆಕೃತಿ ಬಂಧಗಳನ್ನು ಕಲಾವಸ್ತುಗಳಲ್ಲಿ ಕಾಣುವುದು ಹಾಗೂ ನಿಸರ್ಗ ಮಾನವ ನಿರ್ಮಿತ ವಸ್ತುಗಳು, ವಾಸ್ತುಶಿಲ್ಪ ಹಾಗೂ ಸಂಪೂರ್ಣದೃಕ್ ವಿಶ್ವದಲ್ಲಿ ಕಾಣುವುದು. ಆಕೃತಿಬಂಧಗಳನ್ನು ನೋಡುವುದು ಅದರ ಬಗೆಗೆ ಯೋಚಿಸುವುದು ಹಾಗೂ ವೀಕ್ಷಿಸುವುದು – ಇದು ಕಲೆಯನ್ನು ಹಾಗೂ ದೃಕ್ ವಿಶ್ವವನ್ನು ತಿಳಿಯುವ ಹೊಸ ವಿಧಾನ.

ಆಕೃತಿ ಬಂಧ ಎಂದರೆ ಒಂದು ವಸ್ತುವು ಅನೇಕ ಬಾರಿ ಪುನರಾವೃತ್ತಿಗೊಳ್ಳುವ ಅಭಿಕಲ್ಪ. ಒಂದು ಸೌಧವೆಂದರೆ ಹಲವಾರು ಇಟ್ಟಿಗೆಗಳ ಆಕೃತಿ ಬಂಧ. ಹಲವಾರು ಕಿಟಕಿಗಳು, ಚಿಕ್ಕ ಮನೆಗಳ ಸಾಲು, ಮರದ ಎಲೆಗಳು, ಇವೆಲ್ಲಾ ಆಕೃತಿಬಂಧಗಳನ್ನು ತಯಾರು ಮಾಡುತ್ತದೆ. ಜನರು ಸಂಚರಿಸುವುದರಲ್ಲಿ ಕೂಡ ಒಂದು ಆಕೃತಿಬಂಧವಿದೆ. ನಾವು ವಸ್ತುಗಳನ್ನು ಲಕ್ಷವಿಟ್ಟು ವೀಕ್ಷಿಸಿದರೆ ಆಕೃತಿ ಬಂಧಗಳನ್ನು ಎಲ್ಲೆಲ್ಲಿಯೂ ಕಾಣಬಹುದು. ಇಂಗ್ಲೆಂಡಿನ ಕರ್ಟ ರೋಲೆಂಡರು – ಆಕೃತಿಬಂಧ ಹಾಗೂ ಆಕಾರ ಇವುಗಳ ಆಧಾರದಲ್ಲಿ ವಸ್ತುವೀಕ್ಷಣೆ ಮತ್ತು ನೋಡುವಿಕೆಯ ಮೇಲೆ ಒಂದು ಭಾರೀ ದೊಡ್ಡ ಕಾರ್ಯಕ್ರಮ ತಯಾರು ಮಾಡಿದ್ದಾರೆ.

ಶುಭರಾಯರ ಚಿತ್ರಗಳನ್ನು ಸೂಕ್ಷ್ಮವಾಗಿ ವೀಕ್ಷಿಸಿದರೆ ಅವರು ಕೆಲವು ಮೂಲ ಆಕೃತಿ ಬಂಧಗಳಿಂದ ತಮ್ಮ ಚಿತ್ರಗಳನ್ನು ತಯಾರಿಸಿದ್ದಾಗಿ ಕಂಡುಬರುತ್ತದೆ. ಎಲ್ಲಾ ಸ್ತ್ರೀಯರು ಅವರು ಗೋಪಿಯರೇ ಆಗಲೀ, ಯಶೋಧೆಯಾಗಲೀ ಅಥವಾ ರಾಧೆಯಾಗಲಿ ಅವರಿಗೆಲ್ಲಾ ಒಂದೇ ಮೂಲ ರೂಪ ಕೊಡಲ್ಪಟ್ಟಿದೆ. ಈ ಮೂಲರೂಪದ

ಸ್ಥಾನವನ್ನು ಅಲ್ಲಲ್ಲಿ ಬದಲಿಸಲಾಗಿದೆ – ಪುನರಾವೃತ್ತಿಯಾಗಿ ಅಥವಾ ಜಾಲಾಕೃತಿಯಲ್ಲಿ ಹಿಂದುಗಡೆ–ಮುಂದುಗಡೆ, ಮೇಲೆ–ಕೆಳಗೆ ಅಥವಾ ಸ್ಥಾನಪಲ್ಲಟ ಮಾಡಲಾಗಿದೆ. ಗೋಪಿಯರ ಆಕೃತಿ ಬಂಧವು ಜಾಲಾಕೃತಿಯಲ್ಲಿ ಚೌಕಾಕೃತಿ, ಇಟ್ಟಿಗೆಯಾಕೃತಿ, ಅರ್ಧ ಇಳಿತ ಅಥವಾ ವಜ್ರಾಕೃತಿ ತ್ರಿಕೋಣಾಕೃತಿ, ಕಲಾಕೃತಿ ಅಥವಾ ಷಟ್‌ಕೋಣ ಆಗಿ ಪುನರಾವೃತ್ತಿ ಮಾಡುವಾಗ, ಒಂದು ಬಹಳ ಅದ್ಭುತವಾದ ಹಾಗೂ ನಯನ ರಮ್ಯ ಕೃತಿಗಳನ್ನು ರಚಿಸಬಹುದು – ರಾಸಲೀಲೆಯಲ್ಲಿ ಕೃಷ್ಣನು ಗೋಪಿಯರ ಸಾಮೂಹಿಕ ನಾಯಕನಾಗಿ ಮುಂದುಗಡೆ; ಕಾಲಿಯನ ಪತ್ನಿಯರು ಪ್ರಾರ್ಥಿಸುವುದು – ಇವುಗಳಲ್ಲಿ ಒಂದು ಮೂಲಾಕೃತಿಯು ಅಲ್ಪ–ಸ್ವಲ್ಪ ವ್ಯತ್ಯಾಸಗೊಂಡು ಪುನರಾವೃತ್ತಿಸುವುದು. ಇಲ್ಲಿ ಮೂಲ ಆಕೃತಿಗಳ ಪುನರಾವೃತ್ತಿಯು ಬರೇ ಯಾಂತ್ರಿಕವಾಗಿ ನಡೆಯುವುದಿಲ್ಲ; ಆದರೆ ಅದು ಕಲಾತ್ಮಕವಾಗಿ ಹಾಗೂ ಸೌಂದರ್ಯ ತತ್ವದ ಮೇಲಿದೆ. ಶುಭರಾಯರ ಯಾವುದೇ ಚಿತ್ರಗಳನ್ನು ತೆಗೆದುಕೊಳ್ಳಿ. ಅದನ್ನು ಒಂದು ಅಥವಾ ಎರಡು ಆಕೃತಿಬಂಧಗಳ ಮೂಲಕ ಸೂಕ್ಷ್ಮವಾಗಿ ವಿಶ್ಲೇಷಿಸಬಹುದು.

ಎರಡನೆಯದಾಗಿ ದೃಶ್ಯ ಘಟಕಗಳು (visual elements) ಬಿಂದು ಹಾಗೂ ರೇಖೆ ಇವು ಇಲ್ಲಿ ಮೂಲ ಘಟಕಗಳು. ಈ ಮೂಲ ಘಟಕಗಳನ್ನು ಚಿತ್ರಗಳ ಘಟಕಗಳಾಗಿ ಉಪಯೋಗಿಸಲಾಗಿದೆ. ರೇಖೆಗಳು ಯಾವುದೇ ರೀತಿ ಅಥವಾ ತರಹದ್ದಿರಬಹುದು. ಮನುಷ್ಯನ ಕೃತಿಗಳು, ಪರದೆಗಳು, ಉಡುಪುಗಳು ಮತ್ತು ಪುಷ್ಪಗಳ ಅಭಿಕಲ್ಪಗಳನ್ನು ಲಯಬದ್ಧ ರೇಖೆಗಳು ಹಾಡುತ್ತಿರುವ ರೇಖೆಗಳು, ನೃತ್ಯಗೈಯುವ ರೇಖೆಗಳು ಹಾಗೂ ಸಮತೋಲಿಸುವ ರೇಖಗಳ ಮೂಲಕ ತಯಾರು ಮಾಡಲಾಗಿದೆ. ಶುಭರಾಯರು ರೇಖಾಪ್ರವೀಣರು. ಅವರ ಚಿತ್ರಗಳು ನಿಸರ್ಗವನ್ನು ಅಥವಾ ಇನ್ನ್ಯಾವುದೇ ವಿಷಯವನ್ನು ಪ್ರತಿನಿಧಿಸುವುದಿಲ್ಲ. ಅವು ಪ್ರತೀಕಾತ್ಮಕ ಕಲೆಯಾಗಿದೆ. ಕಲಾವಿದರಾಗಿದ್ದ ದಿ. ಎ.ಎ. ಆಲ್ಮೇಲಕರರು ಶುಭರಾಯರಿಂದ ಸ್ಫೂರ್ತಿ ಪಡೆದದ್ದು ಆಶ್ಚರ್ಯಕರವಲ್ಲ. ಕಲಂಕಾರಿ ಕಲಾಕಾರರೂ ಕೂಡಾ ರೇಖಾ ಚಿತ್ರಣದಲ್ಲಿ ಪ್ರವೀಣರು. ನಮ್ಮ ಜಾನಪದ ಕಲೆಗಳು, ರೇಖೆ ಹಾಗೂ ರೇಖಾ ಚಿತ್ರಣದ ಮೇಲೆ ಆಧಾರಿತವಾಗಿವೆ. ಮನೆಗಳ ನೆಲವನ್ನು ಹೆಂಗಸರು ಸಿಂಗರಿಸುವ ರಂಗವಲ್ಲಿ ರೂಪಗಳು, ಬಿಂದು ಹಾಗೂ ರೇಖಾ ಘಟಕಗಳ ಮೇಲೆ ಆಧಾರಿತವಾಗಿವೆ. ಆದ್ದರಿಂದ ಶ್ರೀ ಶುಭರಾಯರ ಚಿತ್ರಗಳಲ್ಲಿ ರೇಖೆಯ ದೃಶ್ಯ ಘಟಕವು ಕೇಂದ್ರ ಭೂಮಿಕೆಯನ್ನು ಪಡೆದಿದೆ. ಹಾಗೂ ಪ್ರತಿಕಲ್ಪದ ಸಿದ್ಧಾಂತಗಳಾದ ಪುನರಾವೃತ್ತಿ (repetation), ಪ್ರತ್ಯಾವರ್ತನೆ (alternation), ಸಮ ಪ್ರಮಾಣಿತೆ (symmetry), ಸಮತೋಲತೆ (balance), ಉತ್ಸರ್ಜನೆ (radiation), ಪ್ರಮಾಣ ಬದ್ಧತೆ (proportion), ಸ್ವರಮೇಳತೆ (harmony) – ಇವುಗಳನ್ನು ಚಿತ್ರಗಳಲ್ಲಿ ಯಾವ ರೀತಿಯಲ್ಲಿ ಪ್ರಯೋಗಿಸಿರುವರೆಂದರೆ – ಚಿತ್ರದ

ವಿಷಯ (ಭೂಮಿಕೆ) – ರಸ ಹಾಗೂ ಭಾವ – ಇವು ಮೂರು ವಿಷಯಗಳೂ ಪೂರ್ಣ ಐಕ್ಯತೆಯನ್ನು ಹೊಂದಿವೆ.

ಈ ಆಕೃತಿಬಂಧ ಹಾಗೂ ಮೂಲ ಪ್ರತಿಕಲ್ಪ ಪದ್ಧತಿಯನ್ನು ನಮ್ಮ ಲಘುಚಿತ್ರ (ಚಿಕಣಿ)ಗಳ ವಿಶ್ಲೇಷಣೆಯಲ್ಲಿ ನಾವು ಪ್ರಯೋಗಿಸಬಹುದು. ಆಗ ಚಿತ್ರಗಳ ಚಿತ್ರೀಕರಣದ ಗೂಢ ಹಾಗೂ ರಚನೆಯ (ಸಂಯೋಜನೆಯ) ಸಿದ್ಧಾಂತಗಳು ನಮಗೆ ಗೋಚರಿಸಿ, ಹೆಚ್ಚು ಸುಧಾರಣೆಗೆ ಸಹಾಯಕವಾಗಬಹುದು. ನಮ್ಮ ಕಿರುಚಿತ್ರಗಳಿಗೆ, ಈಗ ಚಾರಿತ್ರಿಕ ಮತ್ತು ವಿಷಯಿಕ ಸ್ಪಷ್ಟೀಕರಣ ಮಾತ್ರ ಸಾಲದು. ಇನ್ನೂ ಹೆಚ್ಚಿನ ಸ್ಪಷ್ಟೀಕರಣದ ಅಗತ್ಯವಿದೆ. ಬರೇ ಪರಂಪರಾಗತ ಕಲಾತ್ಮಕ ಹಾಗೂ ಸೌಂದರ್ಯ ತತ್ವದ ಪದ್ಧತಿಗಿಂತ ಹೆಚ್ಚಿನ ಸ್ಪಷ್ಟೀಕರಣದ ಅವಶ್ಯಕತೆ ಇದೆ. ನವೀನ ದೃಶ್ಯ ಅಭಿಕಲ್ಪ ಪದ್ಧತಿಯನ್ನು ಇನ್ನೂ ನಾವು ನಮ್ಮ ನೆಲೆಯ ಪರಂಪರೆಗೆ ಪ್ರಯೋಗಿಸಿ ನೋಡಿಲ್ಲ. ಜಿಯೋರ್ಜ್ ಕ್ರೇಪ್ಸ್‌ರವರ ದೃಷ್ಟಿ ಹಾಗೂ ಮೂಲ್ಯ (vision + value)ನ ಮೇಲಣ ಹತ್ತು ಗ್ರಂಥಗಳು ಬಹುಸ್ತರೀಯ ದೃಷ್ಟಿಕೋನ ಹಾಗೂ ನವ ದೃಶ್ಯ ಸೌಂದರ್ಯದ (new visual aesthetics) ಗಹನ ಅಧ್ಯಯನದ ಕುರಿತಾಗಿದ್ದು, ಇವುಗಳನ್ನು ಭಾರತದ ಕಲಾವಿದರುಗಳು ಅಥವಾ ಅಭಿಕಲ್ಪ ವಿದ್ಯಾಮಂದಿರದವರು ವಿಚಾರಪೂರ್ವಕವಾಗಿ ಅಧ್ಯಯಿಸಲಿಲ್ಲ. ಕಲಾವಿಮರ್ಶೆ ಹಾಗೂ ಗುಣಗ್ರಹಣ (appriciation) ಕಾರ್ಯವು ಭಾರತದಲ್ಲಿ ವಾಙ್ಮಯ, ಚಾರಿತ್ರಿಕ ಹಾಗೂ ವಾಸ್ತುಶಿಲ್ಪದ ಒತ್ತಡದಲ್ಲೇ ಇನ್ನೂ ಮುಳುಗಿ ಹೋಗಿದೆ. ಬಹುಸ್ತರೀಯ ಪಂಥದವರಾಗಿ ನಾವು ಕಾರ್ಯ ಮಾಡಿದಾಗ ಮಾತ್ರ ಅಧಿಕ ಮಹತ್ವದ ವಿಧಾನಗಳು ನಮಗೆ ಗೋಚರಿಸಬಹುದು.

ಕಲಾಕಾರ ಸಂತ ಶುಭರಾಯರ ಸೃಜನಶೀಲತೆ

ಬಹುಮುಖ ಬುದ್ಧಿಮತ್ತಿನ ಬಿಂದು ಪುಷ್ಪ

ಕಲೆಗಳ ಏಕೀಕರಣ

ಕಲಾವಿದ ಶುಭರಾಯರನ್ನು ತಿಳಿದವರು ಹಾಗೂ ಅವರ ಗುಣಗ್ರಹಣ ಮಾಡಿದವರು ಅನೇಕರಿದ್ದಾರೆ. ಸೋಲಾಪುರದಲ್ಲಿ ಅವರ ಧಾರ್ಮಿಕ ಮಠವಿದ್ದ ಕಾರಣ ಅವರೊಬ್ಬ ಸಂತರೆಂದು ಎಲ್ಲರಿಗೂ ತಿಳಿದ ವಿಷಯ. ಅವರು ಆ ರೀತಿಯಾಗಿ ಜನರಿಂದ ಸ್ವೀಕರಿಸಲ್ಪಟ್ಟಿದ್ದಾರೆ. ಈ ಪವಿತ್ರ ಪ್ರದೇಶದಲ್ಲಿ ಶ್ರೀ ಶುಭರಾಯರು ಸಮಾಧಿ ಇದ್ದು, ಇಲ್ಲಿ ಬಂದು ಪೂಜಿಸಲ್ಪಡುವ ಹಾಗೂ ಭಕ್ತಿಯ ಪವಿತ್ರ ವಾತಾವರಣವಿದೆ. ಶುಭರಾಯರ ದೈವಾರ್ಪಿತ ಆಧ್ಯಾತ್ಮಿಕ ಜೀವನದ ಪರವಾಗಿ ನಮಗೆ ಶ್ರದ್ಧೆ ಮತ್ತು ವಿಶ್ವಾಸ ಉಂಟಾಗುತ್ತದೆ. ಜನರು ಅವರ ವಿಷಯ ಅನೇಕ ಸೊಗಸಾದ ಕಥೆಗಳನ್ನು ಕೇಳಿದ್ದಾರೆ. ಜನರು ಶುಭರಾಯರನ್ನು ಮರ್ಯಾದಿಸುತ್ತಾರೆ ಹಾಗೂ ಅವರ ಕುರಿತು ಕೌತುಕಪಡುತ್ತಾರೆ.

ಆದರೆ ಎಷ್ಟು ಜನರು ಅವರು ಬರೆದುದ್ದನ್ನು ಸರಿಯಾಗಿ ತಿಳಿದಿದ್ದಾರೆ? ಜನರು ನಿಜವಾಗಿ ಶುಭರಾಯರ ಆಧ್ಯಾತ್ಮಿಕ ಪದಗಳನ್ನು ಅಧ್ಯಯನ ಮಾಡಿ ಅವರು ನಮಗೆ ಏನನ್ನು ಹೇಳಬಯಸುತ್ತಾರೆ ಎಂಬುದನ್ನು ಯಾರಾದರೂ ವಿಚಾರಿಸಿದ್ದಾರೆಯೇ? ಅವರ ಚಿತ್ರಗಳು ವೀಕ್ಷಕರಿಗೋಸ್ಕರ ತೆರೆದಿರಿಸಲ್ಪಟ್ಟವೆ. ಅವರ ಆಧ್ಯಾತ್ಮಿಕ ಸಂದೇಶವೇನೆಂಬುದನ್ನು ನಾವು ಅನ್ವೇಷಣೆ ಮಾಡಬೇಕು. ಅದನ್ನು ನಾವು ವಿಮರ್ಶಿಸಬೇಕು ಹಾಗೂ ಶೋಧಕರಿಗೆ ಸಿಗುವಂತೆ ಮಾಡಬೇಕು. ಅವರ ಜೀವನ ಚರಿತ್ರೆಯು ಅವರೊಬ್ಬ ಮಹತ್ವದ ಶ್ರದ್ಧಾವಂತ ಹಾಗೂ ಜೀವನ್ಮುಕ್ತ ವ್ಯಕ್ತಿಯೆಂಬ ಪ್ರತಿಬಿಂಬವನ್ನು ವಿಶ್ವಾಸಪಡಿಸುತ್ತದೆ. ಅವರ ಚಿತ್ರಗಳೇ ಅವರೊಬ್ಬ ಆಧ್ಯಾತ್ಮಿಕ ದೂರದೃಷ್ಟಿ ಇದ್ದವರು ಹಾಗೂ ದೈವೀ ಆನಂದವನ್ನು ಪಡೆದವರೆಂಬುದನ್ನು ಸಾರುತ್ತವೆ. ಶುಭರಾಯರು ಸೋಲಾಪುರದಲ್ಲಿನ 40 ವರ್ಷಗಳ ಜೀವನದಲ್ಲಿ ಬರೇ ಚಿತ್ರರಂಜನೆ ಮಾತ್ರವಲ್ಲದೆ, ಇನ್ನೂ ಅನೇಕ ಕೆಲಸಗಳನ್ನು ಮಾಡಿದ್ದಾರೆ. ನಾವು ಹಿಂದೆ ನೋಡಿದಂತೆ ಕವಿತೆ ಹಾಗೂ ಚಿತ್ರರಚನೆಗಳು ಅವರಿಗೆ ಪ್ರಾಮುಖ್ಯವಾಗಿರದೆ ಗೌಣವಾಗಿದ್ದುವು (secondary). ಕವಿತೆಗಳು ಹಾಗೂ ಚಿತ್ರಗಳು ಅವರಿಗೆ ಇವೆಲ್ಲಕ್ಕಿಂತಲೂ ಮೇಲಿನಸ್ತರದ ಪ್ರಚಂಡ ಶಕ್ತಿಯನ್ನು ಹೊರಸೂಸುವಂತೆ ಮಾಡಲು ಮಾಧ್ಯಮವಾದುವು. ಅವರ ಪ್ರಚಂಡ ಆಂತರಿಕ ಶಕ್ತಿಯು ಹೊಸ ಪಥಗಳನ್ನು ಶೋಧಿಸುತ್ತಿತ್ತು. ಅವರ ವ್ಯಕ್ತಿತ್ವದ ಮೂಲಕ ಪ್ರಕಟವಾಗಲು ಪ್ರಯತ್ನಿಸುತ್ತಿತ್ತು. ಶುಭರಾಯರೂ ಕೂಡಾ ಅವರ ಸೃಜನಶೀಲ ಆಧ್ಯಾತ್ಮದ ಬೆಳವಣಿಗೆಗೆ ಪ್ರತಿಯೊಂದು ದಾರಿ ಹಾಗೂ ವಿಧಾನವನ್ನು ಶೋಧಿಸುತ್ತಿದ್ದರು. ಅವರು ತಮ್ಮ ವ್ಯಕ್ತಿತ್ವವನ್ನು ಬಹುಸ್ತರೀಯವಾಗಿ ಬೆಳೆಯಿಸಿಕೊಂಡಿದ್ದರು. ಅವರಿಗೆ ಸಂಗೀತದಲ್ಲಿ ಅಭಿರುಚಿ ಇತ್ತು. ಅವರು ತನ್ನದೇ ಕವಿತೆಗಳನ್ನು ರಚಿಸಿ ಹಾಡುತ್ತಿದ್ದರು. ನಿತ್ಯವು ಅವರಿಗೆ ದೈವತ್ವದ ಅನೇಕ ದ್ವಾರಗಳನ್ನು ತರೆದಿತ್ತು. ಸತ್ಸಂಗ ಕೂಟ ಹಾಗೂ ಭಜನೆಗಳು, ಕೀರ್ತನೆಗಳು ಬಹಳ ಮಹತ್ವದ ಘಟನೆಗಳಾಗಿದ್ದುವು. ಅವರು ನೆರೆದ ಸಭಿಕರಿಗೆ ಆಧ್ಯಾತ್ಮಿಕ ಪ್ರವಚನ ಮಾಡುತ್ತಿದ್ದರು. ಅವರ ಮಠವು ಆಕಾಲದಲ್ಲಿ ಉಚ್ಚಸ್ತರೀಯ ಸಂತರ ಸಮಾಗಮದ ಸ್ಥಳವಾಗಿತ್ತು. ಆಗ ಸಂಭವಿಸಿದ ಈ ಎಲ್ಲಾ ಘಟನೆಗಳು ಆಳದ ಗತಿಯಲ್ಲಿ ನಷ್ಟವಾಗಿ ಕಳೆದುಹೋಗಿವೆ. ಬದುಕಿದ್ದಾಗ ಅವರು ಪೂರ್ಣ ವ್ಯಕ್ತಿತ್ವದ ರೂಪದಲ್ಲಿ ಕಾರ್ಯಾನ್ವಿತರಾಗಿದ್ದರು. ಅವರ ಆಧ್ಯಾತ್ಮಿಕದ ಅಸ್ತಿತ್ವ ಹಾಗೂ ದೃಶ್ಯ ಶಕ್ತಿಯ ಮಾರ್ಗದರ್ಶನವನ್ನು ಸುತ್ತಮುತ್ತಲಿನ ಆತ್ಮಗಳಿಗೆ ಅದು ನೀಡಿದ್ದು ಹಾಗೂ ಅಲ್ಲಿ ಅವರ ವಿಶಿಷ್ಟ ಕಾರ್ಯಕ್ಕೆ ಗ್ರಹಣಸೂಕ್ಷ್ಮ ಹಾಗೂ ಭ್ರಾತೃಭಾವವಿದ್ದ ಒಂದು ಮುಖ್ಯ ಸಂಘವು (ಘಟ) ತಯಾರಾಗಿತ್ತು. ಅಲ್ಲಿ ಹಲವಾರು ಈಶ್ವರದತ್ತ ಶಕ್ತಿಯುಳ್ಳ ಹಾಗೂ ಕುಶಲ ವ್ಯಕ್ತಿಗಳು ಸಹಭಾಗಿಯಾಗಿದ್ದರು ಮತ್ತು ಜವಾಬ್ದಾರಿಯನ್ನು ಹೊತ್ತಿದ್ದರು. ಶುಭರಾಯರಲ್ಲಿ ಹಾಗೂ ಅವರ ಮಠದಲ್ಲಿ ಹಲವಾರು ಕಲೆಗಳು ಅರಳಿ, ಆಧ್ಯಾತ್ಮಿಕ ಕೇಂದ್ರೀಕೃತ ಸೃಜನಶೀಲತೆಗೆ ಸಹಕಾರ್ಯವಾದುವು.

ದೈವೀ ಪ್ರೇಮಕ್ಕೋಸ್ಕರ ನೃತ್ಯ

ಶುಭರಾಯರು ಒಬ್ಬ ಕಲಾವಿದರಾಗಿದ್ದರು. ಆದರೆ "ನಟ' ಶುಭರಾಯರು "ಸತ್ಸಂಗ'' ಸಭೆಯಲ್ಲಿ ಬಹಳ ಚೈತನ್ಯ ಹಾಗೂ ಶಕ್ತಿಯುತರಾಗಿದ್ದರು. ಸೂಕ್ಷ್ಮವಾಗಿ ಅಧ್ಯಯಿಸಿದರೆ ಅವರ ಚಿತ್ರಗಳಲ್ಲಿದ್ದ ಮಾನವರು ಜೀವಂತವಾಗಿದ್ದಂತೆಯೂ, ಕಂಪಿಸುವಂತೆಯೂ ಕಾಣುತ್ತಾರೆ. ಅವರ ದೈಹಿಕ ಚಲನೆಗಳು ಲಯವನ್ನು ಸೂಚಿಸುತ್ತವೆ. ನಮಗವರು ಚಿರವಾಗಿ ನೃತ್ಯಗೈಯುವಂತೆ ಭಾಸವಾಗುತ್ತದೆ. ಅವರ ಶಾರೀರಿಕ ಹಾವ–ಭಾವಗಳು ಕವಿತೆಯಂತಿದ್ದು, ಅದರಲ್ಲಿ ಸ್ವರ ಸಂವಾದ (harmony) ಪೂರ್ಣವಾಗಿ ತುಂಬಿದೆ. ಶುಭರಾಯರು ಮಾತ್ರ ಆ ರೀತಿಯ ಕವಿತಾಕೃತಿ (lyrical figures)ಗಳನ್ನು ಬರೆಯಲು ಸಾಧ್ಯ. ಇನ್ಯಾವ ಕಲಾಕಾರರಿಗೆ ಅದು ಅಸಾಧ್ಯವೆಂದು ನಮಗೆ ಭಾಸವಾಗುತ್ತದೆ. ಪ್ರಾರ್ಥನೆಯ ರೂಪದಲ್ಲಿ ದೇವರ ಮಹಾನ್‌ಶಕ್ತಿಯೆದುರು ಅವರು ನೃತ್ಯಗೈದಾಗ ಅವರ ಕಣ್ಣೆದುರು – ನಟಿಸುವ ಗೋಪಿಯರು ಹಾಗೂ ಕೃಷ್ಣನ ಕೊಳಲು – ಈ ದೃಶ್ಯಗಳನ್ನು ಕಾಣುತ್ತಿದ್ದರು. ಪೂರ್ಣ ರಾಸಲೀಲೆಯು ಅವರ ದೂರದೃಷ್ಟಿಯಲ್ಲಿ ಜೀವಂತವಾಗಿದ್ದು, ಅವರು ಆ ದೃಶ್ಯವನ್ನು ಬಹಳ ಸಹಜವಾಗಿ ಚಿತ್ರೀಕರಣ ಮಾಡುತ್ತಿದ್ದರು. ನೃತ್ಯದ ಲಯವು ಅವರ ಎಲ್ಲಾ ಚಿತ್ರಗಳಲ್ಲಿ ಪಸರಿಸಿದೆ. ಭಾರತೀಯ ಮಿಥ್ಯ ಕಥೆಗಳಲ್ಲಿ ನೃತ್ಯದ ಉಗಮವನ್ನು ಅನಂತವಾಗಿ ವಿಶ್ವದಲ್ಲಿ ಕಂಪಿಸುವ ಸ್ವರ್ಗದ ಲಯಕ್ಕೆ ಜೋಡಿಸಿದ್ದಾರೆ. ಮಿಥ್ಯ ಕಥೆಗಳ ದೇವದೇವತೆಗಳು ಹಾಗೂ ಅನುಗಣಿತ ದೈವೀಪಾತ್ರಗಳನ್ನು ಭೂಮಿಯ ಮೇಲಣ ಮಾನವರು ಧರಿಸಿ ನೃತ್ಯವನ್ನು ವಿನೋದದಿಂದ ಆನಂದಿಸುತ್ತಿದ್ದಾರೆ ಹಾಗೂ ಈ ನೃತ್ಯಗಳನ್ನು ಅಭಿಮಾನಪಡುವಂತಹ ಪ್ರಾಯೋಗಿಕ ಕಲೆಯ ಮಟ್ಟಕ್ಕೆ ಏರಿಸಿದ್ದಾರೆ. ಶಿವನ ನೃತ್ಯ ಹಾಗೂ ಕಾಳೀಯನ ಮೇಲೆ ಮಾಡುವ ಕೃಷ್ಣನ ನೃತ್ಯವು ಕೆಟ್ಟುದು ನಾಶವಾಗಿ ಎಂದೆಂದೂ ದೈವೀ ಶಕ್ತಿಯು ಕೊನೆಯಲ್ಲಿ ಜಯಿಸುವಂತೆ ನಮಗೆ ತಿಳಿಸುತ್ತದೆ. ಶುಭ ರಾಯರ ನೃತ್ಯಕ್ಕೆ ಹೆಚ್ಚಿನ ಆಳದ ಅರ್ಥ ಹಾಗೂ ಹೇತುವಿದೆ.

ಜನರ್‍ಯಾಕೆ ನಿಜವಾಗಿ ನೃತ್ಯಗೈಯ್ಯುತ್ತಾರೆ?

ದೈಹಿಕ ಅತೀ ಸಂವೇದನೆ, ಸ್ನಾಯು ಸಂವೇದನಗಳು ಮತ್ತು ಒತ್ತಡಗಳು ಹಾಗೂ ನಕಾರಾತ್ಮಕ ಪ್ರತಿಬಿಂಬಗಳು ಇವುಗಳನ್ನ ಹುಡುಕಿ, ಅವುಗಳ ಬದಲಿಗೆ ಯೋಗ್ಯವಾದ ಸಂವೇದನೆ, ಪ್ರತಿಬಿಂಬ ಇತ್ಯಾದಿಗಳನ್ನು ಉಂಟುಮಾಡುವಂತೆ ಶರೀರಕ್ಕೆ ಪುನಃ ಶಿಕ್ಷಣ ಕೊಡುವಂತಹ ನೂತನ ವಿಧಾನಗಳನ್ನು ಪೆಲ್ಡನ್ ಕ್ರಾಯಿಸ್ ಅಲೆಗ್ಸಾಂಡರ್ ಮತ್ತು ಎಲ್ಸಾ ಗಿಂಡ್ಲರ್ ಎಂಬವರು "ಶರೀರದ ಪರಿವರ್ತನೆ'' ಎಂಬ ಹೊಸ ಕಾರ್ಯದ ಮೂಲಕ ವಿಕಾಸಗೊಳಿಸಿದ್ದಾರೆ. ಈ ಶಾರೀರಿಕ ಪುನಃ ಶಿಕ್ಷಣವನ್ನು "ಶಾರೀರಿಕ ಪ್ರತಿಬಿಂಬ ಶರೀರ''ವನ್ನು ಬೆಳೆಸಿ ತಯಾರು ಮಾಡಿದ್ದಾರೆ. ಈ ಶಾರೀರಿಕ ಸಾಧನೆಗೆ ಕಾರ್ಯಕ್ಷಮ ಕಲ್ಪನಾಶಕ್ತಿಯ (active imagination) ಉಪಯೋಗ ಮಾಡುತ್ತಾರೆ. ಇದರಲ್ಲಿ

ನೃತ್ಯವನ್ನು ಶರೀರದಲ್ಲಿ ಅಡಗಿರುವ ಸುಪ್ತಮನದ ಒತ್ತಡ (tension of unconcious) ವನ್ನು ಮುಕ್ತಗೊಳಿಸಲು ಉಪಯೋಗಿಸುತ್ತಾರೆ. ಇದು ಹೊಸ ಕೃತಿಗಳ ಉತ್ಪತ್ತಿಗೋಸ್ಕರ ಶಕ್ತಿಯನ್ನು ಮುಕ್ತಗೊಳಿಸುತ್ತದೆ. ಆದುದರಿಂದ ನೃತ್ಯವು ಒಂದು ಕಲೆ. ನಮ್ಮ ಶರೀರದ ಸಂವೇದನೆಯನ್ನು ಶುದ್ಧಗೊಳಿಸುವ ಇದು ಒಂದು ವಿಧಾನ. ಶುಭರಾಯರು ಪ್ರಾಯಶಃ ತನ್ನದೇ ಆದ ಸೃಜನಶೀಲ ಲಯವನ್ನು ದೈವೀ ನೃತ್ಯ ಮಾಡುವಾಗ್ಗೆ ಕಂಡುಕೊಂಡರು.

ಸೃಜನಶೀಲ ಆತ್ಮದ ಪುರಾತತ್ವ ವಿದ್ಯೆ

ಜೀವಿತ ಮಾತ್ರಕ್ಕೆ ಬದುಕುವ ಜನರು ಜೀವಿತ ಮಾತ್ರಕ್ಕೋಸ್ಕರ ಶ್ರಮ ಪಡುವರು; ತಮ್ಮನ್ನು ಒಂದು ಶರೀರ ಹಾಗೂ ಮನವೆಂದು ಭಾವಿಸುವರು. ಆದರೆ ಕೆಲವು ಆತ್ಮಗಳು, ಶರೀರ ಹಾಗೂ ಮಾನಸಿಕ ಸ್ತರದಲ್ಲಿ ಬದುಕುತ್ತಾ ಜೀವನದ ವಿಕಾಸದ ಉಚ್ಚ ಧ್ಯೇಯಕ್ಕೋಸ್ಕರ ಪ್ರವೃತ್ತರಾಗುತ್ತಾರೆ. ಅವರು ಬರೇ ಶರೀರ ಮನಸ್ಸು ಈ ಸ್ತರದಲ್ಲಿ ಮಾತ್ರವಲ್ಲ, ಆತ್ಮ ಹಾಗೂ ಚೈತನ್ಯ (soul and spirit)ದ ಸ್ಥಿತಿಗೆ ಏರಿರುತ್ತಾರೆ. ಈ ಸೃಜನಶೀಲ ಸ್ಥಿತಿಯು ಯಾವಾಗ ಮಾನವನ ಆತ್ಮವು (ರಾಧೆಯು) ಭಗವಂತನ ಚೈತನ್ಯದೊಡನೆ (ಕೃಷ್ಣ), ಅನ್ಯೋನ್ಯ ಕ್ರೀಡಿಸುತ್ತಾನೋ ಆಗ ಉದ್ಭವಿಸುತ್ತದೆ. ಕಲೆಯ ಮುಖ್ಯ ಪಾತ್ರವೆಂದರೆ ಮಾನವನನ್ನು ಅವನ ಆತ್ಮೀಕರಣದ (soul formation) ಕಾರ್ಯಕ್ಕೆ ಪ್ರವೃತ್ತರಾಗಿ ಮಾಡುವುದು. ಇದು ಯಾವುದೇ ಸೃಜನಶೀಲ ಕಾರ್ಯಕ್ಕೆ ತಳಹದಿಯಾಗದೆ. ಆದುದರಿಂದ ಸೃಜನಶೀಲತೆಯ ಪುರಾತತ್ವದಲ್ಲಿ ಸಂವೇದನಶೀಲತೆಯ ಸ್ತರ (sensory level), ಮನಶಾಸ್ತ್ರೀಯ ಸ್ತರ (psychological level), ವಿಶ್ಲೇಷಣಾ ಸ್ತರ (analytical level), ಪ್ರತೀಕ – ಹಾಗೂ ಮಿಥ್ಯಸ್ತರ (symbol-mythic level) ಹಾಗೂ ಪೂರ್ಣಾಂಕ–ಅಧ್ಯಾತ್ಮಿಕ ಸ್ತರ (integral - spiritual level) ಹೀಗೆ ಈ ನಾಲ್ಕು ಸ್ತರಗಳು ಇರುವವು. ಈ ನಾಲ್ಕು ಸ್ತರಗಳ ಬೆಳವಣಿಗೆಗೆ – ಅಂದರೆ ಪೂರ್ಣ ಹಾಗೂ ಸಾರ್ಥಕ ಜೀವನದ ಗುರಿಯನ್ನು ಸಾಧಿಸಲು "ಹೋ"ಕಾರ (ಹೂಂ) (ದೃಢೀಕರಣ) (affirmation) ತಾಲೀಮು (exercise) ಹಾಗೂ ಸೃಜನಶೀಲ ಇಚ್ಛಾ ಶಕ್ತಿಗಳು ಇವುಗಳ ಅಗತ್ಯವಿದೆ. ಶುಭರಾಯರಲ್ಲಿ ಈ ನಾಲ್ಕೂ ಸ್ತರಗಳು ಬೇರ ಬೇರೆಯಾಗಿ ಅಲ್ಲ ಆದರೆ ಒಟ್ಟೊಟ್ಟಾಗಿ ಕಾರ್ಯ ಮಾಡುವುದನ್ನು ಕಾಣಬಹುದು. ಇದರಿಂದಾಗಿ ಅವರಿಗೆ ವಿವಿಧ ರಂಗಗಳಲ್ಲಿ ಅಭಿರುಚಿ ಹುಟ್ಟಿತ್ತು – ಚಿತ್ರಕಲಾವಿದ, ಕವಿ, ನಟ, ಅಭಿಕಲ್ಪಕಾರ, ಸಮಾಜ ಸುಧಾರಕ, ಅಧ್ಯಾತ್ಮ ನೇತಾ, ಮಾನವ ಅವ್ಯಕ್ತ ಶಕ್ತಿಯ ಪ್ರೇರಕ ಹಾಗೂ ದೈವೀಕಾರ್ಯಕ್ಕೆ ದೇವರದೂತ. ಅಂತಹ ಬೃಹತ್ ಶಕ್ತಿಯ ಆತ್ಮಗಳು ಮಾನವ ಚರಿತ್ರೆಯಲ್ಲಿ ಸ್ವಯಂಪ್ರೇರಿತರಾಗಿ ವಿವಿಧ ರಂಗಗಳಲ್ಲಿ ಅಭಿರುಚಿಯನ್ನು ತೋರಿಸಿದ್ದಾರೆ. ಅವರು ಉತ್ಸಾಹದಿಂದಲೂ, ಆಕರ್ಷಕವಾಗಿಯೂ, ಸಕ್ಷಮವಾಗಿಯೂ ವಿವಿಧ ಕಾರ್ಯಗಳನ್ನು ಮಾಡಿದ್ದಾರೆ. ಮೆದುಳಿನ ಮೇಲೆ ನಡೆದ ಆಧುನಿಕ ಶೋಧನೆಗಳು, ಮಾನವನ ಮೆದುಳಿ

ನಲ್ಲಿ ಕೋಟ್ಯನುಕೋಟಿ ಕೋಶಗಳು, ಜೀವನದಲ್ಲಿ ಉಪಯೋಗಿಸಲ್ಪಡುವುದಿಲ್ಲ ಎಂಬ ವಿಚಾರವನ್ನು ಸಾಧಿಸಿವೆ. ಮಾನವನು ವಿವಿಧ ರೀತಿಯ ಹಲವಾರು ಕಾರ್ಯಗಳನ್ನು ಮಾಡಲು ಬಲ್ಲ ಹಾಗೂ ಇವೆಲ್ಲಾ ಕಾರ್ಯಗಳನ್ನು ಏಕಕಾಲದಲ್ಲಿ (simulta neously) ಒಟ್ಟೊಟ್ಟಿಗೆ ಹಾಗೂ ಒಂದೇ ವೇಳೆ ಮಾಡಲು ಬಲ್ಲ ಎಂದು ಈ ಶೋಧನೆ ಸಾಧಿಸಿದೆ. ಈ ಶಕ್ತಿಯನ್ನು "ವಿವಿಧ ಮಾರ್ಗಕ್ರಮಣ'' (multi tracking) ಎಂದು ಕರೆಯಲಾಗಿದೆ. ಅಸ್ತಿತ್ವದ ನಾಲ್ಕು ಸ್ತರಗಳು ಹಾಗೂ "ವಿವಿಧ ಮಾರ್ಗಕ್ರಮಣ''ದ ಶಕ್ತಿಯಿಂದ ನಾವು ಸೃಜನಶೀಲತೆಯ ಚಮತ್ಕಾರಗಳನ್ನು ಮಾಡಬಹುದು. ಶ್ರೀ ಶುಭರಾಯರ ಅಭಿರುಚಿಗಳು ಹಾಗೂ ಶಕ್ತಿಗಳು – ಅತೀ ಕಠಿಣ ಕಾರ್ಯಗಳನ್ನು ಸೃಜನಶೀಲ ರೂಪದಲ್ಲಿ ಮಾಡಿವೆ – ಇದೊಂದು ನಮಗೆಲ್ಲಾ ಧ್ಯಾನ ಮಾಡಿ ಅರಿತುಕೊಳ್ಳಲು ಒಂದು ಉದಾಹರಣೆ.

•

ಬುದ್ಧಿಮತ್ತವು (intelligence) ದ್ವಿಮುಖಿಯಲ್ಲ – ಅದು ಒಂದು ಸಪ್ತಮುಖಿ ಸೃಜನಶೀಲ ಪುಷ್ಪ :–

ಇದು ಇನ್ನೊಂದು ಮಹತ್ವಪೂರ್ಣ ಸಂಕಲ್ಪನೆ, ಇದು ಶುಭರಾಯರ ಪ್ರತಿಭೆಯನ್ನು ತಿಳಿಯಲು ಸಹಾಯಕವಾಗುತ್ತದೆ. ಈ ಸಂಕಲ್ಪನೆ ಹಾಗೂ ಮಾರ್ಗವು ಅಮೆರಿಕಾದಲ್ಲಿರುವ "ವಿಕಾಸ ಕೇಂದ್ರ''ಗಳಲ್ಲಿ ಕಾರ್ಯಗತವಾಗುತ್ತಿವೆ. ಈ ಸಂಕಲ್ಪನೆಯ ಆದರ್ಶವು ಶೈಕ್ಷಣಿಕ ಕ್ಷೇತ್ರ ರೂಢಿಯಲ್ಲಿದ್ದ ಮಾರ್ಗವನ್ನು ಬದಲಿಸಿ, ಸೃಜನಶೀಲತೆಯ ವಿಕಾಸಕ್ಕೆ ಕಾರಣವಾಗಿದೆ. ಬುದ್ಧಿಮತ್ತದ ಸಂಕಲ್ಪನೆಯು ಈಗ ಬಹಳ ಪ್ರವೃದ್ಧಿಸಲ್ಪಟ್ಟು, ಇದರಲ್ಲಿ ಅನೇಕಾನೇಕ "ಕ್ಷಮತೆ'' (capaciteis)ಗಳು ಸಮಾವಿಷ್ಟಗೊಂಡಿವೆ. ಬುದ್ಧಿಮತ್ತವು ದ್ವಿಮುಖಿಯಲ್ಲ, ಅದು ಒಂದು ಸಪ್ತಮುಖಿ ಸೃಜನಶೀಲ ಪುಷ್ಪ. ಡಾ. ಹೋವಾರ್ಡ್ ಗಾರ್ಡನರ್ ಎಂಬ ಮನೋಶಾಸ್ತ್ರಜ್ಞರು ಬಹುಸ್ತರೀಯ ಬುದ್ಧಿಮತ್ತನ್ನು ಈಚೆಗಿನ "ಮನಸ್ಸಿನ ಚೌಕಟ್ಟು'' ಎಂಬ ತಮ್ಮ ಪುಸ್ತಕದಲ್ಲಿ ವಿಕಾಸಗೊಳಿಸಿದ್ದಾರೆ. ಈ ಏಳು ಬುದ್ಧಿಮತ್ತಗಳು ಯಾವುವೆಂದರೆ : 1. ಭಾಷಾ ವಿಷಯಕ (lingustic) 2. ತರ್ಕ–ಬದ್ಧ–ಗಣಿತ (logical mathematical) 3. ಸಂಗೀತಮಯ (musical) 4. ಅವಕಾಶ/ದೃಕ್ (space-kinesthetic) 6. ವ್ಯಕ್ತಿ–ವ್ಯಕ್ತಿ ಸಂಬಂಧಿತ (inter personal) 7. ವ್ಯಕ್ತಿ–ಅಂತರಿಕ (intra personal) ಇವುಗಳಲ್ಲಿ ಪ್ರತಿಯೊಂದು ಬುದ್ಧಿಮತ್ತಯು ಸ್ವತಂತ್ರವಾಗಿದೆ. ಪ್ರತಿಯೊಂದು ಬುದ್ಧಿಮತ್ತಗೆ ಅದರದೇ ಆದ ಪೋಷಣೆ ಹಾಗೂ ವಿಕಾಸ ಶಕ್ತಿಯಿದೆ. ದುರದೃಷ್ಟದಿಂದ ನಮ್ಮ ಶ್ರೇಷ್ಠ ಶಾಲೆಗಳಲ್ಲಿ ಹಾಗೂ ವಿಶ್ವವಿದ್ಯಾಲಯಗಳಲ್ಲಿ ಭಾಷಾ ವಿಷಯಿಕ ಹಾಗೂ ತರ್ಕಬದ್ಧ–ಗಣಿತ ಈ ಎರಡೇ ಬುದ್ಧಿಮತ್ತಗಳನ್ನು ಕಲಿಸುತ್ತಾರೆ ಹಾಗೂ ಇವುಗಳಿಗೆ ಪ್ರತಿಫಲವೀಯುತ್ತಾರೆ. ಉಳಿದ ಐದು ಬುದ್ಧಿಮತ್ತಗಳೂ ಕೂಡಾ ಪ್ರಾಮುಖ್ಯವಾಗಿದ್ದು, ವ್ಯಕ್ತಿತ್ವದ ಪೂರ್ಣ ವಿಕಾಸಕ್ಕೆ ಮೂಲಭೂತವಾಗಿದ್ದರೂ ಅವುಗಳನ್ನು ಉಪೇಕ್ಷೆ ಮಾಡಲಾಗಿದೆ. ನಮ್ಮ

ಪಾರಂಪರಿಕ ಮಾನವ ವಿಕಾಸದ ಪ್ರಥಮ ಮರ್ಯಾದಿತವಾಗಿದ್ದು, ನಾವು ಮನುಷ್ಯರನ್ನು ಮರ್ಯಾದಿತ (limit) ಸಂದರ್ಭ ಹಾಗೂ ಕಸೋಟಿ (criteria)ದಲ್ಲಿ ಮೂಲ್ಯಾಂಕನ ಮಾಡುತ್ತೇವೆ. ಮೂಲ್ಯಾಂಕನ ಮಾಡಲ್ಪಡುವ ವ್ಯಕ್ತಿಯು ಇನ್ನೆಷ್ಟೋ ವಿಧದಲ್ಲಿ ಹಾಗೂ ಕ್ಷೇತ್ರಗಳಲ್ಲಿ ಹೆಚ್ಚು ಬುದ್ಧಿವಂತನೋ ಎಂಬುದನ್ನು ನಾವು ತಿಳಿಯುವ ಗೊಡವೆಗೆ ಹೋಗುವುದಿಲ್ಲ. ಬುದ್ಧಿಮತ್ತದ ಬೃಹತ್ ವ್ಯಾಪ್ತಿ ಈ ಆದರ್ಶವು ನಮಗೆ ಏನನ್ನು ಸೂಚಿಸುತ್ತದೆಂದರೆ ಪ್ರತಿಯೊಬ್ಬ ಮನುಷ್ಯನು ಏಳು ಬುದ್ಧಿಮತ್ತೆಗಳಲ್ಲಿ, ಯಾವುದಾದರೂ ಒಂದರಲ್ಲಿ ಹಾಗೂ ಕೆಲವು ಒಂದಕ್ಕಿಂತ ಹೆಚ್ಚಿನ ಬುದ್ಧಿಮತ್ತೆಗಳಲ್ಲಿ ಯೋಗ್ಯನಿರಬಹುದು. ನಾನೀಗ "ಎಂಕ್ ಗಿಲ್" ಎಂಬ ಕಲಾವಿದನ ಕುರಿತು ಹೇಳುತ್ತೇನೆ. ಅವನೆಂದಿದ್ದಾನೆ – "ಪ್ರತಿಯೊಬ್ಬ ಕಲಾವಿದನು ವಿಶೇಷ ತರಹದ ಮನುಷ್ಯನಾಗಿರಲಿಕ್ಕಿಲ್ಲ. ಆದರೆ ಪ್ರತಿಯೊಬ್ಬ ಮನುಷ್ಯನು ವಿಶೇಷ ತರಹದ ಕಲಾವಿದನಾಗಿದ್ದಾನೆಂದು" ಪ್ರತಿಯೊಬ್ಬನಿಗೂ ಬೆಳೆಯಲು ಹಾಗೂ ವಿಕಾಸಗೊಳ್ಳಲು ಸಂಧಿ ಸಿಕ್ಕಿದರೆ ಈ ಬುದ್ಧಿಮತ್ತೆಗಳು ಬೆಳೆದು ಪೂರ್ಣತೆಯ ಸೃಜನಶೀಲತೆ ಹಾಗೂ ವ್ಯಾಪಕ ವ್ಯಕ್ತಿತ್ವವನ್ನು ಹೊಂದಲು ಸಹಾಯಕವಾಗುತ್ತವೆ. ಶುಭರಾಯರು ಹೇಗೆ ಚಿತ್ರ, ಸಂಗೀತ, ಕವಿತೆ, ನೃತ್ಯ ಇತ್ಯಾದಿಗಳಲ್ಲಿ ಅಭಿರುಚಿ ತೋರಿಸಿದರು ಹಾಗೂ ಅವರೊಳಗಣ ಅಭಿರುಚಿಗಳು ಏಳು ದಳಗಳ ಒಂದು ಪುಷ್ಪವಾಗಿ ಬೆಳೆಯಲ್ಪಟ್ಟಿತು ಎಂಬುದನ್ನು ಇದು ನಮಗೆ ತೋರಿಸಿಕೊಡುತ್ತದ.

ಜೀವನದ ಕೆನ್ವಾಸಿನ ಮೇಲೆ (canvas of life) ಶ್ರೀ ಶುಭರಾಯರ ಚಿತ್ರಗಳು

ತಮ್ಮ ಸೃಜನಶೀಲ ಅನುಕರಣೆಗಳೊಡನೆ, ಅವರ ಜೀವನಕ್ಕೆ ವ್ಯಾಪಕ ಮಹತ್ವವಿದ್ದಿತ್ತು. ಅದು ಬಿಂದು ಚೇತನಾತ್ಮಕ ಜೀವನ. ಆ ಅನುಭವಾತೀತ, ಆ ಪಾರಲೌಕಿಕ (other world)ವನ್ನು ಪ್ರತಿನಿತ್ಯವೂ ಧ್ಯಾನದ ಮೂಲಕ ತಲುಪುತ್ತಿದ್ದು, ಅವುಗಳಿಂದಾಗಿ ಕಲೆಯ ಸೃಜನಶೀಲತೆಯನ್ನು ಹಾಗೂ ಆಧ್ಯಾತ್ಮದ ಗಹನತೆಯ ಅದ್ವಿತೀಯ ಸಮಷ್ಟಿ ಗುಣ (unique gestalte) ವನ್ನು ತರುತ್ತಿದ್ದುವು. ರಾಜಯೋಗದ ಅಭ್ಯಾಸ ಹಾಗೂ ಪಂಡರಾಪುರದ ವಿಠ್ಠಲ ದೇವರ ಭಕ್ತಿ–ತತ್ವಜ್ಞಾನಗಳ ಹಾಡುಗಳನ್ನು ಹಾಡುತ್ತಾ ಹಾಗೂ ಸಂತರ ವಚನಗಳನ್ನು ಕೀರ್ತನೆಯ ಮೂಲಕ ಹರಡಿಸುವುದು. ಆತ್ಮ–ಪ್ರತೀತಿಯಿಂದ ಮಾತ್ರ ಯಾರಿಗೊಬ್ಬನಿಗೆ ನಿಜವಾಗಿ ಮಾನವ ಹಾಗೂ ದೈವೀಕೃಪೆಯ ಮೂರ್ತಿಸ್ವರೂಪಗೊಳ್ಳುವುದು (embodiment of divine grad) ಸಾಧ್ಯವೆಂದು ಸಂದೇಶ ನೀಡುವುದು – ನಾವು ಅವರ ಕೃತಿಗಳನ್ನು ಓದಿದಾಗ, ಅವರು ಆತ್ಮದ ಸ್ತೋತ್ರವನ್ನು ಮುಟ್ಟಿದ್ದಾರೆಂಬ ಅರಿವು ನಮಗಾಗುತ್ತದೆ ಹಾಗೂ ಪೂರ್ಣ ಚೈತನ್ಯದ ಶಕ್ತಿಯಿಂದ ಕ್ರಿಯಾಶೀಲರಾಗುತ್ತಿದ್ದರು. ಜೀವಿಸುವುದು ಅವರಿಗೆ ಒಂದು ಬೃಹತ್ ಕಲೆಯಾಗಿತ್ತು ಹಾಗೂ ಬೃಹತ್ ಕವಿತೆ ಮತ್ತು ಬೃಹತ್ ನೃತ್ಯ. ಜೀವಿಸುವುದು ಬರೇ ಬದುಕಲು ಮಾತ್ರವಲ್ಲ, ಅದು ಚೇತನದ ವಿಕಾಸ ಹಾಗೂ ಸಾಹಸಕ್ಕೋಸ್ಕರ.

ಸೋಲಾಪುರದ ಸುತ್ತಮುತ್ತಲಿನ ಜನರು ಪರಂಪರಾಗತರು ಹಾಗೂ ಸಂಪ್ರದಾಯಬದ್ಧರು – ಹೀಗಾದ್ದರಿಂದ ಕೆಲವೊಮ್ಮೆ ಅವರು ಚೇತನದ ಬಂಡಕೋರ (spirit rebellians) ರಾಗಬೇಕಾಗುತ್ತಿತ್ತು. ಆದರೆ ಅವರು ಈ ಜನರನ್ನು ಪ್ರೀತಿಸುತ್ತಿದ್ದರು. ಅವರ ಕೇಂದ್ರ ಬಿಂದುವು ಆಧ್ಯಾತ್ಮಿಕ ಸಾಧನೆಯಾಗಿತ್ತು. ಇನ್ನೂ ಹೆಚ್ಚಿನ ಮಟ್ಟದ ಚೈತನ್ಯಕ್ಕೆ ಮುಟ್ಟುವ ಸಾಹಸ. ಆಧ್ಯಾತ್ಮವು ಅವರಿಗೆ ಜೀವನದ "ನ"ಕಾರವಾಗಿರದೆ, ಅದು "ಹೋ" (ಹೂಂ) ಕಾರವಾಗಿತ್ತು, ದೃಢೀಕರಿಸುತ್ತಿತ್ತು. ಮನಸ್ಸಿನ ದೃಢೀಕರಣ, ಇಂದ್ರಿಯಗಳ ಆತ್ಮದ ದೃಢೀಕರಣ, ಆಧ್ಯಾತ್ಮವು ಅವರಿಗೆ ಸಮತೋಲನೆಯ ಸಾಹಸ ವಸ್ತು ಮತ್ತು ಚೈತನ್ಯ, ದೇಹ ಮತ್ತು ಚೈತನ್ಯ, ಪ್ರಕೃತಿ ಮತ್ತು ಪುರುಷ ಈ ಎರಡು ಧ್ರುವಗಳ ಸ್ವರ ಸಂವಾದ ವಾಗಿತ್ತು. ಅವರಿಗೆ ಜೀವನವೆಲ್ಲವೂ ದೈವೀಕವಾಗಿತ್ತು ಯಾರಿಗಾದರೂ ಯೋಗ ಮತ್ತು ಭಕ್ತಿಯಿಂದ ಮಾತ್ರ ಈ ದೈವಿಕ ಶಕ್ತಿಯನ್ನು ಸುತ್ತಮುತ್ತ ಎಲ್ಲಾ ಕಡೆ ಅನುಕಂಪಿಸಲು ಸಾಧ್ಯ. ಮಾನವನ ವಿಕಾಸಗೊಳ್ಳುತ್ತಿರುವ ಆತ್ಮವು "ರಾಧೆ"ಯು, ಪರಮಶ್ರೇಷ್ಠ ದೈವೀ ಶಕ್ತಿ – "ಕೃಷ್ಣ"ನೊಡನೆ ನೃತ್ಯಗೈಯುವುದು ಹಾಗೂ ಸಂತ ವಲ್ಲಭಾಚಾರ್ಯರ ಪುಷ್ಠಿ ಮಾರ್ಗವು ಸ್ವರಸಂವಾದದ ಪಥವನ್ನ ತೋರಿಸುತ್ತವೆ. ಅವರ ಕಲಾಕೃತಿಗಳ ಸಾರಾಂಶ ವನ್ನು ಮೂರು ಶಬ್ದಗಳ ಮೂಲಕ ನಾವು ಹೇಳಬಹುದು – ಆನಂದ, ಲಯ ಮತ್ತು ಸೃಜನಶೀಲತೆ. ಅದು ಆಧ್ಯಾತ್ಮ ಕೇಂದ್ರೀಕೃತ ಸೃಜನಶೀಲತೆಯ ಪಥ – ಪ್ರತಿನಿತ್ಯವೂ ಸ್ವರ್ಗದ ಲಯದೊಡನೆ ಸ್ವರಮಿಲನ ಹಾಗೂ ಸೃಜನಶೀಲತೆಯ ಆನಂದಿಂದ ನೃತ್ತಿಸುವುದು.

ನಾವು ಸಂತ ಕವಿ ಕಬೀರರು ಇದೇ ಧ್ವನಿಯಲ್ಲಿ ಹಾಡಿದ್ದನ್ನು ಇಲ್ಲಿ ಉಲ್ಲೇಖಿಸಬಹುದು:–

ನೃತ್ಯಗೈಯು, ನನ್ನ ಹೃದಯವೇ, ಇಂದು ಆನಂದದಿಂದ ನೃತ್ಯಗೈಯ್ಯು;
ಪ್ರೇಮದ ಶ್ರಮವು ದಿನ–ರಾತ್ರಿಗಳನು, ಸಂಗೀತದಿಂದ ತುಂಬುವುದು
ವಿಶ್ವವು ಅದರ ಮಧುರತೆಯನ್ನು ಆಲಿಸುತ್ತಿಹುದು
ಆನಂದಿಂದ ಮತ್ತರಾಗಿ ಜೀವ ಮತ್ತು ಸಾವು ಈ ಸಂಗೀತ ಲಯಬದ್ಧವಾಗಿ ನೃತ್ತಿಸುತ್ತಿಹುದು
ಗುಡ್ಡಗಳು, ಸಮುದ್ರ ಹಾಗೂ ಪೃಥ್ವಿಯು ನಲಿಯುತ್ತಿಹುದು
ಮಾನವನ ವಿಶ್ವವು ನಗು ಹಾಗೂ ಕಣ್ಣೀರಲ್ಲಿ ನಲಿಯುತ್ತಿಹುದು
ವೀಕ್ಷಿಸು! ನನ್ನ ಹೃದಯವು ನೂರು ಕಲೆಗಳ ಆನಂದದಲ್ಲಿ ನೃತ್ತಿಸುತ್ತಿಹುದು
ಸೃಷ್ಟಿಕರ್ತನು ಬಹಳ ಸಂತಸಗೊಂಡಿಹನು

ಶ್ರೀ ಸಂತ ಶುಭರಾಯ ಮಹಾರಾಜರು ಈ ತರಹದ ಶಬ್ದಗಳಿಂದ ಈ ಲೇಖನ ವನ್ನು ಮುಗಿಸಬಹುದು :– "ನಾನು ಸ್ತೋತ್ರದಲ್ಲಿ ಕುಡಿದಿದ್ದೇನೆ ಮತ್ತು ಪ್ರತಿ ಯೊಬ್ಬರನ್ನು ಅಲ್ಲಿ ತರಲು ಇಚ್ಛಿಸುತ್ತೇನೆ. ಆ "ಶಾಶ್ವತ ರಾಜ್ಯ"ದಲ್ಲಿ ಆನಂದಗೊಂಡು, ಆಡಿದ ನಂತರ ನೀವೂ ಕೂಡಾ ಉಳಿದ ನೀರನ್ನು ಆ "ಆನಂದದ ರಾಜ್ಯ"ಕ್ಕೆ ತರಲು ಇಚ್ಛಿಸುವಿರಿ.

ಚಿತ್ರಕಲೆ ಮತ್ತು ಶುಭರಾಯರು

ಅ.ಲ. ನರಸಿಂಹನ್

ಐತಿಹಾಸಿಕವಾಗಿ ಶುಭರಾಯರ ಮೊದಲಿನ ಜೀವನದ ಬಗೆಗೆ ಹೆಚ್ಚು ತಿಳಿದು ಬರುವುದಿಲ್ಲ. ಕರ್ನಾಟಕದ ಕೋಲಾರ ಜಿಲ್ಲೆಯ ಮಾಲೂರಿನಲ್ಲಿ 1750ರಲ್ಲಿ ಜನಿಸಿದ ಮೇಲೆ ಟಿಪ್ಪುವಿನ ರಾಜ್ಯಭಾರದಲ್ಲಿ ಒಬ್ಬ ಹಿರಿಯ ಅಧಿಕಾರಿಯಾಗಿದ್ದು ಕಾರಣಾಂತರದಿಂದ ರಾಜ್ಯ ತ್ಯಜಿಸಿದುದಾಗಿ ತಿಳಿದುಬರುತ್ತದೆ. ಸೊಲ್ಲಾಪುರದ ಹಳೆಯ ಗ್ಯಾಸೆಟಿಯರ್‌ನಲ್ಲಿ ಉಪ ದಿವಾನರಾಗಿದ್ದರೆಂದೂ ಬಲಾತ್ಕಾರವಾಗಿ ಮತಾಂತರ ಹೊಂದಲು ನಿರಾಕರಿಸಿ ರಾಜ್ಯ ಬಿಟ್ಟುದುದಾಗಿ ತಿಳಿಸುತ್ತದೆ, ಎಂದು ಉಲ್ಲೇಖಿಸುವುದನ್ನು ಜೋಶಿ ಮತ್ತು ದೇಸಾಯಿಯವರು ಒಪ್ಪಿಕೊಳ್ಳುತ್ತಾರೆ. ಆದರೆ ಬುವಾ ಅವರು ಉಪ ಪ್ರಧಾನಿಯಾಗಿದ್ದ (ಡೆಪ್ಯುಟಿ ಪ್ರೈಮ್ ಮಿನಿಸ್ಟರ್)ರೆಂದು ಅಭಿಪ್ರಾಯಪಡುತ್ತಾರೆ. ಹೈದರ್ ಮತ್ತು ಟಿಪ್ಪುವಿನ ಬಗೆಗೆ ಹತ್ತಿಪ್ಪತ್ತು ಪ್ರೌಢ ಗ್ರಂಥಗಳು ಬಂದಿದ್ದು ಅವುಗಳಲ್ಲಿ ಶುಭರಾಯರ ಬಗೆಗೆ ಯಾವುದೇ ನಿಖರ ಮಾಹಿತಿಗಳು ದೊರೆಯುವುದಿಲ್ಲ. ಕಬೀರ್ ಕಾಸರ್ ಅವರು ತಮ್ಮ 'ಸೀಕ್ರೆಟ್ ಕರೆಸ್ಪಾಂಡೆನ್ಸ್ ಆಫ್ ಟಿಪ್ಪು ಸುಲ್ತಾನ್'ನಲ್ಲಿ ಕೃಷ್ಣರಾವ್, ಶಿವಾಜಿ ಇತ್ಯಾದಿ ಹಿಂದು ಅಧಿಕಾರಿಗಳು ಟಿಪ್ಪುವಿನ ಜೊತೆ ಇದ್ದುದಾಗಿ ತಿಳಿಸುತ್ತಾ ಸುಬ್ಬರಾವ್ ಎಂಬಾತ 'ಪ್ರಿನ್ಸಿಪಲ್ ಪ್ರೈವೇಟ್ ಸೆಕ್ರೆಟರಿ' ಆಗಿದ್ದರೆಂದು ಹೇಳುತ್ತಾರೆ (ಪು. 45). ದೇಸಾಯಿಯವರು ಶುಭರಾಯರು 'ಪೇಷ್ಕಗಾರ'ರಾಗಿದ್ದರೆಂದು ಹೇಳುವುದಕ್ಕೆ ಆಧಾರವೇನೋ ತಿಳಿದುಬರುವುದಿಲ್ಲ. ಪೇಷ್ಕಾರ (ತೆರಿಗೆ ವಸೂಲು ಮಾಡುವ ಒಬ್ಬ ಅಧಿಕಾರಿ) ಎಂದು ಅವರ ಅಭಿಪ್ರಾಯವಿರಬಹುದು.

ಈ ಬಗೆಗೆ ಆಳವಾಗಿ, ವೈಜ್ಞಾನಿಕವಾಗಿ ಅಧ್ಯಯನ ಮಾಡಿರುವ ಬಿ.ಡಿ. ತಿವಾರಿಯವರು ಮದ್ರಾಸಿನ ರಾಜ್ಯ ಪತ್ರಾಗಾರದಲ್ಲಿಯ ಸಮಕಾಲೀನ ದಾಖಲೆಗಳನ್ನು ಅಭ್ಯಸಿಸಿ ಶುಭರಾಯ ಪೇಷ್ಕಾರ್ ಆಗಿದ್ದರು ಎಂದು ತಿಳಿಸುವರಲ್ಲದೆ ಶುಭರಾಯರ ಮನೆತನದ ಬಗೆಗೆ ಕೆಲ ವಿಷಯ ತಿಳಿಸುತ್ತಾರೆ. ಅಂತೆಯೇ ಯುದ್ಧದಲ್ಲಿ ಸೋತ ಟಿಪ್ಪು

ಕಾನ್‌ವಾಲೀಸ್‌ಗೆ ಕನ್ನಾವೆ ಎಂಬ ಅಧಿಕಾರಿಯ ಮೂಲಕ ಒಪ್ಪಿಸಿದ ವಿವಿಧ ಕಂದಾಯಗಳ ವಿವರದಲ್ಲಿ ಸತ್ಯ ಮರೆಮಾಚಿದ್ದು ಆ ಬಗೆಗೆ ನಿಜ ಸಂಗತಿ ಕೇಳಬಹುದೆಂಬ ಹೆದರಿಕೆಯಿಂದಾಗಿ ಶುಭರಾಯರು ರಾಜಧಾನಿ ತ್ಯಜಿಸಿದರು ಎಂದು ತಿಳಿಸುತ್ತಾರೆ.

ಆದರೆ ಈ ಆಕರಗಳನ್ನು ಉಳಿದ ಇತಿಹಾಸಕಾರರು ಬಳಸಿದಂತೆ ಕಂಡುಬರುವುದಿಲ್ಲ. ಫೆಬ್ರವರಿ 1792ರಲ್ಲಿ ನಡೆದ ಮೈಸೂರು ಯುದ್ಧದಲ್ಲಿ ಟಿಪ್ಪು ಸೋತಾಗ ಆತನ ವಕೀಲರು ಕಾರನ್‌ವಾಲೀಸ್ ನೇಮಿಸಿದ ಜಾನ್ ಕೆನ್ನಾವೆಯ ಮೂಲಕ ಸಂಧಾನ ಮಾಡಿದ್ದು, ಬ್ರಿಟಿಷರು ಅಪಾರ ಹಣ ಬಯಸಿದ್ದು ಅದಕ್ಕಾಗಿ ಟಿಪ್ಪುವಿನ ಮಕ್ಕಳನ್ನು ಒತ್ತೆ ಇಟ್ಟುಕೊಂಡಿದ್ದು, ಈ ಘಟನೆಯ ನಂತರ ಟಿಪ್ಪುವಿನ ಮನಃಸ್ಥೈರ್ಯ ಇನ್ನಷ್ಟು ಕುಗ್ಗಿದ್ದು ಇತ್ಯಾದಿ ಹಲವಾರು ವಿವರಗಳು ದೊರೆಯುತ್ತವೆ. (ಐ.ಮಾ. ಮುತ್ತಣ್ಣ, ಟಿಪ್ಪು ಸುಲ್ತಾನ್, 'ಎಕ್' ರೇಡ್, 1980)

ಈ ಸಂದರ್ಭದಲ್ಲಿ ಟಿಪ್ಪುವಿನ 'ವಕೀಲ'ರಲ್ಲಿ ಒಬ್ಬರಾಗಿ ಶುಭರಾಯರೂ ಇದ್ದಿರಬಹುದು. ಬ್ರಿಟಿಷರ ಸಮಯಸಾಧಕತನ, ಟಿಪ್ಪುವಿನ ಅಸಹಾಯಕತೆ ಹಾಗೂ ಮತಾಂಧತೆ, ಮರಾಠರು ಮತ್ತು ನಿಜಾಮರು ಒಮ್ಮೆ ಇತ್ತ ಒಮ್ಮೆ ಅತ್ತ ಹೋಗುತ್ತಿದ್ದ ರಾಜಕೀಯ ಚದುರಂಗದಾಟ. ಟಿಪ್ಪುವಿನ ಪರವಾಗಿದ್ದ ಫ್ರೆಂಚರ ಹಿಂಜರಿತ ಇತ್ಯಾದಿಗಳಿಂದಾಗಿ, 1792ರ ಫೆಬ್ರವರಿ–ಮಾರ್ಚ್ ತಿಂಗಳುಗಳಲ್ಲಿ ಶ್ರೀರಂಗಪಟ್ಟಣದಲ್ಲಿ ಕ್ಷೋಭೆ ತುಂಬಿದ ವಾತಾವರಣವಿದ್ದು ಕವಿ–ಕಲಾವಿದ ಹೃದಯದ ಶುಭರಾಯರು ರಾಜಧಾನಿ ತ್ಯಜಿಸಿ ಆತ್ಮಶಾಂತಿ ಹುಡುಕುತ್ತಾ ಪ್ರಶಾಂತ ಸೋಲ್ಲಾಪುರಕ್ಕೆ ಬಂದಿರಲೂ ಸಾಕು.

ಇಲ್ಲಿಯ ಪ್ರಬಂಧಕಾರರುಗಳು ಶುಭರಾಯರು ಕವಿಯಾಗಿ, ಕಲಾವಿದರಾಗಿ, ಸಂಗೀತಗಾರರಾಗಿ ತಮ್ಮ ನೃತ್ಯ, ಸಂಗೀತ, ಚಿತ್ರಕಲೆಯ ಮೂಲಕ ಪಾಂಡುರಂಗನನ್ನು ಅತ್ಯಂತ ಭಕ್ತಿ–ಭಾವದಿಂದ ಸೇವಿಸಿರುವ ಬಗೆಗೆ ವಿವರಿಸಿದ್ದಾರೆ. ಶುಭರಾಯರು ವರ್ಷವಿಡೀ ಚಿತ್ರ ರಚಿಸುತ್ತಿದ್ದಿರಲಾರರು, ಆದರೆ ಸಂಗೀತ ಸಂಕೀರ್ತನೆಗಳು, ಭಜನೆ–ನೃತ್ಯಗಳು ದಿನನಿತ್ಯ ನಡೆಯುತ್ತಿದ್ದಿರಬಹುದು. ಆದರೆ ಆಷಾಢ, ಕಾರ್ತೀಕ ಏಕಾದಶಿ ಇತ್ಯಾದಿ ಹಬ್ಬ–ಹರಿದಿನಗಳಂದು ಮಠ ಹಾಗೂ ಮಂಟಪಗಳನ್ನು ಅಲಂಕರಿಸುವ ವೇಳೆಯಲ್ಲಿ ಮಾತ್ರ ಚಿತ್ರಕಲೆ ಹಾಗೂ ಕಾಗದದ ಹಾಳೆಗಳಿಂದ ಕತ್ತರಿಸಿದ ಆಕೃತಿಗಳ ಬಳಕೆಯಾಗುತ್ತಿತ್ತು. ಎಂದರೆ ಚಿತ್ರಕಲೆ ಒಂದು ಜನಪದ ವಿಧಿಕ್ರಿಯಾ ಸಂಬಂಧದಲ್ಲಿ (ರಿಚುಯಲ್) ಇಂದಿಗೂ ಬಳಕೆಯಾಗುವಂತೆ ಶುಭರಾಯರ ಮಠದಲ್ಲಿಯೂ ಬಳಕೆಯಾಗುತ್ತಿತ್ತು. ಈ ಕಾರಣಕ್ಕಾಗಿ ಬಾಬುರಾವ್ ಸಾದ್ವೇಲ್ಕರ್ ಅವರು ಕಥನೋದ್ದೇಶ ಚಿತ್ರ, ಪಠ ಇತ್ಯಾದಿ ಜನಪದ ಚಿತ್ರಗಳ ಬಗೆಗೆ ವಿಸ್ತರಿಸಿ ಹೇಳಿ ಈ ಚಿತ್ರಗಳ ಪ್ರಭಾವ ಅಥವಾ ಪರಂಪರೆಯಲ್ಲಿ ಶುಭರಾಯರ ಚಿತ್ರಗಳನ್ನು ಇರಿಸಿ ನೋಡಿದ್ದಾರೆ. ಅಲ್ಲದೆ ಅಂದು ಪ್ರಚಲಿತವಿದ್ದ ಚಿಕಣಿ ಹಾಗೂ ಭಿತ್ತಿ ಚಿತ್ರಗಳನ್ನು ಇದರೊಂದಿಗೆ ಹೋಲಿಸಬಹುದೆಂಬ ಸೂಚನೆಯನ್ನು ನೀಡಿದ್ದಾರೆ. ಆದರೆ ದೇಸಾಯಿಯವರು ಅದು ಪ್ರಚಲಿತದಲ್ಲಿದ್ದ

ಮಹಾರಾಷ್ಟ್ರವೂ ಸೇರಿದಂತೆ ಯಾವ ಚಿತ್ರಕಲಾ ಶೈಲಿಗೂ ಶುಭರಾಯರ ಚಿತ್ರಗಳು ಹೋಲುವುದಿಲ್ಲವೆಂದು ಅಭಿಪ್ರಾಯಪಡುತ್ತಾರೆ.

ಶುಭರಾಯರ ಆಧ್ಯಾತ್ಮ ಚಿಂತನೆಗಳು, ದೈವಭಕ್ತಿ ಇತ್ಯಾದಿ ಅಲೌಕಿಕ ಪ್ರಜ್ಞೆ ಅವರು ಟಿಪ್ಪುವಿನ ಬಳಿ ಇದ್ದಾಗಲೇ ಅಂತರಂಗದಲ್ಲಿ ಇದ್ದಿರಬೇಕು. ಅಂತಹ ಧಾರ್ಮಿಕ ಪ್ರಜ್ಞೆಗೆ ಒಳಗಾದ ಮನಃಸಾಕ್ಷಿಯೇ ಅವರನ್ನು ಅಧಿಕಾರ ತ್ಯಜಿಸುವಂತೆ ಮಾಡಿದ್ದು, ಸೊಲ್ಲಾಪುರಕ್ಕೆ ಒಯ್ದಿದ್ದು, ಈ ಆಧ್ಯಾತ್ಮಿಕ ಚಿಂತನೆಗೆ ಮುಕ್ತ ಅವಕಾಶ ದೊರೆಯುವಂತಾಯಿತು. ಅಂತೆಯೇ ಚಿತ್ರ–ಸಂಗೀತಗಳೂ ಶುಭರಾಯರಲ್ಲಿ ಮೊದಲೇ ಸುಪ್ತವಾಗಿದ್ದಿರಬಹುದು. ಶುಭರಾಯರು ಜನಿಸಿದ ಮಾಲೂರು ಬಳಿಯ ಶಿವಾರಪಟ್ಟಣ ಗಂಗರ ಕಾಲದಿಂದ ಶಿಲ್ಪಕಲೆಗೆ ಪ್ರಸಿದ್ಧವಿದ್ದು, ಇಂದಿಗೂ ಅಲ್ಲಿ ಊರಿನ ತುಂಬಾ ಶಿಲ್ಪಿಗಳೇ ತುಂಬಿದ್ದಾರೆ. ಇವನ್ನೂ ಎಳೆವೆಯಲ್ಲಿ ಶುಭರಾಯರು ಕಂಡಿದ್ದಿರಬಹುದು. ಶ್ರೀರಂಗಪಟ್ಟಣಕ್ಕೆ ಹೋದ ಮೇಲೆ ಅಲ್ಲಿ ಆಗಾಗಲೇ ಇದ್ದ ಮೈಸೂರು ಶೈಲಿಯ ಚಿತ್ರಕಲೆಗೆ, ಮುಸ್ಲಿಂ ಮತದವನಾದರೂ ಹೈದರ್ ಕೊಟ್ಟ ಪ್ರೋತ್ಸಾಹದಿಂದಾಗಿ ರಚಿತವಾಗುತ್ತಿದ್ದ ಚಿತ್ರಗಳು ಶುಭರಾಯರಿಗೆ ಚಿತ್ರಕಲೆಯಲ್ಲಿಯೂ ಪರಿಶ್ರಮ ಪಡೆಯುವಂತೆ ಮಾಡಿರಬಹುದು. ಶುಭರಾಯರು ರಾಜಧಾನಿಯನ್ನು ತ್ಯಜಿಸಲು ಕಾರಣರಾದ ಕಾರನ್ ವಾಲಿಸ್‌ನ ಯುದ್ಧ ಕಾಲಕ್ಕೆ ಸಂಬಂಧಿಸಿದಂತೆ ಚಿತ್ರಕಲೆಯ ಪ್ರಸ್ತಾಪವೊಂದು ಬರುತ್ತದೆ. ಟಿಪ್ಪು ಕೋಟೆಯ ಗೋಡೆಗಳ ಮೇಲೆ ಇಂಗ್ಲಿಷ್ ಜನರನ್ನು ಹೀಯಾಳಿಸುವಂತೆ ಚಿತ್ರಗಳನ್ನು ಬರೆಯಿಸಿದ್ದನೆಂದೂ, ಆಕ್ರಮಣಕಾರರಿಗೆ ಇದು ತಿಳಿಯಬಾರದೆಂದು ಅಳಿಸಿದನೆಂದೂ ಸಮಕಾಲೀನ ಚರಿತ್ರಕಾರ ವಿಲ್ಕ್ಸ್ ಎಂಬಾತ ತಿಳಿಸಿರುವುದಾಗಿ ಉಲ್ಲೇಖಗಳಿವೆ. (ಎಂ. ಶಾಮರಾವ್, ಮಹಿಸೂರು ಸಂಸ್ಥಾನದ ಚರಿತ್ರೆ, 1894) ಅಂತೆಯೇ ಹೈದರ್ ಅಲಿ ಪೊಲ್ಲಿಲೂರಿನ ಮೇಲೆ ಯುದ್ಧ ಮಾಡಿ ಗೆದ್ದ ನೆನಪಿಗಾಗಿ 1784ರಲ್ಲಿ ಶ್ರೀರಂಗಪಟ್ಟಣದಲ್ಲಿ 'ದರಿಯಾ ದೌಲತ್' ಎಂಬ ಬೇಸಿಗೆಯ ಅರಮನೆ ಕಟ್ಟಿಸಿದಾಗ ಆ ಯುದ್ಧಕ್ಕೆ ಸಂಬಂಧಿಸಿದ ಹಾಗೂ ಸಮಕಾಲೀನ ರಾಜರುಗಳ ಹಲವಾರು ಚಿತ್ರಗಳನ್ನು ಬರೆಯಿಸಿದ್ದ. ಇಲ್ಲಿಯ ಚಿತ್ರವನ್ನು 1799ರಲ್ಲಿ ಕಂಡಿದ್ದ ಬುಕನನ್ ಎಂಬಾತ ಚಿತ್ರವೊಂದರ ಪಡಿಯಚ್ಚನ್ನು ತನ್ನ ಪುಸ್ತಕದಲ್ಲಿ ಕೊಟ್ಟಿದ್ದಾನೆ. (ಎ ಜರ್ನಿ ಫ್ರಮ್ ಮದ್ರಾಸ್ ಥ್ರೂ ದಿ ಕಂಟ್ರಿಸ್ ಆಫ್ ಮೈಸೂರ್, ಕೆನರ ಎಂಡ್ ಮಲಬಾರ್, 1804) ಈ ಭಿತ್ತಿ ಚಿತ್ರಗಳನ್ನು ಶುಭರಾಯರೂ ಕಂಡಿರಲೇಬೇಕು. ಪ್ರಭಾವಿತನಾಗಿರಲೂಬಹುದು. ಈ ಚಿತ್ರಗಳೆಲ್ಲ ಜನಜೀವನದ್ದು. ಆದರೆ ಶುಭರಾಯರು ರಚಿಸಿರುವುದೆಲ್ಲಾ ಪೌರಾಣಿಕ ದೇವಾನುದೇವತೆಗಳದು. ಮೈಸೂರು ಸಾಂಪ್ರದಾಯಿಕ ಶೈಲಿಯಲ್ಲಿಯೂ ಅಧಿಕವಾಗಿ ಪೌರಾಣಿಕ ದೃಶ್ಯಗಳೇ ಕಂಡುಬರುತ್ತವೆ. ವೃತ್ತಾಕಾರದ ಮುಖದ ಕೆಳಗೆ ಪುಟ್ಟದಾದ ಗುಂಡನೆಯ ಗದ್ದ, ಅಗಲವಾದ ಕಣ್ಣುಗಳು, ತೆಳುವಾದ ತುಟಿ, ನೀಳ ನಾಸಿಕ ಇತ್ಯಾದಿಗಳಿಂದ ಕೂಡಿದ ಮೈಸೂರು ಶೈಲಿಯ ಒಂದು ಚಿತ್ರ, ಶುಭರಾಯರ ವಿಷ್ಣುವಿನೊಂದಿಗೆ ಬಹಳವಾಗಿ ಹೋಲುತ್ತದೆ. ಅಂದು ಸಂಪ್ರದಾಯ

ಕಲಾವಿದರ ನೆಲೆಗಳಲ್ಲಿ ಒಂದಾದ ಶ್ರೀರಂಗಪಟ್ಟಣದಲ್ಲಿದ್ದ ಕಲಾವಿದರ ಸಂಪರ್ಕ ಶುಭ ರಾಯರಿಗೆ ಬಂದಿದ್ದಿರಬಹುದು. ಶುಭರಾಯರು ರಚಿಸಿದ ಏಕೈಕ ಪ್ರಕೃತಿ ದೃಶ್ಯದಲ್ಲಿ ಆನೆಗಳಿದ್ದು, ಅವನ್ನು ಮೈಸೂರಿನ ಅರಣ್ಯದಲ್ಲಿ ಶುಭರಾಯರು ಕಂಡಿದ್ದಿರಬಹುದೆಂದು ತಿವಾರಿಯವರು ಊಹಿಸುತ್ತಾರೆ. ಅಂತೆಯೇ ಮುಮ್ಮಡಿಯವರ ಕಾಲದ ಶಿಖಾರಿ ಹಾಗೂ ಖೆಡ್ಡದ ಚಿತ್ರಣಗಳು ಜಗನ್ಮೋಹನ ಚಿತ್ರಶಾಲೆಯಲ್ಲಿವೆ. ಎಂದರೆ ಸೊಲ್ಲಾಪುರಕ್ಕೆ ಹೋಗುವ ಮೊದಲೇ ಅವರಿಗೆ ಚಿತ್ರಕಲೆಯಲ್ಲಿ ಆಸಕ್ತಿ ಮೂಡುವಂತೆ ಮಾಡಿದ್ದಿರಬಹುದು. ಅಲ್ಲಿಗೆ 1792ರಲ್ಲಿ ಹೋದ ಕೂಡಲೇ ಚಿತ್ರ ರಚಿಸಲು ಆರಂಭಿಸಿದರೋ ಅಥವಾ ನಂತರವೋ ಇತ್ಯಾದಿ ತಿಳಿದುಬರುವುದಿಲ್ಲವಾದರೂ ಈಗ ಮೇಲಿನ ಪದರದಲ್ಲಿರುವ ಚಿತ್ರಗಳು ಅವರ ಅಂತಿಮ ಕಾಲದ್ದೆಂದು ಗುರುತಿಸಿದರೆ ಹರಿದುಹೋದ ಭಾಗಗಳಲ್ಲಿ ಹಿಂದೆ ಬರೆದ ಚಿತ್ರಗಳೂ ಇದ್ದು ಶೈಲಿಯಲ್ಲಿ ಸ್ವಲ್ಪ ಭಿನ್ನವಿದೆಯೆಂದು ಪ್ರಬಂಧಕಾರರು ಹೇಳುವು ದರಿಂದ ಶುಭರಾಯರು ಅಲ್ಲಿದ್ದ 28 ವರ್ಷಗಳಲ್ಲಿ ಆರಂಭ ಕಾಲದಿಂದಲೂ ಚಿತ್ರರಚನೆ ಮಾಡಿದ್ದಿರಬಹುದು.

ಶುಭರಾಯರ ಚಿತ್ರಗಳನ್ನಷ್ಟೇ ಗಮನಿಸಿದಲ್ಲಿ ಅವರ ಶೈಲಿ ಹಾಗೂ ನಿರ್ವಹಣಾ ಕೌಶಲ್ಯದಲ್ಲಿ ಅವರದೇ ಆದ ಸ್ವಂತಿಕೆ ಕಂಡುಬರುವಂತಿದ್ದರೂ ಚಿತ್ರಕಲಾ ಪರಂಪರೆಯಲ್ಲಿ ಅವರಿಗೆ ಒಂದು ಸ್ಥಾನ ನೀಡುವಲ್ಲಿ ಸಮಕಾಲೀನ ಹಾಗೂ ಅಲ್ಲಿಯ ಪ್ರಾದೇಶಿಕ ಕಲೆಯ ಬಗೆಗೆ ನೋಡಬೇಕಾಗುತ್ತದೆ. ವಸ್ತುವಿನ ದೃಷ್ಟಿಯಿಂದ ಶೇಕಡಾ 80ರಷ್ಟು ಚಿತ್ರಗಳು ರಾಧಾ–ಕೃಷ್ಣರಿಗೆ ಸಂಬಂಧಿಸಿದುದು. ಅದರಲ್ಲಿ ಅರ್ಧಭಾಗ ರಾಸಲೀಲೆಯದು. ಕೃಷ್ಣ ಹಾಗೂ ಆ ಮೂಲಕ ಭಕ್ತಿಪಂಥ ಉತ್ತರ ಭಾರತದಲ್ಲಿ ತೀವ್ರವಾಗಿ ಪ್ರಚಲಿತವಿದ್ದು, ಸಾಹಿತ್ಯ, ಸಂಗೀತಗಳೊಂದಿಗೆ ರಾಜಸ್ತಾನಿ ಇತ್ಯಾದಿ ಚಿಕಣಿ ಚಿತ್ರಗಳಲ್ಲಿ ಇದೇ ವಿಷಯ ನಿರೂಪಿತವಾಗಿದ್ದು ಶುಭರಾಯರಲ್ಲೂ ಕಂಡುಬರುತ್ತದೆ. ಶುಭರಾಯರು ರಚಿಸಿದ ಇಂದು ದೊರೆಯುವ 147 ಪದ್ಯಗಳಲ್ಲಿ 64 ರಾಗ–ರಾಗಿಣಿಯವರ ಬಳಕೆಯಾಗಿದ್ದು ಇವುಗಳನ್ನು ಗ್ರಹಿಸಲು ಭಕ್ತಿಪಂಥದ ಅಂಶಗಳುಳ್ಳ ಭಟ್ಟ ಭಾಸ್ಕರ, ಉಪನಿಷತ್ತು ಹಾಗೂ ವೈಷ್ಣವ ಭಕ್ತಿಪಂಥಗಳ ಹಿನ್ನೆಲೆ ಆಗತ್ಯವೆಂದು ತಿವಾರಿಯವರು ತಿಳಿಸುತ್ತಾರೆ. ಶುಭರಾಯರ ಚಿತ್ರ–ಸಂಗೀತಗಳೆರಡೂ ಒಂದೇ ನೆಲೆಯಿಂದ ಮೂಡಿಬಂದವುಗಳು. ಮಠ ಸಾರ್ವಜನಿಕ ಸ್ಥಳವಾದುದರಿಂದ ಅತಿಯಾದ ಶೃಂಗಾರಕ್ಕೆ ಎಡೆಗೊಡದಂತೆ ಜಾಣ್ಮೆಯಿಂದ ಚಿತ್ರಿಸಿದ್ದಾರೆ. ಅಪವಾದವೆಂಬಂತೆ ಗೋಪಿಕಾ ವಸ್ತ್ರಾಪಹರಣದಲ್ಲಿ ನಗ್ನ ಗೋಪಿಕೆಯರನ್ನು ಚಿತ್ರಿಸಿದ್ದು ಹಲವು ಪ್ರಬಂಧಕಾರರು ಚರ್ಚಿಸಿದ್ದಾರೆ. ಸುಮಾರು ಇದೇ ಕಾಲದಲ್ಲಿ (1828) ರಾಯಚೂರಿನ ಖಾಜಿನ ಗೌಡರ ಮನೆಯಲ್ಲಿ ಚಿತ್ರಿಸಿರುವ ವಸ್ತ್ರಾಪಹರಣ ಚಿತ್ರದಲ್ಲಿ ಎಲ್ಲ ಗೋಪಿಕೆಯರೂ ವಸ್ತ್ರ ಸಹಿತವೇ ಇದ್ದಾರೆ. ಸ್ತ್ರೀಯರ ಉಡುಗೆ ವಿಜಯನಗರ ಕಾಲದಿಂದಲೂ ಸ್ವಲ್ಪಮಟ್ಟಿಗೆ ಏಕರೀತಿಯದಾಗಿ ಕಂಡುಬರುತ್ತದೆ ಯಾದರೂ ಮರಾಠಿ ಶೈಲಿಯಲ್ಲಿ ಒಳಕಚ್ಚೆ ಹಾಕಿ ಉಡುವ ಸಂಪ್ರದಾಯ ಇಂದಿಗೂ

ಪ್ರತ್ಯೇಕವಾಗಿದೆ. ಇದರಿಂದಾಗಿ ಕಾಲು ಹಿಂಭಾಗದ ಮಂಡಿಯವರೆವಿಗೂ ಗೋಚರಿಸುತ್ತದೆ. ರಾಯಚೂರು ಹಾಗೂ ನಿಪ್ಪಾಣಿಯ ವಾಡೆಯಲ್ಲಿರುವ ಚಿತ್ರಗಳಲ್ಲಿ, ಮರಾಠಿ ಶೈಲಿಯ ದಖ್ಖನಿ ಚಿಕಣಿ ಚಿತ್ರಗಳಲ್ಲಿ, ತಂಜಾವೂರಿನಲ್ಲಿ ಮರಾಠ ರಾಜರ ಆಶ್ರಯದಲ್ಲಿ ರಚಿತವಾದ ಗಾಜಿನ ಚಿತ್ರದಲ್ಲಿ ಹಾಗೂ ಗುಲ್ಬರ್ಗಾದ ಆದರ್ಶ ಕಲಾಶಾಲೆಯಲ್ಲಿರುವ ಪಟ ಚಿತ್ರವೊಂದರಲ್ಲಿ ಈ ಬಗೆಯ ಮರಾಠ ಶೈಲಿಯ ಉಡುಗೆಗಳನ್ನು ಕಾಣಬಹುದಾದರೂ ಶುಭರಾಯರಲ್ಲಿ ಮೈಸೂರು ಸಾಂಪ್ರದಾಯಿಕ ಶೈಲಿಯಲ್ಲಿಯೇ ವಿಪುಲವಾದ ನೆರಿಗೆಯಿಂದ ಕೂಡಿರುವಂತೆ ಕಾಲ ಕೆಳಭಾಗದವರೆಗೂ ಪೂರ್ತಿಯಾಗಿ ಸೀರೆಯಿಂದ ಮುಚ್ಚಿರುವಂತೆಯೇ ಚಿತ್ರಿತವಾಗಿದ್ದು ಮೈಸೂರು ಶೈಲಿಯನ್ನು ಹೋಲುತ್ತದೆ. ಅಂತೆಯೇ ಒಂದು ಅಂಕಣ ದಲ್ಲಿ ಹಲವಾರು ಸ್ತ್ರೀಯರಿದ್ದರೆ; ಪಕ್ಕಪಕ್ಕದಲ್ಲಿ ಸಾಲಾಗಿ ನಿಂತಿರುವ ಅವರುಗಳನ್ನು ಪರಸ್ಪರ ಪ್ರತ್ಯೇಕಿಸಲು ಸೀರೆಯ ಬಣ್ಣದಲ್ಲಿ ಅಥವಾ ಅವುಗಳ ಮೇಲಿನ ಡಿಸೈನ್‌ಗಳಲ್ಲಿ ವ್ಯತ್ಯಾಸ ತೋರಿಸುವಂತಿದ್ದು, ಲೇಪಾಕ್ಷಿಯ ಕಲಾವಿದ ಸಾಧಿಸಿರುವಂತೆ ಶುಭರಾಯರೂ ನಿರ್ವಹಿಸಿದ್ದಾರೆ.

ಆಭರಣ ಅಲಂಕಾರಗಳನ್ನು ದಪ್ಪನಾದ ಚೊಟ್ಟುಗಳಿಂದ, ಮಣಿ ಮಣಿಯಾಗಿ ಶುಭರಾಯರು ಚಿತ್ರಿಸಿದ್ದಾರೆ. ಈ ನಿರ್ವಹಣೆ ತೊಗಲು ಗೊಂಬೆಗಳಲ್ಲಿ ಅಧಿಕವಾಗಿ ಕಂಡುಬರುತ್ತದೆಯಲ್ಲದೆ, ಬೆಳಗಾವಿ ಜಿಲ್ಲೆಯ ಮುನವಳ್ಳಿಯಲ್ಲಿ ಜನಿಸಿದ ಖ್ಯಾತ ಪಂಡಿತ ಕೆ.ಬಿ. ಪಾಂಡುರಂಗಿ ಅವರ ಸಂಗ್ರಹದಲ್ಲಿರುವ ಹಸ್ತಪ್ರತಿಯಲ್ಲಿರುವ ಚಿತ್ರ ದಲ್ಲೂ (ಈ ಚಿತ್ರ ಸಂಪುಟ ಅವರಿಗೆ ಮಹಾರಾಷ್ಟ್ರದಲ್ಲಿದ್ದ ಅವರ ಹಿರಿಯರಿಂದ ಬಂದುದು) ಗೋವಾ ಹಾಗೂ ಉತ್ತರ ಕರ್ನಾಟಕದಲ್ಲಿ ಅಧಿಕವಾಗಿರುವ ಕಾವಿಕಲೆಯಲ್ಲಿಯೂ ಲೇಪಾಕ್ಷಿ ಹಾಗೂ ಶ್ರವಣಬೆಳಗೊಳದ ಭಿತ್ತಿಚಿತ್ರಗಳಲ್ಲಿಯೂ ಕಂಡುಬರುತ್ತದೆ. ಶುಭರಾಯರಲ್ಲಿ ನಾಸಾಭರಣ ತೀರ ದೊಡ್ಡದಾಗಿ ಬಳೆಯಾಕಾರದಲ್ಲಿದ್ದು ಮೂಗಿನ ಮುಂದೆ ಹೊರಚಾಚಿದಂತೆ ಚಿತ್ರಿತವಾಗಿರುತ್ತದೆ. ಇದು ಮಹಾರಾಷ್ಟ್ರ ಶೈಲಿಯ ಚಿತ್ರಣಗಳಲ್ಲಿದ್ದು, ಇಂದಿಗೂ ಈ ಪದ್ಧತಿ ಅಲ್ಲಿಯ ಹೆಂಗಳೆಯರಲ್ಲಿದೆ. ದಖ್ಖನಿ ಚಿಕಣಿ ಚಿತ್ರಗಳಲ್ಲಿ ನಿಪ್ಪಾಣಿ, ರಾಯಚೂರು ವಾಡೆಗಳಲ್ಲಿ, ಮರಾಠರ ತಂಜಾವೂರು ಗಾಜಿನ ಚಿತ್ರಗಳಲ್ಲಿ ಇದೇ ಬಗೆಯಲ್ಲಿ ನಾಸಾ ಭರಣ ಚಿತ್ರಿತವಾಗಿದೆ.

ರಾಮ, ಕೃಷ್ಣ, ವಿಷ್ಣು ಇತ್ಯಾದಿ ದೇವತೆಗಳಿಗೆ ಶಿರೋಭೂಷಣವನ್ನು ಕಿರೀಟದಿಂದ ಶುಭರಾಯರು ಅಲಂಕರಿಸಿದ್ದಾರೆ. ಆದರೆ ಸೈನಿಕರು ಹಾಗೂ ಋಷಿಗಳಿಗೆ ವೈವಿಧ್ಯಮಯವಾಗಿ ಸಿಂಬಿ ಸುತ್ತಿದ ರುಮಾಲನ್ನು ಬಳಸಿದ್ದಾರೆ. ಅವುಗಳಲ್ಲಿ ಹಾವಿನಂತೆ ಸಿಂಬಿ ಸುತ್ತಿದ ರುಮಾಲನ್ನು ಮೈಸೂರು ಸಂಪ್ರದಾಯ ಹಾಗೂ ಹಿರಿಯೂರಿನ ಭಿತ್ತಿ ಚಿತ್ರದ ಬೇಡರ ಪಡೆಯ ನಾಯಕನ ಚಿತ್ರಗಳಲ್ಲಿ ಹಾಗೂ ಕಲಂಕಾರಿ ಚಿತ್ರಗಳಲ್ಲಿ ಕಾಣಬಹುದು. ಶುಭ ರಾಯರಲ್ಲಿ ಪುರುಷರ ಉಡುಗೆಯಲ್ಲಿ ಯೋಧರು, ಸನ್ಯಾಸಿಗಳು ಹಾಗೂ ಹನುಮಂತನ ವಿನಾ ರಾಮ–ಕೃಷ್ಣರು ಸೇರಿದಂತೆ ಪುರುಷರ ಉಡುಗೆಗಳು ಕಟಿಯ ಅಧೋಭಾಗದಲ್ಲಿ ಸ್ತ್ರೀಯರದಂತೆಯೇ ನೆರಿಗೆಯೊಂದಿಗೆ ಕಚ್ಚೆ ಹಾಕಿದಂತೆಯೇ ಚಿತ್ರಿತ ವಾಗಿದೆ. ಶುಭರಾಯರು

ಹನುಮಂತನಿಗೆ ಕಿರಿದಾದ ಚಡ್ಡಿಯಂತಹ ವಸ್ತ್ರಧರಿಸಿರುವಂತೆ ರಚಿಸಿದ್ದು ಭಕ್ತಿ–ಭಾವದಿಂದ ಕೈಮುಗಿದು ನಿಂತಿರುವ ಈತನ ಭಂಗಿ ಸ್ವಲ್ಪಮಟ್ಟಿಗೆ ಸಂಪ್ರದಾಯ ಶೈಲಿಯನ್ನು ಹೋಲುವುದಾದರೂ ತೀರ ಸರಳವಾಗಿ ನಿರಾಭರಣವಾಗಿದೆ.

ಶುಭರಾಯರ ಚಿತ್ರಗಳಲ್ಲಿ ಮುಖ್ಯವಾಗಿ ಕಂಡುಬರುವುದು ಚಲನಶೀಲತೆ, ವ್ಯಕ್ತಿಗಳೆಲ್ಲರೂ ಯಾವುದಾದರೂ ಕ್ರಿಯೆಯಲ್ಲಿರುವಂತೆ ಕೈಕಾಲುಗಳನ್ನು ಹಾವ–ಭಾವಯುಕ್ತವಾಗಿಯೇ ಇರಿಸಿಕೊಂಡಿದ್ದಾರೆ. ಕೆಲವೊಮ್ಮೆ ನೃತ್ಯ ಭಂಗಿಯಲ್ಲಿಯೂ ಇರುವಂತೆ ಚಿತ್ರಿಸಿದೆ. ಅವು ದಖ್ಖನಿ ಶೈಲಿಯ ಅಂತಿಮ ಕಾಲದಲ್ಲಿ ರಚಿತವಾದ ಹಾಗೂ ಮೈಸೂರು ಸಾಂಪ್ರದಾಯಿಕ ಶೈಲಿಯನ್ನು ಬಹಳವಾಗಿ ಹೋಲುತ್ತವೆ. ಶುಭರಾಯರಲ್ಲಿ ಮುಖಭಾವ ದೀರ್ಘ ವೃತ್ತಾಕಾರವಾಗಿದ್ದು, ಹಣೆಯ ಭಾಗದಿಂದ ವೃತ್ತ ಆರಂಭವಾಗಿ ಕಣ್ಣ ಬಳಿ ಸ್ವಲ್ಪ ಒಳಕ್ಕೆ ಹೋಗಿ ಮತ್ತೆ ಮೂಗಿನ ಮೇಲೆ ವೃತ್ತ ಹಾಯ್ದು ಬಾಯ ಭಾಗದಲ್ಲಿ ಮತ್ತೆ ಒಳಕ್ಕೆ ಹೋಗಿ, ಒಂದೇ ಕೊಂಕಿನಿಂದ ಕೂಡಿದ ಗೆರೆಯಲ್ಲಿ ಬಾಯನ್ನು ನಿರ್ವಹಿಸಿ ಸ್ವಲ್ಪ ಮುಂಚಾಚಿದ ಗಡ್ಡದೊಂದಿಗೆ ವೃತ್ತ ಮೇಲೇರಿ ಕಿವಿಯ ಬಳಿಯಿಂದ ಹಾಯ್ದು ತಲೆಯ ಮೂಲಕ ಹಣೆಯ ಭಾಗಕ್ಕೆ ಬರುತ್ತದೆ. ಹಣೆ, ಮೂಗು ಸೇರುವಲ್ಲೇ ಕಣ್ಣ ಮುಂಭಾಗವೂ ಆರಂಭವಾಗಿ ಅಗಲವಾದ ಪಾಪೆಯಿಂದ ಕೂಡಿ ಕಿವಿಯವರೆಗೂ ವಿಸ್ತರಿಸಿರುತ್ತದೆ. ಆಕೃತಿಯ ಕ್ರಿಯೆಯನ್ನು ಅನುಸರಿಸಿ ಹಸ್ತಗಳನ್ನು ರಚಿಸಿದ್ದು ನಾಟಕದ ಪಾತ್ರಧಾರಿಗಳಂತೆ ನಿರೂಪಿಸುತ್ತಿರುವ ಭಂಗಿಯಲ್ಲಿದ್ದು ಬೆರಳುಗಳನ್ನು ಒಟ್ಟಾಗಿ ಸೇರಿಸಿದಂತೆ ರಚಿತವಾಗಿವೆ.

ಜೋಶಿಯವರು ತಿಳಿಸುವಂತೆ ಶುಭರಾಯರ ಅಳಿದುಳಿದ 257 ಚಿತ್ರಗಳಲ್ಲಿ ಆರು ಚಿತ್ರಗಳು ಮಾತ್ರ ಮುಖಗಳನ್ನು ಮುಂದಿನಿಂದ ತೋರಿಸಿರುವುದು. ಉಳಿದ 251ರಲ್ಲಿ ಮುಖಭಾವ ಒಂದು ಪಕ್ಕಕ್ಕೆ ಮಾತ್ರ(ಪಾರ್ಶ್ವಗತ–ಪ್ರೊಫೈಲ್) ತೋರಿದಂತಿವೆ. ಈ ಪದ್ಧತಿ ಅಂದು ಪ್ರಚಲಿತವಿದ್ದ ಶಿಷ್ಟ ಹಾಗೂ ಜನಪದ ಶೈಲಿಯ ಎಲ್ಲ ಚಿತ್ರಗಳಲ್ಲೂ ಕಾಣಬಹುದು. ಮೈಸೂರು ಸಂಪ್ರದಾಯ ಶೈಲಿಯಲ್ಲಿಯೂ ಈ ಬಗೆಯ ಚಿತ್ರಣವಿದೆಯಾದರೂ, ಎದುರು ನೋಟ ಹಾಗೂ ಮುಕ್ಕಾಲು ಭಾಗ ತಿರುಗಿರುವ (ಸಾಚೆಸ್ಥಾನ) ಮುಖಭಾವಗಳೇ ಅಧಿಕ. ಪ್ರತ್ಯೇಕವಾಗಿ ಕೊಟ್ಟಿರುವ ವಿವಿಧ ಶೈಲಿಯ ಚಿತ್ರಗಳಲ್ಲಿ ಈ ಅಂಶಗಳನ್ನು ಗುರುತಿಸಬಹುದು. ಚಿಕಣಿ ಚಿತ್ರವೂ ಸೇರಿದಂತೆ ಬಹು ತೇಕ ಭಾರತೀಯ ಶಿಷ್ಟ ಹಾಗೂ ಜನಪದ ಚಿತ್ರಗಳಲ್ಲಿ ಮುಖವಷ್ಟೇ ಪಕ್ಕಕ್ಕೆ ತಿರುಗಿದಂತಿದ್ದು, ದೇಹದ ಉಳಿದ ಭಾಗ ಎದುರು ನೋಟದಿಂದ ಇರುವಂತೆ ಚಿತ್ರಿಸಿರುವುದು ನೋಡಬಹುದು. ನಿಪ್ಪಾಣಿ ಹಾಗೂ ರಾಯಚೂರು ಪಾಡೆಗಳಲ್ಲಿ ದೇಹಭಾಗವೂ ಪಕ್ಕಕ್ಕೆ ತಿರುಗಿದಂತಿದೆ. ಶುಭರಾಯರಲ್ಲಿ ದೇಹ ಭಾಗ ಮುಕ್ಕಾಲು ತಿರುಗಿದಂತೆ ಚಿತ್ರಿಸಿವೆ. ಉಳಿದ ಚಿತ್ರಗಳಲ್ಲಿ ಕಾಲುಗಳು ಎರಡೂ ಪಕ್ಕಕ್ಕೆ ಕಿಸಿದಂತೆಯೂ ಜನಪದದಲ್ಲಿ ಅನೇಕ ಸಂದರ್ಭದಲ್ಲಿ ಎರಡೂ ಕಾಲುಗಳು ಒಂದೇ ಕಾಲಿನ ರೀತಿಯಲ್ಲೇ (ಎರಡೂ ಎಡ ಅಥವಾ ಬಲಗಾಲಿನಂತೆ) ಬರೆದಿರುವುದೇ ಅಧಿಕ. ಶುಭರಾಯರಲ್ಲಿ ಎರಡು ಕಾಲುಗಳೂ ಪಕ್ಕ ಪಕ್ಕದಲ್ಲಿದ್ದು, ಎಡ

ಹಾಗೂ ಬಲಗಾಲುಗಳನ್ನು ಪ್ರತ್ಯೇಕವಾಗಿ, ಸ್ಪಷ್ಟವಾಗಿ ವಿಭಿನ್ನವಾಗಿಯೇ ರಚಿಸಿದೆ.

ಶುಭರಾಯರ ಚಿತ್ರಗಳಲ್ಲಿ ಪ್ರಕೃತಿಯ ಚಿತ್ರಣ ಕಡಿಮೆ. ಮುದ್ರಿತ ಪುಸ್ತಕದಲ್ಲಿರುವ 75 ಚಿತ್ರಗಳಲ್ಲಿ 22 ಚಿತ್ರಗಳಲ್ಲಿ ಮಾತ್ರ ಹಿನ್ನಲೆಯಲ್ಲಿ ಗಿಡ–ಮರ ಇತ್ಯಾದಿಗಳನ್ನು ಕಾಣಬಹುದು. ನೀಳವಾದ ಬಳ್ಳಿಯಲ್ಲಿ ವಿರಳವಾದ ಗೆರೆಗಳಂತೆ ಇರುವ ಗಿಡಗಳ ಚಿತ್ರಣವೇ ಅಧಿಕ. ವಿಶಾಲ ಹರಹಿನಲ್ಲಿ ಗುಂಡನೆಯ ಆಕಾರದ, ಎಲೆ, ಹೂಗಳಿಂದ ತುಂಬಿದ ಮರಗಳ ಚಿತ್ರಣವೂ ಕೆಲವೊಮ್ಮೆ ಹಿನ್ನಲೆಯಲ್ಲಿ ಬಂದಿವೆ. ಪ್ರಾಣಿಗಳಲ್ಲಿ ಆನೆ ಮತ್ತು ಆಕಳುಗಳೇ ಪ್ರಧಾನ. ಇವೆರಡೂ ರಾಜಸ್ಥಾನಿ ಚಿಕಣಿ ಚಿತ್ರಗಳಲ್ಲಿ ಕಂಡುಬರುವಂತೆ ಪುಷ್ಟಿಶಾಲಿಯಾಗಿ, ಲಾಲಿತ್ಯಪೂರ್ಣ ರೇಖೆಗಳಿಂದ ಕೂಡಿದಂತೆ ರೂಪಿತವಾಗಿವೆ.

ಶುಭರಾಯರ ಚಿತ್ರಗಳು ನಿರೂಪಣಾ ಕಥೆಯಂತೆ ಅಂಕಣಗಳಲ್ಲಿ ಮುಂದುವರಿಯುವುದಿಲ್ಲ. ಬದಲಿಗೆ ಪುರಾಣದ ಒಂದು ಘಟನೆ ಅಥವಾ ಕಥೆಗೆ ಒಂದು ಚಿತ್ರದಂತೆ ರಚಿಸಿರುವುದರಿಂದ ಸಾಂಕೇತಿಕವಾಗಿ ಕಥಾ ಸಂದರ್ಭವನ್ನು ಗ್ರಹಿಸಬಹುದಾಗಿದೆ. ಚಿತ್ರರಚನೆ ಮಂಟಪದ ಅಲಂಕರಣಕ್ಕೆಂದೇ ಬರೆದಿರುವುದರಿಂದ ಚಿತ್ರಬಂಧದಲ್ಲಿ (ಕಾಂಪೊಸಿಷನ್) ಸುಮಾರು ಅರ್ಧದಷ್ಟು ಚಿತ್ರಗಳು ಉದ್ದಕ್ಕೆ ಇನ್ನರ್ಧ ಅಡ್ಡಕ್ಕೆ ಸಂಯೋಜಿತಗೊಂಡಂತೆ ಕಂಡುಬರುತ್ತವೆ. ರಾಧಾ–ಕೃಷ್ಣರಂತೆ ಇಬ್ಬರೇ ಪ್ರಿಯಕರರು ಇರುವಾಗ ಅವರು ಅರಮನೆಯ ಕೊಠಡಿಯಲ್ಲಿರುವಂತೆ ಸುತ್ತಲೂ (ಫ್ರೇಮ್ ಹಾಕಿದಂತೆ) ಆವರಣವನ್ನು ರಚಿಸಿರುವುದು ಸಹ ರಾಜಸ್ಥಾನಿ ಚಿಕಣಿ ಚಿತ್ರಗಳಲ್ಲಿ ವಿಶೇಷವಾಗಿ ನಾಯಕ–ನಾಯಿಕೆಯರು ಪ್ರಧಾನವಾಗಿರುವ 'ಚೋರಪಂಚಶಿಖ' ಚಿತ್ರಮಾಲಿಕೆಯಲ್ಲಿ ಇರುವುದನ್ನು ಬಹಳವಾಗಿ ಹೋಲುತ್ತವೆ.

ಅಲಂಕಾರವೇ ಮುಖ್ಯ ಉದ್ದೇಶವಾದುದರಿಂದ ಹೂ–ಬಳ್ಳಿಗಳ ವಿನ್ಯಾಸದ ಒಳಗೇ ಜಾಣ್ಮೆಯಿಂದ ಮಾನವಾಕಾರಗಳನ್ನೂ ಅಲಂಕಾರಯುತವಾಗಿ ಹೆಣೆದಿರುವ ಕೃತಿಗಳೂ ಉಂಟು. ಮಾನವಾಕಾರಗಳು ಜ್ಯಾಮಿತಿಯ ಆಕಾರಗಳನ್ನು ಹೊಂದುತ್ತವೆ. ಪುನರಾವರ್ತನೆಯಾಗುವ ಆಕಾರಗಳು ಅಕ್ಕಪಕ್ಕಗಳಲ್ಲಿ, ಒಂದರ ಮೇಲೊಂದರಂತೆ ಅಥವಾ ವಿರುದ್ಧ ದಿಸೆಯಲ್ಲಿ ಮೂಡಿಸಿರುವುದು ರಂಗೋಲಿಯ ವಿನ್ಯಾಸಗಳಂತಿವೆ. ಹೂ–ಬಳ್ಳಿ ಹಾಗೂ ಮಾನವಾಕಾರಗಳು ಪ್ರತ್ಯೇಕವಾಗಿ ನಿಲ್ಲುವಂತೆ ಬಣ್ಣಗಾರಿಕೆಯಲ್ಲಿ ನಿಯಂತ್ರಿಸುತ್ತಾ ಹೋಗುವ ಶುಭರಾಯರು ಒಬ್ಬ ಯಶಸ್ವೀ ಕಲಾವಿದ ಎಂಬುದನ್ನು ಸಾಬೀತುಪಡಿಸುತ್ತದೆ. ಕೆಲವಾರು ಚಿತ್ರಗಳಲ್ಲಿ ಆಕೃತಿಗಳನ್ನು ಕತ್ತರಿಸಿ, ಅಂಟಿಸಿ ತೇಪೇದಾರಿ ಕೆಲಸ ಮಾಡಿರುವುದೂ ಇರುವುದರಿಂದ ಅಲ್ಲಿ ನಿರ್ದಿಷ್ಟವಾದ ಸಂಯೋಜನೆಯನ್ನು ಕಾಣಲಾಗುವುದಿಲ್ಲ. ಪ್ರಾಯಶಃ ಶುಭರಾಯರೇ ಅಥವಾ ಅವರ ನಂತರದವರು ಮುಂದಿನ ಕೆಲ ವರ್ಷಗಳಲ್ಲಿ ಹಳೆಯದಾದ ಇಲ್ಲವೆ ಹರಿದುಹೋದ ಚಿತ್ರಗಳನ್ನು ಈ ರೀತಿ ರಿಪೇರಿ ಕೆಲಸ ಮಾಡಿ ಬೆಳೆಸಿರಬೇಕು. ಕೆಲವೊಮ್ಮೆ ಈ ರಿಪೇರಿ ಕೆಲಸ ಸರಿಯಿಲ್ಲದೆ ಕೃಷ್ಣನ ಕೈಯೊಳಗೇ ರಾಧೆಯದೂ ನುಸುಳಿರುವುದುಂಟು. ಕಾಗದ ಹರಿದು ಬಂದಲ್ಲಿ

ಹಿಂದೆ ಬರೆದಿರುವ ಚಿತ್ರ ಕಂಡುಬಂದು ಅವು ಶೈಲಿಯಲ್ಲಿ ಸ್ವಲ್ಪ ವ್ಯತ್ಯಾಸ ಇರುವುದಾಗಿ ಅಭಿಪ್ರಾಯವಿದೆ. ಕಾಲದ ವ್ಯತ್ಯಾಸದಿಂದ ಶುಭರಾಯರಲ್ಲೇ ಅಲ್ಪಸ್ವಲ್ಪ ಭೇದ ಕಂಡು ಬಂದಿರಬಹುದು. ಇಲ್ಲವೇ ಸಮಕಾಲೀನದಲ್ಲಿ ಬೇರಾರಾದರೂ ಬರೆದಿರಬಹುದು. ಆದರೆ ಶುಭರಾಯರ ನಂತರ ಮಠದ ಅಲಂಕರಣಕ್ಕೆ ಬೇರಾರೂ ಚಿತ್ರ ಬರೆದಂತೆ ಕಂಡುಬರುವುದಿಲ್ಲ. ಹಳೆಯದನ್ನೇ ಕೆಲಕಾಲ ಬಳಸಿರಬಹುದು. ನಂತರ ಪೆಟ್ಟಿಯಲ್ಲಿ ಹಾಕಿಟ್ಟದ್ದಿರಬಹುದು. ಸುಮಾರು ಒಂದು ಶತಮಾನವೇ ಈ ಚಿತ್ರಗಳು ಅಜ್ಞಾತವಿದ್ದಂತೆ ತೋರುತ್ತದೆ.

ಇಲ್ಲಿಯ ಚಿತ್ರಗಳಿಗೆ ತಳಹದಿಯಾಗಿ ವ್ಯಾಪಾರಸ್ಥರು ಬಳಸುತ್ತಿದ್ದ ಖಾತೆ–ಕಿರ್ದಿ ಕಾಗದವನ್ನು ಉಪಯೋಗಿಸಿರುವುದು ಕಾಗದದ ಅಭಾವದಿಂದಾಗಿ ಹಾಗೂ ಕಸದಿಂದ ರಸ ತೆಗೆದಂತೆ ಎಂದು ಕೆಲವು ವಿದ್ವಾಂಸರು ಭಾವಿಸಿದ್ದಾರೆ. ಆದರೆ ಇಂದಿಗೂ ಈ ಬಗೆಯ ಸಾಂಪ್ರದಾಯಿಕ ಚಿತ್ರಗಳನ್ನು ಹಲವಾರು ದಿನಪತ್ರಿಕೆಗಳನ್ನು ಅಂಟಿಸಿ ರೂಪಿಸಿರುವ ರಟ್ಟಿನಂತಹ ಕಾಗದದ ಮೇಲೆಯೇ ರಚಿಸುತ್ತಾರೆ. ತಳಹದಿಯ ಫಲಕ ದಪ್ಪವಾಗಿ ತಾಳಿಕೆ ಬರುವುದಲ್ಲದೆ ನೀರು ಬಣ್ಣದಲ್ಲಿ ರಚಿಸುವುದರಿಂದ ಬಣ್ಣದಲ್ಲಿರುವ ನೀರಿನ ಅಂಶ ಕೆಳಗಿನ ಪದರದ ಹಾಳೆಯ ಮೇಲೆ ಸುಲಭವಾಗಿ ಇಳಿದು ಬಣ್ಣವಷ್ಟೇ ಮೇಲಿನ ಪದರದಲ್ಲಿ ಒಣಗಲು ಸಹಾಯಕವಾಗುತ್ತದೆ. ಬಣ್ಣಗಳೂ ಸುಲಭದಲ್ಲಿ ಅಂದು ಪೇಟೆಯಲ್ಲಿ ದೊರೆಯುತ್ತಿದ್ದ ಉರಿಮಂಜು, ಕಾವಿ, ಗೋಪಿ, ದೀಪದ ಕಪ್ಪು, ಬಟ್ಟೆ ನೀಲಿ ಇತ್ಯಾದಿಗಳನ್ನೇ ಮರದ ಅಂಟಿನೊಂದಿಗೆ ಬೆರೆಸಿ ಬಳಸಿದಂತಿದೆ. ತಿಳಿಹಸುರಿನ ಬದಲು ಗಿಡ–ಮರಗಳಿಗೆ ಗಾಢವಾದ ಹಸಿರು ಬಳಸಿದೆ. ಪ್ರಾಯಶಃ ಎಲೆ ಅಥವಾ ಸಸ್ಯಗಳಿಂದ ದೊರೆಯುವ ಹಸಿರು ಬಣ್ಣ ಬಳಸಿದ್ದು ಕಾಲಮಾನದಲ್ಲಿ ಬಣ್ಣಗೆಟ್ಟು ಗಾಢ ವಾಗಿರಬಹುದು. ಅನೇಕ ಸಂದರ್ಭದಲ್ಲಿ ಮೂಲ ವರ್ಣಗಳನ್ನು ಹಾಗೆಯೇ ಬಳಸಿದೆ. ಕೆಲವೊಮ್ಮೆ ತಿಳಿಯಾಗಿಸಲು ಬಿಳಿಯೊಡನೆ ಮಿಶ್ರ ಮಾಡಿದೆ. ಈ ಬಳಿಯ ಮಿಶ್ರಣ ಕೆಂಪು, ನೀಲಿ ಹಾಗೂ ಹಳದಿಯೊಂದಿಗೆ ಮಾಡಿದಂತಿದೆ.

ಶುಭರಾಯರು ಕಲಾಶಾಲೆಯನ್ನು ಆರಂಭಿಸಲಿಲ್ಲವಾಗಿ ಅವರ ಚಿತ್ರಗಳಿಗೆ ಅನುಯಾಯಿಗಳಾಗಲೀ, ಶಿಷ್ಯರಾಗಲೀ ಇಲ್ಲ (ಅವರ ಹಾಡುಗಳನ್ನು ಹಾಡುವ ಪರಂಪರೆ ಇಂದಿನವರೆಗೂ ಬೆಳೆದಿದೆ). ಶುಭರಾಯರು ಪ್ರಜ್ಞಾಪೂರಕವಾಗಿ ಬೇರಾವುದೇ ಶೈಲಿಯ ಚಿತ್ರಗಳನ್ನು ನಕಲು ಮಾಡದೆ, ಆದರೆ ಸಮಕಾಲೀನ ಭಿತ್ತಿ ಹಾಗೂ ಹಸ್ತ ಪ್ರತಿಗಳ ಚಿತ್ರ, ರಾಜಸ್ಥಾನಿ, ಕಲಂಕಾರಿ, ಕಾವಿಕಲೆ ಮತ್ತು ಮೈಸೂರು ಸಾಂಪ್ರದಾಯಿಕ ಚಿತ್ರಗಳಿಂದ ಪ್ರೇರಿತರಾಗಿ ತಮ್ಮ ಕಾಲದ ಕಲಾ ಪ್ರವಾಹದಲ್ಲಿ ಒಂದಾಗಿ ಚಿತ್ರರಚನೆ ಮಾಡಿದ್ದಾರೆ. ಅವರದೇ ಆದುದೆಂದು ಸುಲಭವಾಗಿ ಗುರುತಿಸಬಹುದಾದ ಶೈಲಿಯಲ್ಲಿ ರಚಿಸಲು ಅವ ರಿಗೆ ಸಾಧ್ಯವಾಗಿದೆ. ಆದರೆ ಅವರ ಶೈಲಿಯ ಪರಂಪರೆ ಮುಂದುವರಿದಿಲ್ಲ. ಒಂದು ಶತ ಮಾನದ ನಂತರ ಕಲಾವಿದ ಆಲಮೇಲಕರ್ ಮುಂತಾದವರು ಈ ಚಿತ್ರಗಳಿಂದ ಪ್ರೇರಣೆ ಪಡೆದಿರಬಹುದಾದರೂ ತದ್ವತ್ ಅನುಸರಿಸಲಿಲ್ಲ. ಇಂದಿಗೆ ತನ್ನ ಶೈಲಿಯಲ್ಲಿ ಸ್ವಂತಿಕೆ

ಯೊಂದನ್ನು ಸಾಧಿಸಿಕೊಳ್ಳುವುದೇ ಕಲಾವಿದನಿಗೆ ಹೆಮ್ಮೆಯ ಕೆಲಸವಾಗಿದೆ. ಎಂದರೆ ಈ ರೀತಿಯ ಒಂದು ಸ್ವಂತಿಕೆಯನ್ನು ಶುಭರಾಯರು ಅಂದೇ ಕಂಡುಕೊಂಡರು. ಈ ರೀತಿ ನೆಲೆ ಕಂಡುಕೊಂಡ ಕಲಾವಿದರು ಅಂದು ಇನ್ನೂ ಇದ್ದಿರ ಬಹುದು. ಆದರೆ ಶುಭರಾಯರ ಚಿತ್ರಗಳನ್ನು ರಕ್ಷಿಸಿದಂತೆ ಬೇರೆಯವರದು ಉಳಿದು ಬಂದಿರುವ ಉದಾಹರಣೆ ದೊರೆಯು ವುದಿಲ್ಲ.

ಹತ್ತೊಂಬತ್ತನೆಯ ಶತಮಾನದ ಆದಿಭಾಗದ ವೇಳೆಗೆ ಬ್ರಿಟಿಷರು ಸುಮಾರು ದಕ್ಷಿಣ ಭಾರತವನ್ನು ವಶಪಡಿಸಿಕೊಂಡಿದ್ದು, ಸಾಂಸ್ಕೃತಿಕವಾಗಿಯೂ ಪ್ರಭಾವ ಬೀರ ತೊಡಗಿದ್ದರು. ಮುಖ್ಯವಾಗಿ ಮುದ್ರಣಯಂತ್ರ (ಮೊದಲು ಕಲ್ಲಚ್ಚಿನಲ್ಲಿ ನಂತರ ಬಿಡಿ ಅಕ್ಷರಗಳ–ಲೆಟರ್ ಪ್ರೆಸ್ – ಮುದ್ರಣ)ಗಳು ಬಂದದ್ದು ಸಾಹಿತ್ಯ, ಶಾಸ್ತ್ರ ಗ್ರಂಥಗಳ ಹಾಗೂ ಶಾಸನಗಳ ಸಂಪಾದನೆ, ಪ್ರಕಟಣೆ, ನಿಯತಕಾಲಿಕೆಗಳ ಪ್ರಕಟಣೆ ಆರಂಭವಾಯಿತು. ಸ್ವಲ್ಪ ತಡವಾಗಿ ಕ್ಯಾಮೆರಾ ಸಹ ದಕ್ಷಿಣ ಭಾರತಕ್ಕೆ ಬಂದಿತು. ಮೊದಲ ಕಾದಂಬರಿ ಎನ್ನಬಹುದಾದ ಕೆಂಪುನಾರಾಯಣನ ಮುದ್ರಾ ಮಂಜೂಷ ರಚನೆಯಾಯಿತು. (1823) ಜಗನ್ನಾಥದಾಸ (1809) ದೇವಚಂದ್ರ (1800) ಹಾಗೂ ತಡವಾಗಿ ಮುಮ್ಮಡಿ ಕೃಷ್ಣರಾಜ (1794–1868)ರು ಬಂದರು, ಎಂದರೆ ಒಂದು ವಿಧವಾದ ಬದಲಾವಣೆ, ಸಾಂಸ್ಕೃತಿಕ ಹಾಗೂ ಬೌದ್ಧಿಕ ಕ್ಷೇತ್ರಗಳಲ್ಲಿ ಬರುತ್ತಿದ್ದ ಕಾಲದಲ್ಲಿ ಶುಭರಾಯರು ಕ್ರಿಯಾಶೀಲರಾಗಿದ್ದರು. ಬ್ರಿಟಿಷರ ಇನ್ನೊಂದು ಪ್ರಮುಖ ಕೊಡುಗೆಯೆಂದರೆ ಸಮಾಜ ಸುಧಾರಣೆ. ಸಾಮಾಜಿಕವಾಗಿ ತುಳಿತಕ್ಕೆ ಒಳಗಾದವರ ಬಗೆಗೆ ಕಾಳಜಿ, ಅವರಿಗೆ ವಿದ್ಯಾ ಭ್ಯಾಸ ನೀಡುವುದರ ಮೂಲಕ ಜ್ಞಾನಾರ್ಜನೆ ಸಾಧಿಸಲು ಪ್ರೋತ್ಸಾಹ ಹಾಗೂ ಮಾನಸಿಕ ದಾಸ್ಯದಿಂದ ಬಿಡುಗಡೆಗೆ ಪ್ರಯತ್ನಿಸಿದ್ದು, ಆ ಕೆಲಸ ಶುಭರಾಯರೂ ಸ್ವಾಗತಿಸಿದರು. ತಿಲಕರು ಹಾಗೂ ರಾಜಾರಾಂ ಮೋಹನರಾಯರಿಗೂ ಮೊದಲೇ ಅಂತ್ಯಜರ ಬಗೆಗೆ ಒಲವು, ಕಳಕಳಿ ತೋರಿದರು. ತಮ್ಮ ಮಠದ ಉತ್ತರಾಧಿಕಾರಿಯಾಗಿ ಪರಿಶಿಷ್ಟ ವಂಶಜ ರೊಬ್ಬರನ್ನು ನೇಮಿಸಿಕೊಂಡರು. ಇದರಿಂದಾಗಿ ಅಂದಿನ ಮೇಲ್ವರ್ಗದವರಿಂದ ಹೀಯಾಳಿಕೆಗೂ, ಮಾನಸಿಕ ನೋವಿಗೂ ಗುರಿಯಾದರೂ ಸಹ ಹಿಂದುಳಿದವರನ್ನು ಬಿಟ್ಟುಕೊಡಲಿಲ್ಲ. ಶುಭರಾಯರ ಈ ಕ್ರಾಂತಿಕಾರೀ ನೆಲೆಯನ್ನು ಆಚಾರ್ಯ ಜೋಶಿ ಅವರು ಮನೋವೈಜ್ಞಾನಿಕ ನೆಲೆಯಲ್ಲಿ ವಿವರವಾಗಿ ಸಮರ್ಥಿಸಿದ್ದಾರೆ.

ಶುಭರಾಯರ ಈ ಕ್ರಾಂತಿಕಾರಿ ಮನೋಭಾವವೇ ಚಿತ್ರಕಲೆಯಲ್ಲೂ ಪ್ರತ್ಯೇಕವಾದ ಸ್ಥಾನವೊಂದನ್ನು – ಅವರದೇ ಆದ ಸಂಪ್ರದಾಯ ಚಿತ್ರ ಶೈಲಿಯಲ್ಲಿ; ಜನಪದ ಆಚರಣೆಯ ಅಂಗವಾಗಿ – ಗುರುತಿಸಿಕೊಳ್ಳಲು ಅವರಿಗೆ ಸಾಧ್ಯವಾಯಿತು. ಈ ಕಾರಣದಿಂದಲೇ ಕರ್ನಾಟಕ ಸಂಪ್ರದಾಯ ಚಿತ್ರಕಲೆಯ ಉಗಮವನ್ನು ವ್ಯಕ್ತಿನಾಮದ ಮೂಲಕ ಕಲಾವಿದ ಹಾಗೂ ಕಲಾಕೃತಿಗಳನ್ನು ಗುರುತಿಸುವ ಐತಿಹಾಸಿಕ ಸ್ಥಾನ ಶುಭರಾಯರಿಂದಲೇ ಆರಂಭಿಸಬಹುದಾಗಿದೆ.

ಲೇಖಕರ ಕಿರು ಪರಿಚಯ

ಬುವಾ ಪಿ.ಜೆ.

ಮೂಲತಃ ಅಮರಾವತಿಯವರಾದ ಬುವಾ ಮನೆತನದವರು ಕಾರಣಾಂತರದಿಂದ ಊರು ತ್ಯಜಿಸಿ ಸೊಲ್ಲಾಪುರಕ್ಕೆ ಬಂದು ಸಂತ ಶ್ರೀ ಶುಭರಾಯರ ದೈವಿಕ ವ್ಯಕ್ತಿತ್ವಕ್ಕೆ ಮನಸೋತು, ಮಠದಲ್ಲಿಯೇ ನೆಲೆ ನಿಂತಿದ್ದು ಮಠದ ಆಡಳಿತವನ್ನು ಇಂದಿಗೂ ಈ ಮನೆತನದವರೇ ನೋಡಿಕೊಳ್ಳುತ್ತಿದ್ದಾರೆ. ಐದನೆಯ ಪೀಳಿಗೆಯವರಾದ ಪಿ.ಜೆ. ಬುವಾ ಅವರು ಶುಭರಾಯರ ಚಿತ್ರಗಳನ್ನು ಹೊರ ಪ್ರಪಂಚಕ್ಕೆ ಪರಿಚಯಿಸಿದರಲ್ಲದೆ, ಹಲವಾರು ಪ್ರಮುಖ ನಗರಗಳಲ್ಲಿ ಪ್ರದರ್ಶಿಸಿಯೂ ಇದ್ದಾರೆ. ಚಿತ್ರಗಳ ಮೌಲ್ಯ ಅರಿತ ಶ್ರೀಯುತರು ಜತನದಿಂದ ಈ ಚಿತ್ರಗಳನ್ನು ಕಾಪಾಡುತ್ತಿದ್ದಾರೆ.

ಡಾ. ಬಾಬುರಾವ್ ಸಾದ್ವೇಲ್ಕರ್

ಸ್ವತಃ ಕಲಾವಿದರೂ, ಬರಹಗಾರರೂ ಆದ ಬಾಬುರಾವ್ ಅವರು 1952ರಲ್ಲಿ ಮುಂಬಯಿಯ ಜೆ.ಜೆ. ಶಾಲೆಯಿಂದ ಚಿತ್ರಕಲೆಯಲ್ಲಿ ಡಿಪ್ಲೊಮಾ ಪದವಿ ಪಡೆದು ಅಮರಿಕೆಯಲ್ಲಿ ಆಧುನಿಕ ಕಲಾವಿದ್ಯಾಭ್ಯಾಸದ ಬಗೆಗೆ ಹೆಚ್ಚಿನ ತರಬೇತಿ ಪಡೆದು ಬಂದರು. ಮಹಾರಾಷ್ಟ್ರ ಸರ್ಕಾರದಲ್ಲಿ ಕಲಾ ನಿರ್ದೇಶಕರಾಗಿ (ಡೈರೆಕ್ಟರ್ ಆಫ್ ಆರ್ಟ್ಸ್)ದ್ದ ಅನುಭವ ಇವರಿಗಿದೆ. ಹಲವಾರು ಏಕವ್ಯಕ್ತಿ ಪ್ರದರ್ಶನಗಳನ್ನು ಮಾಡಿರುವ ಶ್ರೀಯುತರು ಟೋಕಿಯೋ, ಮಾಸ್ಕೋ, ಸೈಗಾನ್, ನೈರೋಬಿ, ವೆನಿಸ್, ಪ್ಯಾರಿಸ್ ಇತ್ಯಾದಿ ಹಲವಾರು ವಿದೇಶಗಳಲ್ಲಿ ನಡೆದ ಕಲಾ ಪ್ರದರ್ಶನಗಳಿಗೆ ಅತಿಥಿ ಕಲಾವಿದರಾಗಿ ಭಾಗವಹಿಸಿದ್ದಾರೆ. ಜೆ.ಜೆ. ಶಾಲೆಯಲ್ಲಿ ಕೆಲಕಾಲ ಅಧ್ಯಾಪಕರೂ ಆಗಿದ್ದ ಬಾಬೂರಾಯರು ಕಲೆ ಕುರಿತಂತೆ ದೂರದರ್ಶನಕ್ಕಾಗಿ ಹಲವಾರು ಕಾರ್ಯಕ್ರಮಗಳನ್ನು ರೂಪಿಸಿಕೊಟ್ಟಿದ್ದಾರೆ. ಅವುಗಳಲ್ಲಿ ರಾಜಸ್ತಾನದ ಜನಪದ ಚಿತ್ರಕಲಾ ಪ್ರಕಾರಗಳಲ್ಲಿ ಒಂದಾದ 'ಚಿತ್ರಕಲೆ'ಗಳನ್ನು ಕುರಿತ ಕಾರ್ಯಕ್ರಮ ಮುಖ್ಯವಾದುದು.

ದೇಸಾಯಿ ಎನ್.ಸಿ. :

ಚಿಕ್ಕಂದಿನಿಂದಲೇ ಕಲೆಯ ಬಗೆಗೆ ಗೀಳು ಇದ್ದು 1948ರಲ್ಲಿಯೇ ಮುಂಬಯಿಗೆ ಹೋಗಿ ಜೆ.ಜೆ. ಕಲಾಶಾಲೆಯ ಡಿಪ್ಲೊಮಾ ಪದವಿಯನ್ನು ನೂತನ ಕಲಾ ಮಂದಿರದಲ್ಲಿ ದಂಡಾವತಿ ಮಠ್ ಅವರ ಮಾರ್ಗದರ್ಶನದಲ್ಲಿ ಪೂರೈಸಿದ ದೇಸಾಯಿಯವರು

ಸುಮಾರು 40 ವರ್ಷಗಳು ಮುಂಬಯಿಯನ್ನೇ ತಮ್ಮ ಕಾರ್ಯ ಕ್ಷೇತ್ರವನ್ನಾಗಿಸಿಕೊಂಡವರು. ವಾಣಿಜ್ಯ ಕಲೆಯನ್ನು ವೃತ್ತಿಯಾಗಿ ಸ್ವೀಕರಿಸಿದರಾದರೂ ನೈಜ ಶೈಲಿಯಲ್ಲಿ ಅನೇಕ ಕೃತಿಗಳನ್ನು ರಚಿಸಿ, ಪ್ರದರ್ಶಿಸಿ, ಬಹುಮಾನಗಳನ್ನು ಪಡೆದಿದ್ದಾರೆ. ಹಲವಾರು ಪ್ರಮುಖ ಪತ್ರಿಕೆಯಲ್ಲಿ ಶ್ರೀಯುತರ ಕಲಾಕೃತಿಗಳು ಪ್ರಕಟವಾಗಿದೆಯಾದರೂ ಚಿತ್ರಕಲೆ ಕುರಿತ ಇವರ ಲೇಖನಗಳು ಅಷ್ಟೇ ಪ್ರಸಿದ್ಧವಾಗಿವೆ. ಹೆಚ್ಚು ಜನರಿಗೆ ತಿಳಿದಿಲ್ಲದ ಆದರೆ ಕಲಾತ್ಮಕ ದೃಷ್ಟಿಯಿಂದ ಅತ್ಯುತ್ತಮವಾದ ವಾರಿಲಿ, ಪಟ್ಟಾ ಚಿತ್ರ ಇತ್ಯಾದಿಗಳನ್ನು ಕನ್ನಡಿಗರಿಗೆ ಸಚಿತ್ರವಾಗಿ ಪರಿಚಯಿಸಿಕೊಟ್ಟಿದ್ದಾರೆ. ಅಂತೆಯೇ ಶುಭರಾಯರ ಬಗೆಗೆ ಹಲವಾರು ಲೇಖನಗಳನ್ನು ಬರೆದು ಅವರ ಕಲೆ ಮತ್ತು ಜೀವನದ ಬಗೆಗೆ ಪ್ರಚುರಪಡಿಸಿದರಲ್ಲದೆ ಸೊಲ್ಲಾಪುರದಲ್ಲಿ ಈ ಒಂದು ವಿಚಾರ ಸಂಕಿರಣ ನಡೆಸಲು ಕಾರಣಕರ್ತರೂ ಆಗಿದ್ದಾರೆ.

ಡಾ. ಭಗವಾನ್ ದಾಸ್ ತಿವಾರಿ

ಶೋಧ ವಿದ್ಯಾನಿಷ್ಠ ಸಾಹಿತ್ಯ ಮಹೋಪಾಧ್ಯಾಯ, ಶಿಕ್ಷಾ ವಿಶಾರದಾ, ತತ್ವ ಭೂಷಣ ಇತ್ಯಾದಿ ಗೌರವಗಳಿಗೆ ಪಾತ್ರರಾದ ಡಾ. ತಿವಾರಿಯವರು ಖ್ಯಾತ ಸಂಶೋಧಕರು. ಸೊಲ್ಲಾಪುರದ ಸಂಶೋಧನಾ ಕೇಂದ್ರದ ನಿರ್ದೇಶಕರು. 250ಕ್ಕೂ ಹೆಚ್ಚು ಸಂಶೋಧನಾ ಲೇಖನಗಳನ್ನು, 34 ಗ್ರಂಥಗಳನ್ನು ರಚಿಸಿದ್ದು ಅವುಗಳಲ್ಲಿ ಕೆಲವು ಕನ್ನಡವೂ ಸೇರಿದಂತೆ ಹಲವಾರು ಭಾಷೆಗಳಿಗೆ ಅನುವಾದಗೊಂಡಿವೆ. ಮೂರು ರಾಷ್ಟ್ರೀಯ ಪ್ರಶಸ್ತಿಗಳು ಸೇರಿದಂತೆ ಹಲವಾರು ಪುರಸ್ಕಾರಗಳನ್ನು ಪಡೆದಿದ್ದಾರೆ. ರಾಷ್ಟ್ರ, ಅಂತರರಾಷ್ಟ್ರ ಮಟ್ಟದಲ್ಲಿ ಸಂಶೋಧನಾ ಲೇಖನಗಳೂ ಸೇರಿದಂತೆ ಸಾವಿರಾರು ಉಪನ್ಯಾಸಗಳನ್ನು ಮಾಡಿರುವ ಶ್ರೀಯುತರು ರಾಷ್ಟ್ರೀಯ ನಾಯಕರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. 1964ರಿಂದ 85ರವರೆಗೆ ಶುಭರಾಯರನ್ನು ಕುರಿತು ತಲಸ್ಪರ್ಶಿಯಾದ ಸಂಶೋಧನೆಯನ್ನು ಮಾಡಿರುವ ಡಾ. ತಿವಾರಿಯವರು ಶುಭರಾಯರ ಜೀವನ ಮತ್ತು ಕಲೆಯ ಬಗೆಗೆ ಅಧಿಕೃತವಾಗಿ ಮಾತಾಡಬಲ್ಲವರಾಗಿದ್ದು ಆ ದಿಸೆಯಲ್ಲಿ ಇನ್ನೂ ಹೆಚ್ಚಿನ ವ್ಯಾಸಂಗವನ್ನು ನಡೆಸಿದ್ದಾರೆ.

ಪ್ರೊ. ಸಿ.ಡಿ. ಜೋಷಿ

ಪ್ರೊ. ಸಿ.ಡಿ. ಜೋಷಿಯವರು ಗುಲ್ಬರ್ಗಾ ಜಿಲ್ಲೆಯವರು. ಖ್ಯಾತ ಕಲಾವಿದ ಅಲಂದ್‌ಕರ್ ಅವರ ಶಿಷ್ಯರು. ಕನ್ನಡಿಗರಾದ ಜೋಷಿಯವರು ಸದ್ಯಕ್ಕೆ ಕೊಲ್ಲಾಪುರದಲ್ಲಿ ಪ್ರಾಚಾರ್ಯರಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಕನ್ನಡ, ಮರಾಠಿ, ಸಂಸ್ಕೃತ, ಇಂಗ್ಲಿಷ್ ಭಾಷೆಯನ್ನು ಸಮರ್ಥವಾಗಿ ಬಲ್ಲ ಶ್ರೀಯುತರು ಶುಭರಾಯರ ಬಗ್ಗೆ ಅಧಿಕೃತವಾಗಿ ಮಾತನಾಡಬಲ್ಲ ಪಾಂಡಿತ್ಯವನ್ನು ಹೊಂದಿರುವರು. ಸಾಹಿತ್ಯ, ಮನೋವಿಜ್ಞಾನ, ಮಾನವ ಶಾಸ್ತ್ರ ಇತ್ಯಾದಿಗಳ ಹಿನ್ನೆಲೆಯಲ್ಲಿ ಶುಭರಾಯರ ಜೀವನ ಹಾಗೂ ಕೃತಿಗಳನ್ನು ಇರಿಸಿ ವಿಸ್ತಾರವಾಗಿ ಅಧ್ಯಯನ ಮಾಡಿರುವ ಶ್ರೀ ಜೋಷಿ ಅವರ ಲೇಖನ ಕನ್ನಡದಲ್ಲಿಯೇ ಒಬ್ಬ ಕಲಾವಿದನನ್ನು ಕುರಿತು ರಚಿಸಿದ ಈ ಬಗೆಯ ಲೇಖನಗಳಲ್ಲಿ ಪ್ರಥಮವಾದುದು, ಅಪೂರ್ವವಾದುದು.